ವಾರ್ಷಿಕ ಚಂದಾ ರೂ.25/-

# ಮಾಸಿಕ ಜನಪದ

ಸಂಪುಟ-07 • ಸಂಚಿಕೆ-04 • ಜನವರಿ 2024



## ಜನಪರ ಕಾಳಜಿಗೆ ನಿದರ್ಶನ

# ಮುಖ್ಯಮಂತ್ರಿಗಳ ಜನಸ್ಪಂದನ

Downloaded From:www.kpscvaani.com



ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರಾಜ್ಯಕ್ಕೆ ಬರ ಪರಿಹಾರ ಬಿಡುಗಡೆ ಮಾಡುವಂತೆ ಮನವಿ ಮಾಡಲು ಪ್ರಧಾನಿ ನರೇಂದ್ರ ಮೋದಿ ಅವರನ್ನು ದೆಹಲಿಯಲ್ಲಿ ಡಿಸೆಂಬರ್ 19 ರಂದು ಭೇಟಿ ಆದ ಸಂದರ್ಭ. ಈ ಸಂದರ್ಭದಲ್ಲಿ ಕಂದಾಯ ಸಚಿವರಾದ ಕೃಷ್ಣಬೈರೇಗೌಡ ಅವರು ಉಪಸ್ಥಿತರಿದ್ದರು.



ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರಾಜ್ಯಕ್ಕೆ ಬರ ಪರಿಹಾರ ಬಿಡುಗಡೆ ಮಾಡುವಂತೆ ಮನವಿ ಮಾಡಲು ಗೃಹಸಚಿವರಾದ ಅಮಿತ್ ಷಾ ಅವರನ್ನು ದೆಹಲಿಯಲ್ಲಿ ಡಿಸೆಂಬರ್ 20 ರಂದು ಭೇಟಿ ಆದ ಸಂದರ್ಭ. ಈ ಸಂದರ್ಭದಲ್ಲಿ ರಾಜ್ಯ ಸಭಾ ಸದಸ್ಯರಾದ ಡಾ.ಎಲ್.ಹನುಮಂತಯ್ಯ ಹಾಗೂ ಜಿ.ಸಿ.ಚಂದ್ರಶೇಖರ್ ಅವರು ಉಪಸ್ಥಿತರಿದ್ದರು.

Downloaded From:www.kpscvaani.com

ವಾರ್ಷಿಕ ಚಂದಾ ರೂ.25/-

# ವಾರ್ತಾ ಜನಪದ

ಸಂಪುಟ-07 • ಸಂಚಿಕೆ-04 • ಜನವರಿ 2024



06 ಬರ, ಉತ್ತರ ಕರ್ನಾಟಕದ ಅಭಿವೃದ್ಧಿ ಬೆಳಗಾವಿ ಅಧಿವೇಶನದ ಕೇಂದ್ರ ಬಿಂದು
• ಉಮೇಶ್ ಕೋಲಿಗೆರೆ

11 ಜನಪರ ಕಾಳಜಿಗೆ ನಿದರ್ಶನ ಮುಖ್ಯಮಂತ್ರಿಗಳ ಜನಸ್ಪಂದನ



15 ಸರ್ಕಾರದ ಐದನೇ ಗ್ಯಾರಂಟಿ ಯೋಜನೆಯಾದ 'ಯುವನಿಧಿ'ಗೆ ಚಾಲನೆ
• ಎಸ್. ಆರ್. ಆರಾಧ್ಯ

18 ವಿಶ್ವದ ಆಕರ್ಷಣೆಯಾದ ಮೂರು ದಿನಗಳ ಬೆಂಗಳೂರು ಟೆಕ್ ಸಮ್ಮಿಟ್
• ಅ.ನಾ.ಪ್ರಹ್ಲಾದರಾವ್

22 ಬೆಂಗಳೂರು ಕಂಬಳದ ರೋಮಾಂಚನ ನೋಟ
• ಪ್ರಶಾಂತ ಕುಮಾರ್ ಎಂ.ಎನ್

25 ಬೆಳಗಾವಿ ಸುವರ್ಣಸೌಧಕ್ಕೆ ಹೊಸಬೆಳಕು!
• ಗುರುನಾಥ ಕಡಬೂರ



26 ಸಿಂಹ ಶೀರ್ಷದ "ರಾಷ್ಟ್ರ ಲಾಂಛನ"
• ಪ್ರಹ್ಲಾದ ಪರ್ವತಿ

29 ಆಯುಷ್ಮಾನ್ ಆರೋಗ್ಯ ಕಾರ್ಡ್‌ಗೆ ಹೊಸ ರೂಪ
• ರಿಷಿಕೇಶ್ ಪಿ. ವಿ

31 ಅಕ್ರಮ ಸಾಗುವಳಿ ಮಂಜೂರಿಗೆ ಡಿಜಿಟಲ್ ಸ್ಪರ್ಶ
• ಲಕ್ಷ್ಮೀಕಾಂತರಾಜು ಎಂ ಜಿ

33 ಫ್ರೂಟ್ಸ್ ನೋಂದಣಿಯಲ್ಲಿ ಗದಗ ಜಿಲ್ಲೆ ರಾಜ್ಯಕ್ಕೆ ಪ್ರಥಮ
• ವಸಂತ ಬಿ. ಮಡ್ಲೂರ

35 ಮತ್ತೆ ತಲೆ ಎತ್ತಿದ ಕೋವಿಡ್ ಉಪತಳಿ ನಿರ್ಲಕ್ಷ್ಯ ಬೇಡ: ಎಚ್ಚರಿಕೆ ಇರಲಿ
• ಮಯೂರ್ ಮಂಜುನಾಥ್



38 ಅಭಿನಯದ ಮೋಡಿಯಿಂದ ಮನಸೂರೆಗೊಳಿಸಿದ ಅದ್ಭುತ ನಟಿ
• ಅ. ನಾ. ಪ್ರಹ್ಲಾದರಾವ್

40 ಭ್ರೂಣಲಿಂಗ ಪತ್ತೆ ಕಾನೂನು ಬಾಹಿರ ಅಪರಾಧ
• ಪ್ರಸಾದ್. ಎನ್

43 ಬೆಳಗಾವಿಯಲ್ಲಿ ಸ್ವಾಮಿ ವಿವೇಕಾನಂದರ ಹೆಜ್ಜೆ ಗುರುತುಗಳು
• ದಿನೇಶ ನಾಯಕ್

47 ಅಂಚೆ ಚೀಟಿಗಳ ಹಬ್ಬ 'ಕರ್ನಾಫೆಕ್ಸ್'ಗೆ ಸಜ್ಜುಗೊಂಡ ಬೆಂಗಳೂರು
• ಎನ್. ಜಗನ್ನಾಥ ಪ್ರಕಾಶ್

50 ಪದಬಂಧ-50

ಪ್ರಧಾನ ಸಂಪಾದಕರು
ಹೇಮಂತ್ ಎಂ ನಿಂಬಾಳ್ಕರ್, ಐ.ಪಿ.ಎಸ್
ಆಯುಕ್ತರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ಸಂಪಾದಕೀಯ ಸಲಹೆ
ಪಲ್ಲವಿ ಹೊನ್ನಾಪುರ (ಹೆ.ಪ್ರ)
ಜಂಟಿ ನಿರ್ದೇಶಕರು

ಸಹನಾ ಎಂ.
ಉಪ ನಿರ್ದೇಶಕರು

ಉಪ ಸಂಪಾದಕರು
ಬಿ. ಜಿ. ಪೂರ್ಣಿಮ

ಪ್ರಕಾಶಕರು
ಆಯುಕ್ತರು
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
#17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001
Ph : 080 22028023
email : varthajanapada@yahoo.co.in
https://dipr.karnataka.gov.in

ಮುದ್ರಕರು
ಲಾವಣ್ಯ ಮುದ್ರಣ
# 19, ವಿದ್ಯಾಪೀಠ ವೃತ್ತ, ಬನಶಂಕರಿ 1ನೇ ಹಂತ, ಬೆಂಗಳೂರು–50

ಲೇಖಕರ ಅಭಿಪ್ರಾಯಗಳು ಸರ್ಕಾರದ ಅಭಿಪ್ರಾಯಗಳಲ್ಲ

Downloaded From:www.kpscvaani.com

# ನಿಮ್ಮ ಅನಿಸಿಕೆ

ನೂತನ ಸರ್ಕಾರಕ್ಕೆ ಆರು ತಿಂಗಳು ಕಳೆದಿರುವ ಹಿನ್ನೆಲೆಯಲ್ಲಿ ವಾರ್ತಾಜನಪದ ಡಿಸೆಂಬರ್ ಸಂಚಿಕೆಯಲ್ಲಿ ಪ್ರಕಟಿಸಲಾಗಿರುವ ಆರು ತಿಂಗಳ ಅನನ್ಯ ಸಾಧನೆಯ ಕಿರು ನೋಟವು ಸರ್ಕಾರದ ಪ್ರಮುಖ ಸಾಧನೆಗಳ ಮೇಲೆ ಬೆಳಕು ಚೆಲ್ಲಿದೆ. ತಮ್ಮ ಸರ್ಕಾರ ಬಂದರೆ ಜಾರಿಗೊಳಿಸುವುದಾಗಿ ಭರವಸೆ ನೀಡಿದ್ದ 5 ಗ್ಯಾರಂಟಿ ಯೋಜನೆಗಳಲ್ಲಿ ಈಗಾಗಲೇ ನಾಲ್ಕು ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಿರುವುದು ಸರ್ಕಾರಕ್ಕೆ ಇರುವ ಬದ್ಧತೆಯನ್ನು ತಿಳಿಸುತ್ತದೆ. ಈ ಸರ್ಕಾರವು ಬಡವರು, ರೈತರು ಮತ್ತು ಮಹಿಳೆಯರ ಪರವಾದ ಸರ್ಕಾರ ಎಂಬುದನ್ನು ಸಾಬೀತು ಪಡಿಸಿದೆ.

**–ಉಷಾ. ಎಸ್. ಆರ್, ಶ್ರೀರಂಗಪಟ್ಟಣ**

* * *

ಇತ್ತೀಚೆಗೆ ಹುಲಿ ಉಗುರು ಧರಿಸಿದವರ ವಿರುದ್ಧ ವನ್ಯ ಜೀವಿ ರಕ್ಷಣಾ ಕಾಯ್ದೆಯಡಿ ಕೇಸ್ ಹಾಕಲಾಗಿತ್ತು. ಅವರಲ್ಲಿ ಕೆಲವರು ಹುಲಿ ಉಗುರು ಇಟ್ಟುಕೊಳ್ಳುವುದು ಅಪರಾಧ ಎಂದು ಗೊತ್ತಿರಲಿಲ್ಲ ಎಂದರು. ಈ ಹಿನ್ನೆಲೆಯಲ್ಲಿ ಜನರಿಗೆ ವನ್ಯ ಜೀವಿ ರಕ್ಷಣಾ ಕಾಯ್ದೆಯಡಿ ಯಾವುದೆಲ್ಲ ಅಪರಾಧ ಆಗುತ್ತದೆ ಎಂಬುದನ್ನು ನಂಜುಂಡಪ್ಪ ಅವರು ಬರೆದಿರುವ 'ವನ್ಯ ಜೀವಿಗಳ ಅಂಗಾಂಗ ಇರಿಸಿಕೊಳ್ಳುವುದು ಅಪರಾಧ' ಲೇಖನವು ಜನರಿಗೆ ಹೆಚ್ಚಿನ ಮಾಹಿತಿಯನ್ನು ಒದಗಿಸಿದೆ.

**–ಪವನ್ ಕುಮಾರ್, ಹೆಗ್ಗಡದೇವನ ಕೋಟೆ**

* * *

ಅಂತೂ ಇಂತೂ ಯರಗೋಳು ಕುಡಿಯುವ ನೀರಿನ ಯೋಜನೆಯನ್ನು ಮುಖ್ಯಮಂತ್ರಿ ಅವರು ಉದ್ಘಾಟನೆಗೊಳಿಸಿದ್ದು ನಮಗೆ ಅತ್ಯಂತ ಸಂತಸ ತಂದಿತು. ಈ ಯೋಜನೆಯಿಂದಾಗಿ ಕುಡಿಯುವ ನೀರಿಗೆ ತುಂಬಾ ತೊಂದರೆಯನ್ನು ಅನುಭವಿಸುತ್ತಿದ್ದ ಕೋಲಾರ, ಬಂಗಾರಪೇಟೆ, ಮಾಲೂರು ಪಟ್ಟಣಗಳು ಮತ್ತು ಸುತ್ತಮುತ್ತಲಿನ 45 ಗ್ರಾಮಗಳಿಗೆ ಕುಡಿಯುವ ನೀರು ಸಿಕ್ಕಂತ್ತಾಗಿದೆ.

ಕುಡಿಯುವ ನೀರನ್ನು ಟ್ಯಾಂಕರ್ ಮೂಲಕ ಸರಬರಾಜು ಮಾಡಲಾಗುತ್ತಿದ್ದ ಈ ಭಾಗದ ಜನರಿಗೆ ಈಗ ಭಗೀರಥನೇ ತಮ್ಮ ಊರಿಗೆ ಪ್ರತ್ಯಕ್ಷನಾದಷ್ಟು ಸಂತಸವಾಗಿದೆ. ಈ ಯೋಜನೆಗಾಗಿ ಶ್ರಮಿಸಿದ ಎಲ್ಲರಿಗೂ ತಮ್ಮ ಪತ್ರಿಕೆಯ ಮೂಲಕ ಧನ್ಯವಾದಗಳನ್ನು ಸಲ್ಲಿಸುತ್ತೇನೆ.

**–ದಿವ್ಯ. ಕೆ. ಎಂ, ಕೋಲಾರ**

* * *

ಉಳ್ಳವರು ಶಿವಾಲಯವ ಮಾಡುವರು, ನಾನೇನು ಮಾಡಲಿ ಬಡವನಯ್ಯ, ಎಂಬ ವಚನದಂತೆ ಬಡವರು ದೂರದ ಊರುಗಳಿಗೆ ಸ್ಲೀಪರ್ ಬಸ್‌ಗಳಲ್ಲಿ ಸಂಚರಿಸಲು ಆಗುತ್ತಿರಲಿಲ್ಲ. ಅದಕ್ಕೆ ಕಾರಣ ಹೆಚ್ಚಿನ ಸ್ಲೀಪರ್ ಬಸ್‌ಗಳು ಏಸಿ ಬಸ್‌ಗಳಾಗಿದುದ್ದರಿಂದ ಅದರ ದರ ಹೆಚ್ಚು ಇರುತಿತ್ತು. ಆದರೆ ಕೆಎಸ್‌ಆರ್‌ಟಿಸಿಯು ಬಡವರು ಮತ್ತು ಮಧ್ಯಮ ವರ್ಗದವರನ್ನು ಗಮನದಲ್ಲಿಟ್ಟುಕೊಂಡು ನಾನ್ ಏಸಿ ಸ್ಲೀಪರ್ ಬಸ್‌ಗಳನ್ನು ಲೋಕಾರ್ಪಣೆಗೊಳಿಸಿರುವುದು ಉತ್ತಮ ಬೆಳವಣಿಗೆಯಾಗಿದೆ.

**–ಲಕ್ಷ್ಮೀಶ, ಗದಗ**

* * *




ಡಿಸೆಂಬರ್ 2023 ರ ವಾರ್ತಾ ಜನಪದ ಸಂಚಿಕೆಯಲ್ಲಿ ಪ್ರಕಟಿಸಲಾಗಿರುವ 'ಏಡ್ಸ್ ನಿಯಂತ್ರಣಕ್ಕೆ ಜನಜಾಗೃತಿಯೇ ಮದ್ದು' ಲೇಖನವು ಜನ ಜಾಗೃತಿಯನ್ನು ಮೂಡಿಸುವಂತಿತ್ತು. ಏಡ್ಸ್ ಕಾಯಿಲೆ ಹೇಗೆ ಹರಡುತ್ತದೆ ಮತ್ತು ಈ ಕಾಯಿಲೆಯಿಂದ ದೂರ ಇರಲು ಏನೆಲ್ಲಾ ಮುಂಜಾಗ್ರತೆ ವಹಿಸಬೇಕು ಎಂಬುದನ್ನು ಲೇಖಕರು ಸ್ಪಷ್ಟವಾಗಿ ಮಾಹಿತಿಯನ್ನು ನೀಡಿದ್ದಾರೆ.

**–ಸೋಮಶೇಖರ್ ಹೆಚ್.ಎಲ್, ಹಾಸನ**

* * *

ತಮ್ಮ ವಾರ್ತಾ ಜನಪದ ಪತ್ರಿಕೆಯಲ್ಲಿ ಪ್ರಕಟವಾಗಿರುವ ಲೇಖನದಿಂದಾಗಿ ಕನ್ನಡದ ಮೊಟ್ಟ ಮೊದಲ ರಾಷ್ಟ್ರೀಯವಾದಿ ಪತ್ರಿಕೆಯಾದ ಚಂದ್ರೋದಯದ ಇತಿಹಾಸವನ್ನು ಇದೇ ಮೊದಲ ಬಾರಿಗೆ ತಿಳಿದುಕೊಳ್ಳಲು ಸಾಧ್ಯವಾಯಿತು. ಇಂತಹ ವಿಶೇಷ ಲೇಖನವನ್ನು ಪ್ರಕಟಿಸಿದಕ್ಕಾಗಿ ಪತ್ರಿಕಾ ಬಳಗಕ್ಕೆ ಧನ್ಯವಾದಗಳು.

**–ಶಶಿಧರ್ ಎಂ. ಎನ್, ಮೈಸೂರು**

* * *

ದೇವರು ನೀಡಿರುವ ಅತ್ಯಂತ ಶ್ರೇಷ್ಠ ಜನ್ಮ ಎಂದರೆ ಮನುಷ್ಯ ಜನ್ಮ. ಮುಂದಿನ ಜನ್ಮ ಇದೆಯೋ ಇಲ್ಲವೋ ಎಂಬುದು ಗೊತ್ತಿಲ್ಲ. ಅಂತಹದರಲ್ಲಿ ಕ್ಷುಲ್ಲಕ ಕಾರಣಗಳಿಗಾಗಿ ಆತ್ಮಹತ್ಯೆ ಮಾಡಿಕೊಳ್ಳುವ ಮೂಲಕ ಅತ್ಯಮೂಲ್ಯ ಜೀವವನ್ನು ಕೊನೆಗೊಳಿಸಿಕೊಳ್ಳುವುದು ಸರಿಯಲ್ಲ. ಈ ನಿಟ್ಟಿನಲ್ಲಿ ಕರ್ನಾಟಕ ರಾಜ್ಯ ಮಾನಸಿಕ ಆರೋಗ್ಯ ಪ್ರಾಧಿಕಾರದ ಮನೋ ವೈದ್ಯಾಧಿಕಾರಿಯಾದ ಡಾ. ಹರ್ಷಿತಾ ವಿ. ಹೆಚ್ ಅವರು 'ಆತ್ಮಹತ್ಯೆಯು ಮನುಕುಲದ ನಷ್ಟ' ಎಂಬ ಶಿರೋನಾಮೆಯಲ್ಲಿ ಬರೆದಿರುವ ಲೇಖನವು ಆತ್ಮಹತ್ಯೆಗೆ ಪ್ರಯತ್ನಿಸುವವರನ್ನು ಅದರಿಂದ ದೂರ ತರುವುದು ಹೇಗೆ ಎಂಬುದರ ಮೇಲೆ ಅತ್ಯಂತ ಸೂಕ್ತವಾಗಿ ಬೆಳಕು ಚೆಲ್ಲಿದ್ದಾರೆ.

**ಹೇಮಲತಾ, ದಾವಣಗೆರೆ**

ಈ ಬಾರಿಯ ಕೃಷಿ ಮೇಳವು ಹೆಚ್ಚು ಆಕರ್ಷಣೀಯವಾಗಿತ್ತು. ವಾರ್ತಾ ಜನಪದದಲ್ಲಿ ನಾಲ್ಕು ದಿನಗಳ ಕಾಲ ಜರುಗಿದ ಕೃಷಿ ಮೇಳದ ಸಂಕ್ಷಿಪ್ತ ಮಾಹಿತಿಯನ್ನು ನೀಡಿರುವ ಲೇಖನ ಉತ್ತಮವಾಗಿತ್ತು. ಲೇಖಕರು ಹೇಳಿರುವಂತೆ ಕೃಷಿ ಮೇಳವು ಮಹಾನಗರಿಯರಿಗೆ ಮೋಜಿನ ಪ್ರವಾಸವಾಗಿದ್ದರೆ, ಅನ್ನದಾತರಿಗೆ ಮಾಹಿತಿಯ ಕಣಜವಾಗಿತ್ತು.

**–ಚಂದ್ರಕುಮಾರ್, ಹೊಳೆನರಸೀಪುರ**

'ವಾರ್ತಾ ಜನಪದ' ಮಾಸಿಕ ಈಗ **www.kanaja.in**ನಲ್ಲಿ ಲಭ್ಯ

ವಾರ್ತಾ ಜನಪದ ಮಾಸಿಕಕ್ಕೆ ವಾರ್ಷಿಕ ಚಂದಾದಾರರಾಗಲು ಬಯಸುವವರು ರೂ 25/– ಅನ್ನು ಪಾವತಿಸಲು ಕಡ್ಡಾಯವಾಗಿ ಸೇವಾಸಿಂಧುವಿನ **https://sevasindhu.karnataka.gov.in** ಮೂಲಕ ಆನ್ ಲೈನ್ ಅರ್ಜಿಯನ್ನು ಸಲ್ಲಿಸಬೇಕು.

ವಾರ್ತಾ ಜನಪದ ಪತ್ರಿಕೆಯ ಸಾಫ್ಟ್ ಕಾಪಿಯನ್ನು ಇ–ಮೇಲ್ ಮೂಲಕ ಉಚಿತವಾಗಿ ಚಂದಾದಾರರಾಗಲು ಇಚ್ಛಿಸುವವರು ತಮ್ಮ ಇ–ಮೇಲ್ ವಿಳಾಸವನ್ನು 9480841210 ಗೆ ಕಳುಹಿಸಿ ನೋಂದಾಯಿಸಿ ಕೊಳ್ಳಬಹುದು.

Downloaded From:www.kpscvaani.com



# ಸಂಪಾದಕೀಯ...

ಪ್ರಿಯ ಓದುಗ ಮಿತ್ರರೇ,

ಎಲ್ಲರಿಗೂ ಹೊಸ ವರ್ಷದ ಹಾಗೂ ಮಕರ ಸಂಕ್ರಾಂತಿ ಹಬ್ಬದ ಶುಭಾಶಯಗಳು.

ಡಿಸೆಂಬರ್ 4 ರಿಂದ 15 ರವರೆಗೆ ಎರಡು ವಾರಗಳ ಕಾಲ ಬೆಳಗಾವಿಯಲ್ಲಿ ನಡೆಸಲಾದ ಚಳಿಗಾಲ ಅಧಿವೇಶನವು ಯಶಸ್ವಿಯಾಗಿ ಜರುಗಿತಲ್ಲದೆ, ಹಲವು ಪ್ರಮುಖ ವಿಧೇಯಕಗಳನ್ನು ಅಂಗೀಕರಿಸಲಾಯಿತು. ಉತ್ತರ ಕರ್ನಾಟಕ ಮತ್ತು ಕಲ್ಯಾಣ ಕರ್ನಾಟಕ ಭಾಗದ ಅಭಿವೃದ್ಧಿ ಹಾಗೂ ರಾಜ್ಯದ ಬರ ಪರಿಸ್ಥಿತಿ ಕುರಿತ ಚರ್ಚೆಗೆ ಸಂಬಂಧಿಸಿದಂತೆ ಉತ್ತರಿಸಿದ ಮುಖ್ಯಮಂತ್ರಿಗಳು ಹಲವು ಪ್ರಮುಖ ಘೋಷಣೆಗಳನ್ನು ಮಾಡಿದರು:

- ನಂಜುಂಡಪ್ಪನವರ ವರದಿಯ ಅನುಷ್ಠಾನ ಹಾಗೂ ಅದರ ಫಲಶ್ರುತಿಯನ್ನು ಅಧ್ಯಯನ ಮಾಡಲು ನುರಿತ ಅರ್ಥಶಾಸ್ತ್ರಜ್ಞರೊಬ್ಬರ ಅಧ್ಯಕ್ಷತೆಯಲ್ಲಿ ಹೈಪವರ್ [ಉನ್ನತಾಧಿಕಾರ ಸಮಿತಿ] ಕಮಿಟಿಯನ್ನು ರಚಿಸಲಾಗುವುದು.
- ಸಹಕಾರ ಬ್ಯಾಂಕುಗಳಲ್ಲಿರುವ ಮಧ್ಯಮಾವಧಿ ಮತ್ತು ದೀರ್ಘಾವಧಿ ಸಾಲದ ಅಸಲನ್ನು ಕಟ್ಟಿದರೆ ಸಂಪೂರ್ಣ ಬಡ್ಡಿಯನ್ನು ಮನ್ನಾ ಮಾಡಲಾಗುವುದು.
- ಉತ್ತರ ಕರ್ನಾಟಕದಲ್ಲಿ ಬೃಹತ್ ಕೈಗಾರಿಕೆಗಳನ್ನು ಸ್ಥಾಪಿಸುವ ಮೂಲಕ ಆರ್ಥಿಕತೆಗೆ ಉತ್ತೇಜನ ನೀಡಲು ಹಾಗೂ ಸ್ಥಳೀಯರಿಗೆ ಉದ್ಯೋಗ ಒದಗಿಸುವ ಸಲುವಾಗಿ ಬೆಳಗಾವಿ, ಧಾರವಾಡ, ರಾಯಚೂರು, ವಿಜಯಪುರದಲ್ಲಿ ಕೈಗಾರಿಕಾ ಕ್ಲಸ್ಟರ್ ಗಳು ಹಾಗೂ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿಗೆ ಕ್ರಮ.
- ಉತ್ತರ ಕರ್ನಾಟಕದಲ್ಲಿ ಪ್ರವಾಸೋದ್ಯಮದ ಸಮಗ್ರ ಅಭಿವೃದ್ಧಿಗೆ ಕ್ರಿಯಾಯೋಜನೆ ರೂಪಿಸಲಾಗುವುದು.
- ಧಾರವಾಡದ ವಾಲ್ಮಿ (ಜಲ ಮತ್ತು ನೆಲ ನಿರ್ವಹಣೆ ಸಂಸ್ಥೆ)ಯನ್ನು, Center of Excellence for Water Management ಆಗಿ ಉನ್ನತೀಕರಿಸಿ ಜಲ ಶಿಕ್ಷಣ, ಮಣ್ಣಿನ ಸವುಳು-ಜವುಳು ಸಮಸ್ಯೆ ನಿರ್ವಹಣೆ ಹಾಗೂ ರೈತರ ಆದಾಯ ಹೆಚ್ಚಳಕ್ಕೆ ಒತ್ತು ನೀಡಲಾಗುವುದು.

**ಯಶಸ್ವಿ ಜನಸ್ಪಂದನ :** ಸರ್ಕಾರಕ್ಕೆ ಆರು ತಿಂಗಳು ತುಂಬಿದ ನಂತರ ನವೆಂಬರ್ 23 ರಂದು ಮುಖ್ಯಮಂತ್ರಿಗಳು ಇದೇ ಮೊದಲು ದಿನವಿಡೀ ವ್ಯವಸ್ಥಿತವಾಗಿ ನಡೆಸಿದ ಜನಸ್ಪಂದನ ಕಾರ್ಯಕ್ರಮವು ಅತ್ಯಂತ ಜನ ಮೆಚ್ಚುಗೆಗೆ ಪಾತ್ರವಾಯಿತು. ಈ ಜನಸ್ಪಂದನ ಕಾರ್ಯಕ್ರಮಕ್ಕೆ ಸಮಸ್ಯೆಯನ್ನು ಹೊತ್ತು ಬಂದಿದ್ದ ಪ್ರತಿಯೊಬ್ಬರನ್ನು ಖುದ್ದು ಮುಖ್ಯಮಂತ್ರಿ ಅವರೇ ಸಂದರ್ಶಿಸಿ, ಅವರ ಸಮಸ್ಯೆಗೆ ಪರಿಹಾರ ಒದಗಿಸಿದ್ದು ಜನರಿಗೆ ಸಮಾಧಾನ ನೀಡಿತು. ಈ ಸಂದರ್ಭದಲ್ಲಿ ಜನರ ಕುಂದುಕೊರತೆಗಳನ್ನು ಸ್ಥಳೀಯವಾಗಿಯೇ ಬಗೆಹರಿಸಲು ಆದ್ಯತೆ ನೀಡಬೇಕು ಎಂದು ಮುಖ್ಯಮಂತ್ರಿಗಳು ಅಧಿಕಾರಿಗಳಿಗೆ ಸಲಹೆ ನೀಡಿದರು.

**ಯುವನಿಧಿ :** ರಾಜ್ಯ ಸರ್ಕಾರವು ಘೋಷಿಸಿದ ಪಂಚ ಗ್ಯಾರಂಟಿ ಯೋಜನೆಗಳ ಪೈಕಿ ನಾಲ್ಕು ಯೋಜನೆಗಳನ್ನು ಈಗಾಗಲೇ ಜಾರಿಗೊಳಿಸಿದೆ. ಈಗ ಜನವರಿ ಮಾಹೆಯಲ್ಲಿ ಕೊನೆಯ ಗ್ಯಾರಂಟಿ ಯೋಜನೆಯಾದ ಯುವನಿಧಿಗೆ ಚಾಲನೆ ನೀಡಲಿದೆ. 2023 ರಲ್ಲಿ ಪದವಿ ಪಡೆದು ಆರು ತಿಂಗಳಾದರೂ ಕೆಲಸ ಸಿಗದೆ ಕೆಲಸದ ಹುಡುಕಾಟದಲ್ಲಿರುವ ಪದವೀಧರರಿಗೆ ಮಾಸಿಕ 3000 ಮತ್ತು ಡಿಪ್ಲೊಮಾ ಪೂರ್ಣಗೊಳಿಸಿರುವವರಿಗೆ ಮಾಸಿಕ 1500 ರೂಗಳನ್ನು 2 ವರ್ಷಗಳ ಕಾಲ ಯುವನಿಧಿ ಯೋಜನೆಯಡಿ ಪಡೆಯಲಿದ್ದಾರೆ. ಈ ಯೋಜನೆಯಿಂದ ಅಂದಾಜು ಐದು ಲಕ್ಷ ಯುವಕ, ಯುವತಿಯರು ಸಹಾಯಧನವನ್ನು ಪಡೆದುಕೊಳ್ಳಲಿದ್ದು, ಈ ಯೋಜನೆಗೆ ಸರ್ಕಾರವು 1000 ಕೋಟಿ ರೂ ವೆಚ್ಚ ಮಾಡುವ ನಿರೀಕ್ಷೆ ಇದೆ.

**ಕೋವಿಡ್ 19 ಮುನ್ನೆಚ್ಚರಿಕೆ ಅಗತ್ಯ :** ನಮ್ಮ ದೇಶದಲ್ಲೂ ಕೊರೊನಾ ರೂಪಾಂತರಿ ವೈರಸ್ ಜೆಎನ್.1 ಹರಡುವಿಕೆ ಪ್ರಕರಣಗಳು ಹೆಚ್ಚಳವಾಗುತ್ತಿದೆ. ಜನರು ಆತಂಕಕ್ಕೆ ಒಳಗಾಗುವ ಅಗತ್ಯವಿಲ್ಲ. ಆದರೆ ಮುನ್ನೆಚ್ಚರಿಕೆ ತೆಗೆದುಕೊಳ್ಳಬೇಕು ಎಂದು ತಜ್ಞರು ತಿಳಿಸಿದ್ದಾರೆ. ಮುಖ್ಯಮಂತ್ರಿಗಳೂ ಉನ್ನತ ಮಟ್ಟದ ಸಭೆ ನಡೆಸಿ, ಹಲವು ತೀರ್ಮಾನಗಳನ್ನು ಕೈಗೊಂಡು, ಕೋವಿಡ್-19 ನ್ನು ಸಮರ್ಪಕವಾಗಿ ನಿರ್ವಹಿಸಲು ಎಲ್ಲ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದ್ದಾರೆ. ಇದಕ್ಕಾಗಿ ಸಚಿವ ಸಂಪುಟ ಉಪ ಸಮಿತಿಯನ್ನೂ ರಚಿಸಿದ್ದಾರೆ. ಜನರು ವದಂತಿಗಳಿಗೆ ಕಿವಿಗೊಡದೆ, ಮುನ್ನೆಚ್ಚರಿಕೆಯ ಕ್ರಮ ಕೈಗೊಳ್ಳುವುದರೊಂದಿಗೆ ರೋಗ ಲಕ್ಷಣಗಳು ಕಂಡುಬಂದ ಕೂಡಲೇ ಚಿಕಿತ್ಸೆಯನ್ನು ಪಡೆದುಕೊಳ್ಳಬೇಕು. ಹಾಗೆಯೇ ಆರೋಗ್ಯ ಇಲಾಖೆಯು ಹೊರಡಿಸಿರುವ ಮಾರ್ಗಸೂಚಿಗಳನ್ನು ನಾವೆಲ್ಲರೂ ತಪ್ಪದೇ ಪಾಲಿಸಬೇಕು.

**ಹೊಸ ವರ್ಷವು ಎಲ್ಲರಿಗೂ ಹೊಸ ಹರ್ಷ, ಉತ್ಸಾಹ ಹಾಗೂ ಉಲ್ಲಾಸ ತರಲಿ ಎಂದು ಆಶಿಸುತ್ತೇನೆ.**

**ಹೇಮಂತ್ ಎಂ ನಿಂಬಾಳ್ಕರ್, ಐಪಿಎಸ್**
ಪ್ರಧಾನ ಸಂಪಾದಕರು

**ಪ್ರಧಾನ ಸಂಪಾದಕರು,** ವಾರ್ತಾ ಜನಪದ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ,
#17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು - 560 001. email : feedbackjanapada@gmail.com



Downloaded From:www.kpscvaani.com



# ಬರ, ಉತ್ತರ ಕರ್ನಾಟಕ ಅಭಿವೃದ್ಧಿ ಬೆಳಗಾವಿ ಅಧಿವೇಶನದ ಕೇಂದ್ರ ಬಿಂದು

ಉಮೇಶ್ ಕೋಲಿಗೆರೆ

ಪ್ರಜಾಪ್ರಭುತ್ವದಲ್ಲಿ ಶಾಸನಸಭೆಗಳಿಗೆ ಕೇಂದ್ರ ಸ್ಥಾನವಿದೆ. ಚುನಾವಣೆ ಆದಿಭಾಗವಾದರೆ, ವಿಧಾನಮಂಡಲ, ಸಂಸತ್ ಕಲಾಪಗಳು ಪ್ರಜಾಪ್ರಭುತ್ವದ ಆಲೆ ಮನೆಯಿದ್ದಂತೆ, ಅಲ್ಲಿ ಗಿರಕಿ ಹೊಡೆದಷ್ಟು ಕಬ್ಬು ಹೆಚ್ಚು ರಸ ಬಿಡುತ್ತದೆ. ಇಲ್ಲಿ ಎಲ್ಲ ವಿಷಯಗಳು ಚರ್ಚೆಗೆ ಒಳಪಟ್ಟು ಸಮಾಜದ ಸುಧಾರಣೆಗೆ ಉತ್ತಮ ಫಲಶೃತಿ ಸಿಗಲಿದೆ.

ಕರ್ನಾಟಕದಲ್ಲಿ 16ನೇ ವಿಧಾನಸಭೆಯ ಎರಡನೇ ಅಧಿವೇಶನ ಬೆಳಗಾವಿಯ ಸುವರ್ಣಸೌಧದಲ್ಲಿ ಡಿಸೆಂಬರ್ 4ರಿಂದ 15 ರವರೆಗೂ ಫಲಪ್ರದವಾಗಿ ನಡೆಯಿತು. ಈ ಚಳಿಗಾಲದ ಅಧಿವೇಶನದಲ್ಲಿ ಅಲ್ಲಲ್ಲಿ ಒಂದಿಷ್ಟು ವಿಷಯಗಳು ಕಾವೇರುತ್ತಿತ್ತು, ಆಡಳಿತ ಪ್ರತಿಪಕ್ಷಗಳ ನಡುವೆ ಮಾತಿನ ಮಲ್ಲಯುದ್ಧಗಳಾದವು, ಪರಸ್ಪರ ಕಾಲೆಳೆದುಕೊಂಡರು, ಟೀಕೆಗಳು, ಆರೋಪಗಳು, ಎಲ್ಲವೂ ಕಂಡು ಬಂದವು.

ಬೆಳಗಾವಿಯಲ್ಲಿ ನಡೆದ ಹನ್ನೊಂದನೆ ಅಧಿವೇಶನದಲ್ಲಿ ಆರಂಭದ ದಿನದಿಂದಲೂ ಉತ್ತರ ಕರ್ನಾಟಕ ಭಾಗದ ಸಮಸ್ಯೆಗಳ ಚರ್ಚೆಗೆ ಹೆಚ್ಚು ಅವಕಾಶ ನೀಡಬೇಕು ಎಂಬ ಒತ್ತಾಸೆ ಕಂಡು ಬಂದಿತ್ತು. ಅದಕ್ಕೆ ತಕ್ಕ ಹಾಗೆ ಮೊದಲಾರ್ಧದಲ್ಲಿ ರಾಜ್ಯದ ಬರ ಪರಿಸ್ಥಿತಿಯ ಕುರಿತು ಚರ್ಚೆ ನಡೆದರೆ, ದ್ವಿತೀಯಾರ್ಧದಲ್ಲಿ ಸಂಪೂರ್ಣವಾಗಿ ಉತ್ತರ ಕರ್ನಾಟಕ ಭಾಗದ ಅಭಿವೃದ್ಧಿಯ ಕುರಿತೇ ಹೆಚ್ಚು ವಿಚಾರ ವಿನಿಮಯಗಳಾದವು.

ಈ ಬಾರಿ ಸಭಾಧ್ಯಕ್ಷರಾದ ಯು.ಟಿ.ಖಾದರ್ ಅವರು ಹೆಚ್ಚು ಗಮನ ಸೆಳೆದರು. ವಿಧಾನಸಭೆಯ ಅಧಿವೇಶನದಲ್ಲಿ ಹಲವಾರು ಸುಧಾರಣೆಗಳು, ಬದಲಾವಣೆಗಳನ್ನು ಜಾರಿಗೆ ತಂದರು, ಶಾಸಕರ ಹಾಜರಾತಿಗೆ ಬೆಂಬಲ ನೀಡುವ ಜೊತೆಯಲ್ಲೇ, ಸಮಯ ಪರಿಪಾಲನೆಗೆ ಹೆಚ್ಚು ಮಹತ್ವ ನೀಡಿದ ಅವರು ಕಲಾಪಕ್ಕೆ ತಡವಾಗಿ ಆಗಮಿಸಿದ ಶಾಸಕರನ್ನು ಪ್ರಶ್ನಿಸಿದರು.

ಸಹಜವಾಗಿ ಎಲ್ಲಾ ಪಕ್ಷಗಳಿಗೂ ರಾಜಕೀಯ ಮಾಡುವುದೇ ವೃತ್ತಿಯಾಗಿದೆ. ಆದರೆ ಬೆಳಗಾವಿಯ ವಿಧಾನಸಭೆ ಅಧಿವೇಶನದಲ್ಲಿ ಅದಕ್ಕೆ ಹೆಚ್ಚು ಅವಕಾಶ ಇರಲಿಲ್ಲ. ಅಲ್ಲಲ್ಲಿ ರಾಜಕಾರಣ ನುಸುಳುತ್ತಿತ್ತಾದರೂ ವಿಧಾನಸಭಾಧ್ಯಕ್ಷರು ಹೆಚ್ಚು ಅವಕಾಶ ನೀಡುತ್ತಿರಲಿಲ್ಲ, ಪಾಯಿಂಟು ಟು ಪಾಯಿಂಟ್ ಚರ್ಚೆಗಳಾಗಬೇಕು, ಅಷ್ಟಕ್ಕೆ ಸೀಮಿತವಾಗಿ ಉತ್ತರ ನೀಡಬೇಕು ಎಂದು ಕಟ್ಟಪ್ಪಣೆ ಹೊರಡಿಸುವ ಮೂಲಕ ಪ್ರತಿ ಕ್ಷಣದ ಕಲಾಪದ ಸಮಯವನ್ನು ಚೆನ್ನದಂತೆ ಬಳಸಿಕೊಂಡರು. ಮುಖ್ಯಮಂತ್ರಿ



Downloaded From:www.kpscvaani.com



ಸಿದ್ದರಾಮಯ್ಯ ಅವರು ಕಲಾಪದ ಆರಂಭದಿಂದಲೂ ಪಟ್ಟಾಗಿ ಕುಳಿತು ಚರ್ಚೆಗಳನ್ನು ಗಮನಿಸುತ್ತಿದ್ದರು.

ಡಿಸೆಂಬರ್ 4ರಂದು ವಂದೇ ಮಾತರಂ ಗಾಯನದ ಮೂಲಕ ಆರಂಭವಾದ ವಿಧಾನಮಂಡಲದ ಕಲಾಪದಲ್ಲಿ ಮೊಟ್ಟ ಮೊದಲಿಗೆ ಸಂವಿಧಾನದ ಪ್ರಸ್ತಾವನೆಯನ್ನು ಓದಲಾಯಿತು. ಇದು ಹೊಸ ಸಂಪ್ರದಾಯಕ್ಕೆ ನಾಂದಿಯಾಡಿತ್ತು. ಸಭಾಧ್ಯಕ್ಷರಾದ ಯು.ಟಿ. ಖಾದರ್ ಫರೀದ್ ರಾಷ್ಟ್ರದ ಏಕತೆ, ಅಖಂಡತೆ ಸುನಿಶ್ಚಿತಗೊಳಿಸುವ ಆಶಯದ ಪ್ರಸ್ತಾವನೆಯನ್ನು ಎಲ್ಲಾ ಸದಸ್ಯರಿಗೂ ಬೋಧಿಸಿದರು. ಶುರುವಿನಿಂದಲೂ ಸಮಯ ಪರಿಪಾಲನೆಯ ಬಗ್ಗೆ ಹಿರಿಯ ಸದಸ್ಯರು, ಸಭಾಧ್ಯಕ್ಷರು ಒತ್ತಾಸೆಯಾಗಿದ್ದರು. ಎರಡನೇ ವಾರದಲ್ಲಂತೂ ಬೆಳಗ್ಗೆ 9 ಗಂಟೆಗೆ ಸಮಯ ನಿಗದಿ ಮಾಡಿ, 9.15ಕ್ಕೆ ಕಲಾಪ ಆರಂಭಿಸಿ ರಾತ್ರಿ 9ಗಂಟೆಯವರೆಗೂ ಅಧಿವೇಶನ ನಡೆಸುವ ಮೂಲಕ ಫಲಪ್ರದ ಚರ್ಚೆಗೆ ಅವಕಾಶ ಮಾಡಿಕೊಡಲಾಯಿತು.

ಮೊದಲ ದಿನ ಇತ್ತೀಚೆಗೆ ಅಗಲಿದೆ ವಿಧಾನಸಭೆಯ ಮಾಜಿ ಅಧ್ಯಕ್ಷರೂ ಆಗಿದ್ದ ಹಿರಿಯ ರಾಜಕಾರಣಿ ಡಿ.ಬಿ.ಚಂದ್ರಗೌಡ ಸೇರಿದಂತೆ ಅನೇಕ ಮಾಜಿ ಶಾಸಕರಿಗೆ ಹಾಗೂ ಜಮ್ಮು ಕಾಶ್ಮೀರದ ರಚೌರಿ ಜಿಲ್ಲೆಯಲ್ಲಿ ನವೆಂಬರ್ 11ರಂದು ನಡೆದ ಭಯೋತ್ಪಾದಕ ದಾಳಿಯಲ್ಲಿ ಹುತಾತ್ಮರಾದ ಕ್ಯಾಪ್ಟನ್ ಎಂ.ವಿ.ಪ್ರಾಂಜಲ್ ಸೇರಿದಂತೆ ಐದು ಮಂದಿ ಯೋಧರಿಗೆ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಲಾಯಿತು. ನಂತರ ಅಗಲಿದ ಬಹುಭಾಷಾ ನಟಿ ಲೀಲಾವತಿ ಅವರಿಗೂ ಸದನ ಸಂತಾಪ ಸೂಚಿಸಿತ್ತು. ಇನ್ನು ವಿಧಾನಸಭೆ ವಿರೋಧ ಪಕ್ಷದ

**ಮುಖ್ಯಮಂತ್ರಿಯವರ ಭರವಸೆಗಳು:**

ಹತ್ತು ದಿನಗಳ ಕಾಲದ ಅಧಿವೇಶನದಲ್ಲಿ ಸುಮಾರು 66 ಗಂಟೆ 10 ನಿಮಿಷಗಳ ಕಾಲ ಕಾರ್ಯಕಲಾಪ ನಡೆದಿತ್ತು. ಉತ್ತರ ಕರ್ನಾಟಕ ಭಾಗದ ಮೇಲಿನ ಚರ್ಚೆಗೆ ಅಧಿವೇಶನದ ಕೊನೆಯ ದಿನದಂದು ಉತ್ತರ ನೀಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ರಾಜ್ಯದ ಸಮಗ್ರ ಅಭಿವೃದ್ಧಿ ತಮ್ಮ ಧ್ಯೇಯ ಎಂದು ಘೋಷಿಸಿದರು. ಪ್ರಮುಖವಾಗಿ ಎಂಟು ಘೋಷಣೆಗಳು ಅಭಿವೃದ್ಧಿಗೆ ಮುನ್ನುಡಿಯಾದವು.

- 2002ರಲ್ಲಿ ಸಲ್ಲಿಕೆಯಾಗಿದ್ದ ಡಾ. ನಂಜುಂಡಪ್ಪನವರ ವರದಿಯ ಅನುಷ್ಠಾನ 2007ರಿಂದ ಆರಂಭವಾಯಿತು. ಅದರಿಂದ ಒಂದಿಷ್ಟು ಬದಲಾವಣೆಯಾಗಿದೆ ಎಂದು ಭಾವಿಸಬಹುದಾಗಿದ್ದರೂ ನಿರೀಕ್ಷಿತ ಮಟ್ಟದಲ್ಲಿ ಫಲ ನೀಡಿಲ್ಲ. ಅದಕ್ಕಾಗಿ ಮತ್ತೊಮ್ಮೆ ರಾಜ್ಯಾದ್ಯಂತ ಪ್ರಾದೇಶಿಕ ಅಸಮಾನತೆಯನ್ನು ಅಧ್ಯಯನ ಮಾಡಿ ಸರ್ಕಾರಕ್ಕೆ ಆರು ತಿಂಗಳ ಒಳಗಾಗಿ ವರದಿ ನೀಡಲು ಖ್ಯಾತ ಅರ್ಥಶಾಸ್ತ್ರಜ್ಞರ ನೇತೃತ್ವದಲ್ಲಿ ಹೊಸದೊಂದು ಉನ್ನತಾಧಿಕಾರ ಸಮಿತಿ ರಚನೆ ಮಾಡುವುದಾಗಿ ಮುಖ್ಯಮಂತ್ರಿ ತಿಳಿಸಿದರು.
- ಸಹಕಾರ ಬ್ಯಾಂಕುಗಳಲ್ಲಿರುವ ಮಧ್ಯಮಾವಧಿ ಮತ್ತು ದೀರ್ಘಾವಧಿ ಸಾಲದ ಅಸಲನ್ನು ಕಟ್ಟಿದರೆ ರೈತರ ಸಂಪೂರ್ಣ ಬಡ್ಡಿಯನ್ನು ಮನ್ನಾ ಮಾಡಲಾಗುವುದು.
- ಉತ್ತರ ಕರ್ನಾಟಕದಲ್ಲಿ ಬೃಹತ್ ಕೈಗಾರಿಕೆಗಳನ್ನು ಸ್ಥಾಪಿಸುವ ಮೂಲಕ ಆರ್ಥಿಕತೆಗೆ ಉತ್ತೇಜನ ನೀಡಲು ಹಾಗೂ ಸ್ಥಳೀಯರಿಗೆ ಉದ್ಯೋಗ ಒದಗಿಸುವ ಸಲುವಾಗಿ ಬೆಳಗಾವಿ ಸಮೀಪ ಸುಮಾರು 2000 ಎಕರೆ ಪ್ರದೇಶದಲ್ಲಿ ಹೊಸ ಕೈಗಾರಿಕಾ ಪ್ರದೇಶ, 500 ಎಕರೆ ಪ್ರದೇಶದಲ್ಲಿ ಫೌಂಡ್ರಿ ಕ್ಲಸ್ಟರ್ ಅನ್ನು ಸ್ಥಾಪಿಸಲಾಗುವುದು ಹಾಗೂ ಜಿಲ್ಲೆಯಲ್ಲಿ ಏರೋಸ್ಪೇಸ್ ಆಧಾರಿತ ಕೈಗಾರಿಕೆಗಳ ಬೆಳವಣಿಗೆಗೆ ವಿಶೇಷ ಒತ್ತು ನೀಡಲಾಗುವುದು ಎಂದು ಮುಖ್ಯಮಂತ್ರಿ ತಿಳಿಸಿದರು.
- ಧಾರವಾಡ ಜಿಲ್ಲೆಯಲ್ಲಿ ಕೈಗಾರಿಕಾ ಕ್ಲಸ್ಟರ್ ಅನ್ನು ಸ್ಥಾಪಿಸಲಾಗುತ್ತಿದ್ದು, ಈಗಾಗಲೇ 19 ಘಟಕಗಳು ರೂ.1255 ಕೋಟಿ ಬಂಡವಾಳ ಹೂಡಿಕೆ ಮಾಡುತ್ತಿದ್ದು, ಸುಮಾರು 2450 ಜನರಿಗೆ ಉದ್ಯೋಗ ದೊರೆಯುವ ನಿರೀಕ್ಷೆ ಇದೆ. ಅಲ್ಲದೇ, ಧಾರವಾಡದ ಸಮೀಪ ಸುಮಾರು 3000 ಎಕರೆ ಪ್ರದೇಶದಲ್ಲಿ ಹೊಸ ಕೈಗಾರಿಕಾ ಪ್ರದೇಶವನ್ನು ಸ್ಥಾಪಿಸುವ ಭರವಸೆ ನೀಡಿದರು.
- ರಾಯಚೂರಿನಲ್ಲಿ ಹತ್ತಿ ಉತ್ಪಾದನೆಯು ಹೆಚ್ಚಿರುವುದರಿಂದ ಈ ಜಿಲ್ಲೆಯಲ್ಲಿ ಆರ್ಥಿಕ ಅಭಿವೃದ್ಧಿ ಹಾಗೂ ಸ್ಥಳೀಯರಿಗೆ ಉದ್ಯೋಗಾವಕಾಶ ಕಲ್ಪಿಸುವ ದೃಷ್ಟಿಯಿಂದ ಹತ್ತಿ ಆಧಾರಿತ ಕೈಗಾರಿಕೆಗಳ ಸ್ಥಾಪನೆಗೆ ವಿಶೇಷ ಒತ್ತು ನೀಡುವುದಾಗಿ ತಿಳಿಸಲಾಯಿತು.
- ವಿಜಯಪುರದಲ್ಲಿ 1500 ಎಕರೆ ಪ್ರದೇಶದಲ್ಲಿ ಉತ್ಪಾದನಾ ಕ್ಲಸ್ಟರ್ ಸ್ಥಾಪಿಸಲಾಗುವುದು.
- ಉತ್ತರ ಕರ್ನಾಟಕವು ಸಮೃದ್ಧ ಪ್ರವಾಸೋದ್ಯಮಗಳ ತಾಣವಾಗಿದೆ. ಪ್ರವಾಸೋದ್ಯಮವನ್ನು ಅಭಿವೃದ್ಧಿ ಮಾಡಲು ಸಮಗ್ರ ಕ್ರಿಯಾಯೋಜನೆಯನ್ನು ರೂಪಿಸಿ ಉದ್ಯೋಗಾವಕಾಶಗಳನ್ನು ಸೃಷ್ಟಿಸಲು ಕ್ರಮವಹಿಸುವುದಾಗಿ ಮುಖ್ಯಮಂತ್ರಿಗಳೂ ತಿಳಿಸಿದ್ದಾರೆ.
- ಧಾರವಾಡದಲ್ಲಿರುವ ವಾಲ್ಮಿ [ಜಲ ಮತ್ತು ನೆಲ ನಿರ್ವಹಣೆ ಸಂಸ್ಥೆ] ಯನ್ನು ಉನ್ನತೀಕರಿಸಿ, ಜಲ ಶಿಕ್ಷಣ ನೀಡುವುದಷ್ಟೆ ಅಲ್ಲ, ಉತ್ತರ ಕರ್ನಾಟಕದ ಮಣ್ಣಿನ ಸವುಳು– ಜವುಳು ಸಮಸ್ಯೆಯನ್ನು ನಿರ್ವಹಿಸಲಾಗುವುದು. ಹಾಗೂ ರೈತರ ಆದಾಯ ಹೆಚ್ಚಳದ ಕಡೆಗೆ ಗಮನ ಹರಿಸುವಂತೆ ಪರಿವರ್ತಿಸುವುದಾಗಿ ಮುಖ್ಯಮಂತ್ರಿಗಳು ಘೋಷಿಸಿದರು.



Downloaded From:www.kpscvaani.com



ನಾಯಕರಾಗಿ ಆಯ್ಕೆಯಾದ ಆರ್.ಅಶೋಕ್ ಅವರಿಗೆ ಸದನ ಪಕ್ಷಬೇಧ ಮರೆತು ಅಭಿನಂದನೆ ಹೇಳಿತು.

ಉತ್ತರ ಕರ್ನಾಟಕ ಭಾಗದ ಅಭಿವೃದ್ಧಿ ಹಾಗೂ ಬರ ಪರಿಸ್ಥಿತಿಗಳ ಚರ್ಚೆಗೆ ಆರಂಭದಿಂದಲೂ ಪೈಪೋಟಿ ಕಂಡು ಬಂದಿತ್ತು. ಸಭಾಧ್ಯಕ್ಷರು ಆರಂಭದಲ್ಲಿ ಬರ ಪರಿಸ್ಥಿತಿ ಕುರಿತು ಚರ್ಚೆಗೆ ಅವಕಾಶ ಮಾಡಿಕೊಟ್ಟರು. ಕೋರಂ ಕ್ರೋಢಿಕರಣಕ್ಕೆ ಅಗತ್ಯವಾದ ಸಂಖ್ಯಾಬಲಕ್ಕೆ ಮೊದಲಿಗರಿಗಾಗಿ ಆಗಮಿಸುವ 25 ಶಾಸಕರ ಹೆಸರನ್ನು ಪ್ರಕಟಿಸುವ ಬೆಂಗಳೂರಿನಲ್ಲಿ ಚಾಲ್ತಿಯಲ್ಲಿದ್ದ ಸಂಪ್ರದಾಯವನ್ನು ಬೆಳಗಾವಿ ಕಲಾಪದಲ್ಲೂ ಮುಂದುವರೆಸಿದ ಸಭಾಧ್ಯಕ್ಷರು, ಸಮಯಕ್ಕೆ ಸರಿಯಾಗಿ ಹಾಜರಾದ ಶಾಸಕರಿಗೆ ಕಿರುಕಾಣಿಕೆಗಳನ್ನು ನೀಡಿ ಬೆಂಬಲಿಸಿದರು. ಒಟ್ಟಾರೆ ಪ್ರಶ್ನೋತ್ತರ ರಾಜ್ಯವನ್ನು ಕಾಡುವ  ಹಲವು ಗಂಭೀರ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲಿತ್ತು. ಸರ್ಕಾರ ಅದಕ್ಕೆ ಸಮರ್ಥ ಉತ್ತರವನ್ನು ನೀಡಿತು.

**ಶಾಸನ ರಚನೆ:**

2023-24ನೇ ಸಾಲಿನ ಪೂರಕ ಅಂದಾಜು, 2023-24ನೇ ಸಾಲಿನ ರಾಜ್ಯ ಹಣಕಾಸಿನ ಮಧ್ಯವಾರ್ಷಿಕ ಪರಿಶೀಲನಾ ವರದಿ, ಧನವಿನಿಯೋಗ ವಿಧೇಯಕ ಸೇರಿದಂತೆ ಒಟ್ಟು 17 ವಿಧೇಯಕಗಳು ಮಂಡನೆಯಾಗಿ, ಅಂಗೀಕಾರಗೊಂಡವು.

ಮಲೆನಾಡು ಭಾಗದ ಆಯ್ದ ಜಿಲ್ಲಾ ಪಂಚಾಯತ್ ಕ್ಷೇತ್ರಗಳಲ್ಲಿ ಮತದಾರರ ಸಂಖ್ಯೆಯನ್ನು ಪರಿಷ್ಕರಿಸುವ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕ, ಎಂಬಿಬಿಎಸ್ ಶಿಕ್ಷಣ ಪೂರ್ಣಗೊಳಿಸಿದ ಬಳಿಕ ಒಂದು ವರ್ಷ ಕಡ್ಡಾಯಗೊಳಿಸಲಾಗಿದ್ದ ಗ್ರಾಮೀಣ ಸೇವೆಯನ್ನು ಸಡಿಲ ಮಾಡಿ,



ಖಾಯಂ ನೇಮಕಾತಿಗೆ ಅವಕಾಶ ಕಲ್ಪಿಸುವ ಕರ್ನಾಟಕ ವೈದ್ಯಕೀಯ ಕೋರ್ಸುಗಳನ್ನು ಪೂರ್ಣಗೊಳಿಸಿದ ಅಭ್ಯರ್ಥಿಗಳ ಕಡ್ಡಾಯ ಸೇವಾ (ತಿದ್ದುಪಡಿ) ವಿಧೇಯಕ, ಸರ್ಕಾರಿ ಹುದ್ದೆಗಳ ನೇಮಕಾತಿಗೆ ನಡೆಯುವ ವಿವಿಧ ಪರೀಕ್ಷೆಗಳಲ್ಲಿ ಅಕ್ರಮ ಎಸಗುವವರಿಗೆ 10 ವರ್ಷದವರೆಗೆ ಜೈಲು ಶಿಕ್ಷೆ, ಗರಿಷ್ಠ 50 ಲಕ್ಷ ರೂಪಾಯಿವರೆಗೂ ದಂಡ ವಿಧಿಸುವ ಕರ್ನಾಟಕ ಸಾರ್ವಜನಿಕ ಪರೀಕ್ಷೆ (ನೇಮಕಾತಿಯಲ್ಲಿನ ಭ್ರಷ್ಟಾಚಾರ ಮತ್ತು ಅನುಚಿತ ವಿಧಾನಗಳ ಪ್ರತಿಬಂಧಕ ಕ್ರಮಗಳು) ವಿಧೇಯಕ, ಬಿಬಿಎಂಪಿ ಈಗಾಗಲೇ ವಸೂಲಿ ಮಾಡಿರುವ ಆಸ್ತಿ ತೆರಿಗೆ ಶುಲ್ಕವನ್ನು ತಾಂತ್ರಿಕ ಸಮಸ್ಯೆಯಿಂದ ಕೈ ಬಿಟ್ಟು ಹೋಗದಂತೆ ಉಳಿಸಿಕೊಳ್ಳುವ ಸಲುವಾಗಿ ರೂಪಿಸಲಾಗಿರುವ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ವಿಧೇಯಕ, ವಕೀಲರ ಮೇಲಿನ ಹಲ್ಲೆ ಹಾಗೂ ದೌರ್ಜನ್ಯಗಳನ್ನು ನಿಯಂತ್ರಿಸುವ ಹೊಸದಾದ ಕರ್ನಾಟಕ ನ್ಯಾಯವಾದಿಗಳ ಮೇಲಿನ ಹಿಂಸಾಚಾರ ನಿಷೇಧ ವಿಧೇಯಕಗಳು ಧ್ವನಿಮತದ ಮೂಲಕ ಅಂಗೀಕಾರಗೊಂಡವು.

ಜೊತೆಗೆ ಕರ್ನಾಟಕ ಅನುಸೂಚಿತ ಜಾತಿಗಳ ಉಪಹಂಚಿಕೆ ಮತ್ತು ಬುಡಕಟ್ಟು ಉಪಹಂಚಿಕೆ (ಹಂಚಿಕೆ ಮಾಡಬಹುದಾದ ಆಯವ್ಯಯ ರೂಪಿಸುವುದು, ಆರ್ಥಿಕ ಸಂಪನ್ಮೂಲಗಳ ಹಂಚಿಕೆ ಮತ್ತು ಬಳಕೆ) (ತಿದ್ದುಪಡಿ), ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ಎರಡನೇ ತಿದ್ದುಪಡಿ) ವಿಧೇಯಕ, ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿರ್ಧರಣೆ (ಎರಡನೇ ತಿದ್ದುಪಡಿ) ವಿಧೇಯಕ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ಎರಡನೇ ತಿದ್ದುಪಡಿ) ವಿಧೇಯಕ, ಕರ್ನಾಟಕ ಸಿವಿಲ್ ನ್ಯಾಯಾಲಯಗಳ (ತಿದ್ದುಪಡಿ) ವಿಧೇಯಕ, ಕರ್ನಾಟಕ ಸ್ಟಾಂಪು (ತಿದ್ದುಪಡಿ) ವಿಧೇಯಕ, ಕರ್ನಾಟಕ ಉಚ್ಚ ನ್ಯಾಯಾಲಯ (ತಿದ್ದುಪಡಿ) ವಿಧೇಯಕ, ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ (ತಿದ್ದುಪಡಿ) ವಿಧೇಯಕ, ಕರಾವಳಿ ಅಭಿವೃದ್ಧಿ ಮಂಡಳಿ ವಿಧೇಯಕ, ಶ್ರೀ ರೇಣುಕಾ ಯಲ್ಲಮ್ಮ ಕ್ಷೇತ್ರ ಪ್ರವಾಸೋದ್ಯಮ ಅಭಿವೃದ್ಧಿ ಮಂಡಳಿ ವಿಧೇಯಕ, ಹಂಪಿ ವಿಶ್ವ ಪರಂಪರೆ ಪ್ರದೇಶ ನಿರ್ವಹಣಾ ಪ್ರಾಧಿಕಾರ (ತಿದ್ದುಪಡಿ) ವಿಧೇಯಕಗಳು ಅಂಗೀಕಾರ ಪಡೆದುಕೊಂಡು ಕಾನೂನುಗಳಾದವು.

**ವರದಿಗಳ ಮಂಡನೆ:**

ಕರ್ನಾಟಕ ವಿಧಾನಮಂಡಲದ ಅನುಸೂಚಿತ ಜಾತಿ ಹಾಗೂ ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿಯ 2023-24ನೇ ಸಾಲಿನ ಮೊದಲನೇ ಹಾಗೂ ಮಧ್ಯಂತರ ವರದಿ, ಸಾರ್ವಜನಿಕ ಉದ್ಯಮಗಳ ಸಮಿತಿಯ 136ನೇ ವರದಿ, ಕರ್ನಾಟಕ ವಿಧಾನಸಭೆಯ ಸದಸ್ಯರುಗಳ ಖಾಸಗಿ ವಿಧೇಯಕಗಳ ಮತ್ತು ನಿರ್ಣಯಗಳ ಸಮಿತಿಯ 2023-24 ನೇ ಸಾಲಿನ ಮೊದಲನೇ ವರದಿಯನ್ನು ಸದನದಲ್ಲಿ ಮಂಡಿಸಲಾಯಿತು. ಒಟ್ಟು 9 ಅಧಿಸೂಚನೆಗಳು, 3 ಅಧ್ಯಾದೇಶಗಳು ಮತ್ತು 61 ವಾರ್ಷಿಕ ವರದಿಗಳು, 105 ಲೆಕ್ಕ ಪರಿಶೋಧನಾ ವರದಿಗಳು ಹಾಗೂ 1 ಲೆಕ್ಕ ತಪಾಸಣಾ ವರದಿ ಸದನದಲ್ಲಿ ಮಂಡನೆಯಾಯಿತು.

**ಕಲಾಪದ ಪ್ರಶ್ನೆಗಳಿಗೆ ಸಚಿವರುಗಳು ನೀಡಿದ ಕೆಲವು ಆಯ್ದ ಪ್ರಮುಖ ಉತ್ತರಗಳು**

ಡಾ.ಸಿ.ಎನ್.ಅಶ್ವತ್ಥ್ ನಾರಾಯಣ್ ಕೇಳಿದ ಪ್ರಶ್ನೆಗೆ, ಕಂದಾಯ ಸಚಿವ ಕೃಷ್ಣ ಬೈರೇಗೌಡ ಉತ್ತರಿಸಿ, 2015ರಲ್ಲಿ ಪೋಡಿ ಮುಕ್ತ



Downloaded From:www.kpscvaani.com

ಗ್ರಾಮ ಯೋಜನೆಗೆ 16,630 ಗ್ರಾಮಗಳನ್ನು ಆಯ್ದುಕೊಳ್ಳಲಾಗಿತ್ತು, ಇನ್ನೂ 14,085 ಗ್ರಾಮಗಳು ಬಾಕಿ ಉಳಿದಿವೆ. ನಿಗದಿತ ವಿಸ್ತೀರ್ಣಕ್ಕಿಂತಲೂ ಭೂಮಿ ಕಡಿಮೆ ಇರುವುದು, ಹಲವು ಪ್ರಕರಣಗಳು ನ್ಯಾಯಾಲಯದಲ್ಲಿ ಇರುವ ತಾಂತ್ರಿಕ ಸಮಸ್ಯೆಗಳಿಂದ ಯೋಜನೆ ನನೆಗುದಿಯಲ್ಲಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಮಾರ್ಗದರ್ಶನದಲ್ಲಿ ರೈತರ ಮನೆ ಬಾಗಿಲಿಗೆ ಹೋಗಿ ಪೋಡಿ ಮಾಡಿಕೊಡುವ ಉದ್ದೇಶವಿದೆ, ಅದಕ್ಕೆ ಅಗತ್ಯವಾದ ಮೋಜಣಿದಾರರನ್ನು ನೇಮಕಾತಿ ಮಾಡಿಕೊಳ್ಳಲಾಗುತ್ತಿದೆ. 40 ವರ್ಷಗಳಿಂದಲೂ ಸಮಸ್ಯೆಯಾಗಿಯೇ ಉಳಿದಿರುವ ಈ ವಿಚಾರವನ್ನು ಗಂಭೀರವಾಗಿ ಪರಿಗಣಿಸಿ, ಶೇ.70ರಷ್ಟು ಸಾಧ್ಯವಿರಬಹುದಾದ ಪ್ರಕರಣಗಳಲ್ಲಿ ನಿಗದಿತ ಕಾಲಮಿತಿಯಲ್ಲಿ ಪೋಡಿ ಮಾಡಿಕೊಡಲಾಗುವುದು, ಡ್ರೋನ್ ಸರ್ವೇ ನಡೆಸಿ, ದಾಖಲಾತಿಗಳನ್ನು ಡಿಜಿಟಲೀಕರಣ ಮಾಡಿ ಶಾಶ್ವತ ಪರಿಹಾರ ಒದಗಿಸಲಾಗುತ್ತದೆ ಎಂದು ಹೇಳಿದರು.

ಸಿದ್ದು ಸವದಿ ಸೇರಿದಂತೆ ಇತರ ಶಾಸಕರ ಪ್ರಸ್ತಾಪಕ್ಕೆ ಉತ್ತರಿಸಿದ ಕಾರ್ಮಿಕ ಸಚಿವರಾದ ಸಂತೋಷ್ ಲಾಡ್, ಅಸಂಘಟಿತ 43 ವಲಯಗಳಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರನ್ನು ಕಟ್ಟಡ ಹಾಗೂ ನಿರ್ಮಾಣ ಕಾರ್ಮಿಕರ ಮಾದರಿಯಲ್ಲೇ ಸಾಮಾಜಿಕ ಭದ್ರತಾ ಯೋಜನೆ ವ್ಯಾಪ್ತಿಗೆ ಒಳಪಡಿಸುತ್ತೇವೆ. ಅದಕ್ಕೆ ಅಗತ್ಯ ಸಂಪನ್ಮೂಲ ಕ್ರೋಢೀಕರಿಸಲು ಸಂಬಂಧಿಸಿದ ಉದ್ಯಮಗಳು ಹಾಗೂ ಮಾರಾಟ ವಹಿವಾಟಿನ ಮೇಲೆ ಸೆಸ್ ಹಾಕಲಾಗುವುದು, ಸಾರಿಗೆ ಕ್ಷೇತ್ರದಲ್ಲಿ ಸಂಗ್ರಹಿಸುತ್ತಿರುವ ಸೆಸ್ ಬಳಸಿಕೊಂಡು ಸುಮಾರು 25 ಲಕ್ಷ ಸಾರಿಗೆ ವಲಯದಲ್ಲಿ ದುಡಿಯುತ್ತಿರುವವರಿಗೆ ಸೌಲಭ್ಯಗಳನ್ನು ತಲುಪಿಸುವುದಾಗಿ ಹೇಳಿದರು.

ವಿಹಾರದಾಮಗಳ ಹೆಸರಿನಲ್ಲಿ ಸಿಎಲ್–9 ಮದ್ಯ ಮಾರಾಟಕ್ಕಾಗಿ ನೀಡಲಾಗುವ ಪರವಾನಗಿಯಲ್ಲಿ ಸಾಕಷ್ಟು ಅಕ್ರಮಗಳಾಗಿವೆ ಎಂದು ಎಸ್.ಎನ್.ನಾರಾಯಣಸ್ವಾಮಿ ಹಾಗೂ ಬಹುತೇಕ ಶಾಸಕರು ಪ್ರಸ್ತಾಪಿಸಿದ ವಿಷಯಕ್ಕೆ ಪ್ರತಿಕ್ರಿಯಿಸಿದ ಅಬಕಾರಿ ಸಚಿವರಾದ ಆರ್.ಬಿ.ತಿಮ್ಮಾಪುರ ಅವರು ಇದಕ್ಕಾಗಿ ಸೂಕ್ತ ಕಾನೂನು ಹಾಗೂ



ನಿಯಮಾವಳಿಗಳನ್ನು ರೂಪಿಸಲಾಗುವುದು ಹಾಗೆಯೇ ಮೀಸಲಾತಿ ಪಾಲನೆಗೂ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು.

ಕಂಪ್ಲಿ ಕ್ಷೇತ್ರದ ಶಾಸಕ ಜೆ.ಎನ್.ಗಣೇಶ್, ಬಳ್ಳಾರಿಯಲ್ಲಿ ಗಣಿಗಾರಿಕೆ, ಕೈಗಾರಿಕೆಗಳಿಂದಾಗಿ ಮಾಲಿನ್ಯ ಹೆಚ್ಚಾಗಿ ಜನರ ಆರೋಗ್ಯದ ಮೇಲೆ ಅಡ್ಡ ಪರಿಣಾಮಗಳಾಗುತ್ತಿದ್ದು, ಕ್ಯಾನ್ಸರ್ ಕಾಯಿಲೆ ಹೆಚ್ಚಾಗುತ್ತಿದೆ. ಚಿಕಿತ್ಸೆಗೆ ಕಿದ್ವಾಯಿ ಶಾಖಾ ಆಸ್ಪತ್ರೆಯನ್ನು ಸ್ಥಾಪಿಸಬೇಕು ಎಂದು ಆಗ್ರಹಿಸಿದರು. ಅದಕ್ಕೆ ಸಮ್ಮತಿಸಿದ ವೈದ್ಯಕೀಯ ಶಿಕ್ಷಣ ಸಚಿವರಾದ ಡಾ.ಶರಣಪ್ರಕಾಶ್ ಪಾಟೀಲ್ ಗಣಿ ಪ್ರದೇಶ ಪುನರ್ವಸತಿ ನಿಧಿಯನ್ನು ಬಳಸಿಕೊಂಡು ಬಳ್ಳಾರಿಯಲ್ಲಿ ಕಿದ್ವಾಯಿ ಚಿಕಿತ್ಸಾ ಕೇಂದ್ರ ಆರಂಭಿಸುವ ಭರವಸೆ ನೀಡಿದರು.

ಚಿಕ್ಕಬಳ್ಳಾಪುರ ಕ್ಷೇತ್ರ ಶಾಸಕ ಪ್ರದೀಪ್ ಈಶ್ವರ್ ಪ್ರಸ್ತಾಪಿಸಿದ ವಿಷಯಕ್ಕೆ ಪ್ರತಿಕ್ರಿಯಿಸಿದ ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಸಚಿವರಾದ ಮಧು ಬಂಗಾರಪ್ಪ, ಮುಂದಿನ ಶೈಕ್ಷಣಿಕ ವರ್ಷದಿಂದ ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಉಚಿತ ಸೈಕಲ್ ವಿತರಿಸುವ ಯೋಜನೆಯನ್ನು ಮರು ಆರಂಭಿಸುವುದಾಗಿ ಭರವಸೆ ನೀಡಿದರು.

ಸರ್ಕಾರಿ ಜಾಗ ಒತ್ತುವರಿ ತಡೆಗೆ ಖಾಯಂ ಗಸ್ತು ವ್ಯವಸ್ಥೆಯನ್ನು ರೂಪಿಸಲಾಗುವುದು, ಪ್ರತಿ ಮೂರು ತಿಂಗಳಿಗೊಮ್ಮೆ ಕಂದಾಯ ಅಧಿಕಾರಿಗಳು ಖಾಲಿ ಇರುವ ಸರ್ಕಾರಿ ಜಾಗಕ್ಕೆ ಭೇಟಿ ನೀಡಿ ಜಿಪಿಎಸ್ ಆಧಾರಿತವಾಗಿ ಪರಿಶೀಲನೆ ನಡೆಸಬೇಕು, ಒಂದು ವೇಳೆ ಒತ್ತುವರಿಯಾಗಿದ್ದರೆ ತಹಸೀಲ್ದಾರ್ ಗಮನಕ್ಕೆ ತರಬೇಕು, 15 ದಿನದಲ್ಲಿ ಒತ್ತುವರಿ ತೆರವು ಮಾಡಬೇಕು ಎಂದು ಸೂಚಿಸಲಾಗಿದೆ ಎಂದು ಕಂದಾಯ ಸಚಿವರಾದ ಕೃಷ್ಣಬೈರೇಗೌಡ ಮಂಡ್ಯ ಕ್ಷೇತ್ರ ಶಾಸಕ ರವಿಗಣಿಗ ಅವರ ಪ್ರಶ್ನೆಗೆ ಉತ್ತರಿಸಿದರು.

ಕೋವಿಡ್ 19 ಸಾಂಕ್ರಾಮಿಕ ಪರಿಸ್ಥಿತಿಗೂ ಮೊದಲೇ ಹಿಂದಿನ ಸರ್ಕಾರ ಮೂರು ಸಾವಿರ ಬಸ್ ಸಂಚಾರದ ಷಡ್ಯೂಲ್‌ಗಳನ್ನು ರದ್ದು ಮಾಡಿತ್ತು, ಬಸ್ ಹಾಗೂ ಸಿಬ್ಬಂದಿ ಕೊರತೆಯಿಂದ ಅವನ್ನು ಮತ್ತೆ ಆರಂಭಿಸಲಾಗಿರಲಿಲ್ಲ. ಈಗ 9 ಸಾವಿರ ಹುದ್ದೆಗಳ ನೇಮಕಾತಿ ಪ್ರಕ್ರಿಯೆ ಕೈಗೊಂಡಿದ್ದೇವೆ, 5500 ಬಸ್ ಗಳನ್ನು ಖರೀದಿಸುವುದರಿಂದ ನಿಂತು ಹೋಗಿದ್ದ ಬಸ್‌ಗಳ ಸಂಚಾರ ಪುನಾರಂಭವಾಗಲಿದೆ ಎಂದು ಸಾರಿಗೆ ಸಚಿವರಾದ ರಾಮಲಿಂಗಾರೆಡ್ಡಿ ಕೆಜಿಎಫ್ ಶಾಸಕಿ ರೂಪಕಲಾ ಅವರ ಪ್ರಶ್ನೆಗೆ ಸಮಜಾಯಿಷಿ


Downloaded From:www.kpscvaani.com



ನೀಡಿದರು. ಶಶಿಕಲ್ಲಾ ಜೊಲ್ಲೆ ಅವರ ಪ್ರಸ್ತಾಪಕ್ಕೆ ಹಲವು ಶಾಸಕರು ಧ್ವನಿಗೂಡಿಸಿದರು.

ಗೃಹ ಸಚಿವರಾದ ಡಾ.ಜಿ.ಪರಮೇಶ್ವರ್, ಗೃಹ ರಕ್ಷಕ ಸಿಬ್ಬಂದಿಗಳ ಗೌರವ ಧನವನ್ನು ಹೆಚ್ಚಿಸುವ ಹಾಗೂ ಏಕರೂಪತೆ ತರುವ ನಿಟ್ಟಿನಲ್ಲಿ ಕ್ರಮ ಜರುಗಿಸುವುದಾಗಿ ಭರವಸೆ ನೀಡಿದರು. ಶೂನ್ಯವೇಳೆಯಲ್ಲಿ 545 ಪಿಎಸ್ ಐ ಹುದ್ದೆಗಳ ನೇಮಕಾತಿಗೆ ಡಿಸೆಂಬರ್ 23ಕ್ಕೆ ನಿಗದಿಯಾಗಿದ್ದ ಪರೀಕ್ಷೆಯನ್ನು ಮುಂದೂಡಿ, ಅಭ್ಯರ್ಥಿಗಳಿಗೆ ಪರೀಕ್ಷಾ ತಯಾರಿ ಮಾಡಿಕೊಳ್ಳಲು ಕಾಲಾವಕಾಶ ನೀಡಬೇಕು ಎಂದು ಪಕ್ಷಬೇಧ ಮರೆತು ಶಾಸಕರು ಒತ್ತಾಯಿಸಿದಾಗ ಡಾ.ಜಿ.ಪರಮೇಶ್ವರ್ ಅವರು ಒಂದು ತಿಂಗಳ ಕಾಲಾವಕಾಶ ನೀಡಲಾಗುವುದು, ಡಿಸೆಂಬರ್ 23ರ ಬದಲಾಗಿ 2024ರ ಜನವರಿ 23ಕ್ಕೆ ಪರೀಕ್ಷೆ ನಡೆಸುವುದಾಗಿ ಭರವಸೆ ನೀಡಿದರು.

ತೆಂಗು ಹಾಗೂ ಕೊಬ್ಬರಿಗೆ ಬೆಲೆ ಕುಸಿತದ ಬಗ್ಗೆ ಶಿವಲಿಂಗೇಗೌಡರಿಂದ ಆರಂಭವಾದ ಚರ್ಚೆ ತೆಂಗು ಬೆಳೆಗಾರರ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲುವಲ್ಲಿ ಯಶಸ್ವಿಯಾಯಿತು. ಚರ್ಚೆ ನಡೆದಾಗ ಕೃಷಿ ಮಾರುಕಟ್ಟೆ ಸಚಿವರಾದ ಶಿವಾನಂದ ಪಾಟೀಲ್ ಅವರು ಬೆಂಬಲ ಬೆಲೆಯಡಿ ಕೊಬ್ಬರಿ ಖರೀದಿಗೆ ಕೇಂದ್ರ ಸರ್ಕಾರ ಅನುಮತಿ ನೀಡಿದರೆ ರಾಜ್ಯ ಸರ್ಕಾರ ಹೆಚ್ಚುವರಿ ಹಣ ನೀಡಲು ಸಿದ್ಧ ಎಂದು ಪ್ರಕಟಿಸಿದರು.

ಬೆಳ್ತಂಗಡಿ ಕ್ಷೇತ್ರದಲ್ಲಿ ಅರಣ್ಯಾಧಿಕಾರಿಗಳು ಅರಣ್ಯ ಒತ್ತುವರಿ ಮಾಡಿದ್ದಾರೆ ಎಂಬ ಆರೋಪಕ್ಕಾಗಿ ಬಡವರ ಮನೆ ಒಡೆದಿದ್ದಾರೆ. ಮನೆ ಮಾಲೀಕರ ಬೆಂಬಲಕ್ಕೆ ಹೋಗಿದ್ದ ಕ್ಷೇತ್ರದ ಶಾಸಕರಾದ ಹರೀಶ್ ಪೂಂಜಾ ಮೇಲೆ ಮೊಕದಮೆ ದಾಖಲಿಸಲಾಗಿದೆ. ಸದರಿ ವಿಷಯವನ್ನು ಹಕ್ಕುಚ್ಯುತಿ ವಿಷಯವಾಗಿ ಚರ್ಚೆಗೆ ಅವಕಾಶ ನೀಡಬೇಕು ಎಂದು ಬಿಜೆಪಿ ಶಾಸಕರು ಪಟ್ಟು ಹಿಡಿದರು. ಕೆಲ ಕಾಲ ವಾದ-ಪ್ರತಿವಾದಗಳ ನಡುವೆ ಬಿಜೆಪಿ ಸದಸ್ಯರು ಸಭಾಧ್ಯಕ್ಷರ ಮುಂದಿನ ಬಾವಿಗೆ ಇಳಿದು ಧರಣಿಯನ್ನು ನಡೆಸಿದರು. ಕೊನೆಗೆ ಸಭಾಧ್ಯಕ್ಷರು ವಿಷಯವನ್ನು ಹಕ್ಕುಚ್ಯುತಿ ಸಮಿತಿಗೆ ವಹಿಸಿದರು.

ಸದನದಲ್ಲಿ ಕೆಲವು ವಿಷಯದ ಮೇಲೆ ಜರುಗಿದ ಗದ್ದಲಗಳ ನಡುವೆಯೇ ಕರ್ನಾಟಕ ಸ್ಟಾಂಪ್ ತಿದ್ದುಪಡಿ ಸೇರಿದಂತೆ ಕೆಲ ವಿಧೇಯಕಗಳು ಚರ್ಚೆ ಇಲ್ಲದೆ ಅಂಗೀಕಾರಗೊಂಡವು.

ಕಲಾಪದ ಎರಡನೆ ದಿನದಂದು ನಿಯಮ 69ರ ಅಡಿ ಸಾರ್ವಜನಿಕ ಮಹತ್ವದ ವಿಷಯದಡಿ ರಾಜ್ಯದ ಬರ ಪರಿಸ್ಥಿತಿಯ ಕುರಿತು ಚರ್ಚೆಗೆ ಅವಕಾಶ ಮಾಡಿಕೊಡಲಾಯಿತು. ಹಲವು ಶಾಸಕರು ಚರ್ಚೆಯಲ್ಲಿ ಭಾಗವಹಿಸಿ ಅಮೂಲ್ಯ ಸಲಹೆ ಸೂಚನೆಗಳನ್ನು ನೀಡಿದರು. ಸರ್ಕಾರದ ಪರವಾಗಿ ಉತ್ತರ ನೀಡಿದ ಕಂದಾಯ ಸಚಿವರಾದ ಕೃಷ್ಣಬೈರೇಗೌಡ, ರಾಜ್ಯ 223 ತಾಲ್ಲೂಕುಗಳಲ್ಲಿ ಬರ ಪರಿಸ್ಥಿತಿ ಇದೆ. ಪರಿಹಾರ ಕೆಲಸಗಳಿಗೆ ಆರ್ಥಿಕ ನೆರವು ನೀಡುವಂತೆ ಹಲವು ಬಾರಿ ಮನವಿ ಮಾಡಲಾಗಿದೆ. ಈವರೆಗೂ ಹಣಕಾಸಿನ ನೆರವು ಬಂದಿಲ್ಲ, ಕೇಂದ್ರದ ನೆರವು ಕಾಯುವ ಬದಲು ಪ್ರತಿ ರೈತರ ಖಾತೆಗಳಿಗೆ ತಲಾ ಎರಡು ಸಾವಿರ ರೂಪಾಯಿಗಳ ಮೊದಲ ಕಂತಿನ ಪರಿಹಾರದ ಪಾವತಿಗೆ ವಾರದೊಳಗಾಗಿ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು.

ಕಬ್ಬು ಬೆಳಗಾರರಿಗೆ ಆಗುತ್ತಿರುವ ವಂಚನೆ, ಮಹದಾಯಿ ನದಿಗೆ ಅಡ್ಡಲಾಗಿ ಕಳಸಾ-ಬಂಡೂರಿ ಅಣೆಕಟ್ಟು, ಕಾವೇರಿ ನದಿಗೆ ಮೇಕೆದಾಟು ವಿಚಾರಗಳು, ಲಿಂಗಪತ್ತೆ, ಭ್ರೂಣ ಹತ್ಯೆಯಂತಹ ಸಾಮಾಜಿಕ ಪಿಡುಗುಗಳ ಬಗ್ಗೆಯೂ ವ್ಯಾಪಕ ಚರ್ಚೆಯಾದವು. ಬೆಂಗಳೂರಿನಲ್ಲಿರುವ ಹುಕ್ಕಾ ಬಾರ್‌ಗಳ ಬಗ್ಗೆ ಶಾಸಕರು ಪಕ್ಷ ಬೇಧ ಮರೆತು ಆತಂಕ ವ್ಯಕ್ತಪಡಿಸಿದರು. ಸದ್ಯ ಕಾನೂನಿಲ್ಲಿ ಹಕ್ಕಾ ಬಾರ್‌ಗಳನ್ನು ನಿಯಂತ್ರಿಸಲು ರಾಜ್ಯ ಸರ್ಕಾರದ ಬಳಿ ಯಾವುದೇ ಸಮರ್ಥ ಕಾನೂನುಗಳಿಲ್ಲ. ಮುಂದಿನ ದಿನಗಳಲ್ಲಿ ಇದಕ್ಕಾಗಿಯೇ ಪ್ರತ್ಯೇಕ ನಿಬಂಧನೆಗಳನ್ನು ರೂಪಿಸುವುದಾಗಿ ಗೃಹ ಸಚಿವರಾದ ಡಾ.ಜಿ.ಪರಮೇಶ್ವರ್ ಭರವಸೆ ನೀಡಿದರು.

**ಈಡೇರಿದ ಬಹುಕಾಲದ ಆಶಯ:**

ಕಲಾಪದ ದ್ವಿತೀಯಾರ್ಧದಲ್ಲಿ ಬಹುತೇಕ ಸಮಯವನ್ನು ಉತ್ತರ ಕರ್ನಾಟಕದ ಅಭಿವೃದ್ಧಿಗೆ ಮೀಸಲಿಡಲಾಗಿತ್ತು. ವಿಶೇಷ ಚರ್ಚೆಯಲ್ಲಿ 42 ಶಾಸಕರು 11 ಗಂಟೆ 4 ನಿಮಿಷಗಳ ಕಾಲ ಮಾತನಾಡಿದರು.

ಬೆಳಗಾವಿಯಲ್ಲಿ ಪ್ರತ್ಯೇಕತೆಯ ಕೂಗು ಕೇಳಿ ಬಂದಾಗ ಅದರ ಸದ್ದಡಗಿಸಲು ಸುವರ್ಣ ಸೌಧ ನಿರ್ಮಾಣ ಮಾಡಲಾಯಿತು. ಆದರೂ ಅದರ ಸಂಪೂರ್ಣ ಬಳಕೆಯಾಗುತ್ತಿಲ್ಲ. ಅಧಿವೇಶನ ನಿಗದಿಯಾದಾಗ ಗುಂಡು ಸೂಚಿಯಿಂದ ಆರಂಭಗೊಂಡು ಎಲ್ಲವನ್ನೂ ಹೊಸದಾಗಿ ತಂದು, ಕಲಾಪ ಮುಗಿಸಿ ರಾಜಧಾನಿಗೆ ಮರಳುತ್ತಾರೆ. ಅನಂತರ ಸುವರ್ಣಸೌಧ ಮತ್ತೆ ಖಾಲಿ ಹೊಡೆಯುತ್ತಿರುತ್ತದೆ ಎಂಬ ಆಕ್ಷೇಪಗಳಿವೆ. ಹಲವಾರು ಇಲಾಖೆಗಳನ್ನು ಸ್ಥಳಾಂತರಿಸಬೇಕು, ಸುವರ್ಣಸೌಧ ಪೂರ್ಣಾವಧಿಯಾಗಿ ಕಾರ್ಯನಿರ್ವಹಿಸಬೇಕು ಎಂಬ ಬೇಡಿಕೆ ಇನ್ನೂ ಪೂರ್ಣಗೊಂಡಿಲ್ಲ. ಆದರೆ ಸುವರ್ಣಸೌಧದಲ್ಲಿ ಉತ್ತರ ಕರ್ನಾಟಕ ಭಾಗದ ಚರ್ಚೆಗೆ ಹೆಚ್ಚಿನ ಆದ್ಯತೆ ನೀಡಬೇಕು ಎಂಬ ಆಶಯ ಪ್ರಸಕ್ತ ಸಾಲಿನ ಚಳಿಗಾಲದ ಅಧಿವೇಶನದಲ್ಲಿ ಈಡೇರಿತು.



Downloaded From:www.kpscvaani.com



## ಜನಪರ ಕಾಳಜಿಗೆ ನಿದರ್ಶನ

# ಮುಖ್ಯಮಂತ್ರಿಗಳ ಜನಸ್ಪಂದನ

ನವೆಂಬರ್ 27 ರಂದು ಮುಖ್ಯಮಂತ್ರಿಯವರ ಗೃಹ ಕಚೇರಿ ಕೃಷ್ಣಾದಲ್ಲಿ ನಡೆದ ಜನಸ್ಪಂದನ ಕಾರ್ಯಕ್ರಮವು ಇಡೀ ದಿನ ಬಿಡುವಿಲ್ಲದಂತೆ ನಡೆದು, ಜನರಿಂದ ಉತ್ತಮ ಸ್ಪಂದನೆ ದೊರಕಿತು. ಅಂದು ವಿವಿಧ ದೂರದ ಊರುಗಳಿಂದ ತಮ್ಮ ಅಹವಾಲುಗಳನ್ನು ಹೊತ್ತು ಮುಖ್ಯಮಂತ್ರಿಗಳ ಜನಸ್ಪಂದನ ಕಾರ್ಯಕ್ರಮಕ್ಕೆ ಸಾವಿರಾರು ಸಂಖ್ಯೆಯಲ್ಲಿ ಜನರು ಆಗಮಿಸಿದ ಕಾರಣ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಮಯವನ್ನು ವ್ಯರ್ಥ ಮಾಡಬಾರದು ಎಂಬ ಉದ್ದೇಶದಿಂದ ಮದ್ಯಾಹ್ನದ ಊಟಕ್ಕೂ ತೆರಳದೆ, ತಮ್ಮ ಟೇಬಲ್ ಬಳಿಗೆ ಊಟವನ್ನು ತರಿಸಿಕೊಂಡು ಊಟ ಮಾಡಿದರಲ್ಲದೆ ತಮ್ಮ ಸಮಸ್ಯೆಯನ್ನು ಹೇಳಿಕೊಳ್ಳಲು ಬಂದಿದ್ದ ಜನರಿಗೂ ಊಟದ ವ್ಯವಸ್ಥೆಯನ್ನು ಏರ್ಪಾಡು ಮಾಡಿದ್ದರು.

ಈ ಹಿಂದೆ ಜಿಲ್ಲಾ ಉಸ್ತುವಾರಿ ಸಚಿವರು ತಮ್ಮ ಜಿಲ್ಲೆಗಳಲ್ಲಿ ಜನತಾ ದರ್ಶನ ಕಾರ್ಯಕ್ರಮಗಳನ್ನು ನಡೆಸುವಂತೆ ಮುಖ್ಯಮಂತ್ರಿಯವರು ಸೂಚಿಸಿರುವುದರಿಂದ ಜಿಲ್ಲಾ ಉಸ್ತುವಾರಿ ಸಚಿವರು ಕೂಡ ಪ್ರತಿ ತಿಂಗಳು ಜನತಾ ಸ್ಪಂದನ ಮಾಡುತ್ತಿದ್ದಾರೆ. ಆದಾಗ್ಯೂ ತಮ್ಮ ಸಮಸ್ಯೆಗಳಿಗೆ ಪರಿಹಾರ ದೊರಕದ ಕಾರಣ ತಮ್ಮ ಸಮಸ್ಯೆಗಳನ್ನು ದೊರೆಗಳ





**ಜನಸ್ಪಂದನದಲ್ಲಿ ಸಾರ್ವಜನಿಕರು ತಾವು ಸಲ್ಲಿಸಿದ ಕುಂದುಕೊರತೆ/ಅಹವಾಲಿನ ಸ್ಥಿತಿಗತಿಯನ್ನು ತಿಳಿದುಕೊಳ್ಳಲು 1902 ಟೋಲ್ ಫ್ರೀ ನಂಬರ್ ಅನ್ನು ಸ್ಥಾಪಿಸಲಾಗಿದೆ.**



Downloaded From:www.kpscvaani.com



**ಲಕ್ಷ್ಮೀಬಾಯಿ, ಹುಣಸೂರು**

ಹುಣಸೂರಿನ ಕಲ್ಲಹಳ್ಳಿ ಪಂಚಾಯ್ತಿಯ ಲಕ್ಷ್ಮೀಬಾಯಿ ಎನ್ನುವವರು ಅಲೆಮಾರಿ ಡೋಂಗ್ರಿ ಗೆರೆಸಿಯಾ ಸಮುದಾಯಾದವರಿಗೆ 40 ಮನೆಗಳು ಮಂಜೂರಾಗಿವೆ. ಇವರಿಗೆ ಮನೆ ಕಟ್ಟಲು ಮಂಜೂರಾತಿ ನೀಡುವಂತೆ ಮನವಿ ಮಾಡಿದರು. ಮನವಿ ಸ್ವೀಕರಿಸಿದ ಮುಖ್ಯಮಂತ್ರಿ ಅವರು ಅಲೆಮಾರಿ ಅಭಿವೃದ್ಧಿ ನಿಗಮದ ಎಂಡಿ ಅವರನ್ನು ಕರೆದು, ಅರ್ಜಿಯನ್ನು ಸಮಗ್ರವಾಗಿ ಪರಿಶೀಲಿಸಿ ಅಗತ್ಯ ಕ್ರಮವಹಿಸಿ ತಮಗೆ ವರದಿ ನೀಡವಂತೆ ಸೂಚಿಸಿದರು.



**ಪರಂಧಾಮಯ್ಯ, ಮಂಡ್ಯ**

ಮಂಡ್ಯ ಜಿಲ್ಲೆಯ 96 ವರ್ಷದ ಪರಂಧಾಮಯ್ಯ ಅವರು ನಾಗಮಂಗಲದಿಂದ ತಾಳವಾಡಿಯ ಮಾರ್ಗ ಮಧ್ಯೆಯೇ ಜಮೀನು ಹೊಂದಿದ್ದು, ವ್ಯವಸಾಯ ಮಾಡುವ ಜಮೀನು ಬೈಪಾಸಿಗೆ ಒತ್ತುವರಿ ಮಾಡಿಕೊಳ್ಳಲಾಗಿದೆ ಎಂದು ನೀಡಿದ ದೂರಿಗೆ ಕೂಡಲೇ ಮಂಡ್ಯ ಜಿಲ್ಲಾಧಿಕಾರಿಗಳಿಗೆ ಆನ್‌ಲೈನ್ ಮೂಲಕ ಮಾತನಾಡಿದ ಮುಖ್ಯಮಂತ್ರಿಗಳು ಸೂಕ್ತ ಕ್ರಮ ವಹಿಸುವಂತೆ ಸೂಚಿಸಿದರು. 96 ವರ್ಷದ ಪರಂಧಾಮಯ್ಯ ಜೀವನೋತ್ಸಾಹಕ್ಕೆ ಮುಖ್ಯಮಂತ್ರಿಗಳು ಮೆಚ್ಚುಗೆ ಸೂಚಿಸಿ ಇನ್ನಷ್ಟು ಕಾಲ ಹೀಗೇ ಆರೋಗ್ಯವಾಗಿರಿ ಎಂದು ಶುಭ ಕೋರಿದರು.



**ಮಳೂರು ಗ್ರಾಮಸ್ಥರ ದೂರು**

ಚನ್ನಪಟ್ಟಣ ತಾಲ್ಲೂಕು ಮಳೂರು ಗ್ರಾಮದಲ್ಲಿ ಜಮೀನಿಗೆ ಗಾಡಿ ಹೊಡೆಯಲು ರಸ್ತೆ ನಿರ್ಮಾಣ ಕಾರ್ಯವನ್ನು ಗ್ರಾಮಪಂಚಾಯಿತಿಯವರು ಅರ್ಧಕ್ಕೆ ಸ್ಥಗಿತಗೊಳಿಸಿರುವುದರಿಂದ ತೊಂದರೆಯಾಗಿದೆ ಎಂದು ಗ್ರಾಮಸ್ಥರು ಸಲ್ಲಿಸಿದ ಮನವಿಯನ್ನು ಮುಖ್ಯಮಂತ್ರಿ ಅವರು ಗಂಭೀರವಾಗಿ ಪರಿಗಣಿಸಿದರು. ಕೂಡಲೇ ಆನ್‌ಲೈನ್ ಮೂಲಕ ಸಂಬಂಧಪಟ್ಟವರನ್ನು ಸಂಪರ್ಕಿಸಿ ಅಗತ್ಯ ಕ್ರಮ ಕೈಗೊಳ್ಳುವಂತೆ ಪಂಚಾಯತ್ ರಾಜ್ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದರು.

ಬಳಿಯೇ ಹೇಳುವುದು ಸೂಕ್ತ ಎಂದು ಭಾವಿಸಿ ಬಹಳಷ್ಟು ಜನರು ಮುಖ್ಯಮಂತ್ರಿ ಅವರ ಜನಸ್ಪಂದನ ಕಾರ್ಯಕ್ರಮಕ್ಕೆ ಆಗಮಿಸಿದ್ದರು.

ಬೆಳಿಗ್ಗೆಯಿಂದ 10 ಗಂಟೆಯಿಂದ ಸಂಜೆಯವರೆಗೆ ಬಿಡುವಿಲ್ಲದಂತೆ ನಡೆದ ಮುಖ್ಯಮಂತ್ರಿ ಅವರ ಜನಸ್ಪಂದನ ಕಾರ್ಯಕ್ರಮದಲ್ಲಿ ವೈದ್ಯಕೀಯ ವೆಚ್ಚ, ಕಂದಾಯ ಹಾಗೂ ಪೊಲೀಸ್ ಇಲಾಖೆಗಳಿಗೆ ಸಂಬಂಧಪಟ್ಟ ಸಮಸ್ಯೆಗಳೇ ಹೆಚ್ಚಾಗಿ ಬಂದಿದ್ದವು. ಸುಮಾರು 3500 ಕ್ಕೂ ಹೆಚ್ಚು ಅರ್ಜಿಗಳನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ ಜನರಿಂದ ಖುದ್ದು ಸ್ವೀಕರಿಸಿ, ಅವರ ಸಮ್ಮುಖದಲ್ಲೇ ವಿಡಿಯೋ ಕಾನ್ಫರೆನ್ಸ್ ಮೂಲಕ ಆಯಾ ಜಿಲ್ಲಾಧಿಕಾರಿಗಳಿಗೆ ಅಗತ್ಯ ಕ್ರಮವಹಿಸುವಂತೆ ಸೂಚಿಸುವಾಗ ಅರ್ಜಿದಾರರ ಮುಖದಲ್ಲಿ ನಿರಾಳ ಭಾವ ಕಂಡುಬರುತಿತ್ತು.

ಜನಸ್ಪಂದನ ಕಾರ್ಯಕ್ರಮದಲ್ಲಿ ಸ್ವೀಕೃತವಾದ ಅರ್ಜಿಗಳಿಗೆ ಒಂದು ವಾರ ಅಥವಾ ಹದಿನೈದು ದಿನದಲ್ಲಿ ಪರಿಹಾರ ನೀಡಬೇಕು. ಇಲ್ಲದಿದ್ದಲ್ಲಿ, ಪರಿಹಾರ ನೀಡಲು ಏಕೆ ಸಾಧ್ಯವಿಲ್ಲ ಎಂದು ಲಿಖಿತವಾಗಿ ಮುಖ್ಯಮಂತ್ರಿಯವರ ಕಚೇರಿಗೆ ತಿಳಿಸಬೇಕು ಎಂದು ಈ ಸಂದರ್ಭದಲ್ಲಿ ಮುಖ್ಯಮಂತ್ರಿ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಸಂಜೆಯಾಗುತ್ತಿದ್ದರೂ ಜನರ ಸಂಖ್ಯೆಯು ಕ್ಷೀಣಿಸದ ಕಾರಣ ಮುಖ್ಯಮಂತ್ರಿ ಅವರು ತಾವು ಕೂತಿದ್ದ ಜಾಗದಿಂದ ಎದ್ದು, ಸರದಿ ಸಾಲಿನಲ್ಲಿ ನಿಂತಿದ್ದ ಜನರ ಬಳಿಗೆ ತೆರಳಿ ಅರ್ಜಿಗಳನ್ನು ಖುದ್ದು ಪಡೆದುಕೊಂಡರು. ಇದಕ್ಕೂ ಮುನ್ನ ಅವರು ವಿಕಲಚೇತನರ ಬಳಿಗೂ ಕೂಡ



**ಮಹದೇವಮ್ಮ, ತುಮಕೂರು**

ತುಮಕೂರು ಜಿಲ್ಲೆ ತಿಪಟೂರು ತಾಲ್ಲೂಕಿನ ಮಹದೇವಮ್ಮ ಅವರು, ಮಗ ಆಸ್ತಿಯಲ್ಲಿ ಪಾಲು ಕೊಡದೇ ಮೋಸ ಮಾಡಿದ್ದಾರೆ, ಆಸ್ತಿ ವಿಭಾಗ ಪತ್ರವನ್ನು ಕೊಡಿಸಿ ರಕ್ಷಣೆ ನೀಡುವಂತೆ ಮನವಿ ಮಾಡಿದರು. ಮುಖ್ಯಮಂತ್ರಿ ಅವರು ಜಿಲ್ಲಾ ರಕ್ಷಣಾಧಿಕಾರಿಗಳಿಗೆ ದೂರವಾಣಿ ಕರೆ ಮಾಡಿ, ಮಹದೇವಮ್ಮ ಅವರಿಗೆ ನ್ಯಾಯ ಕೊಡಿಸುವಂತೆ ಸೂಚಿಸಿದರು.



Downloaded From:www.kpscvaani.com



**ಬ್ಯಾಟರಾಯನಪುರದ ನಿವಾಸಿಗರು**

ಬೆಂಗಳೂರಿನ ಬ್ಯಾಟರಾಯನಪುರದ 3 ನೇ ಅಡ್ಡ ರಸ್ತೆಯಲ್ಲಿ ರಾಜೇಶ್ವರಿ ಮಲ್ಲೇಶ್ ಎಂಬುವರ ಮನೆಯಲ್ಲಿ ಭೋಗ್ಯಕ್ಕೆ ನೆಲೆಸಿರುವ ನಿವಾಸಿಗಳು ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ಮನೆ ಮಾಲೀಕರು ನಾಪತ್ತೆಯಾಗಿದ್ದು, ಬ್ಯಾಂಕ್‌ನವರು ಮನೆ ಜಪ್ತಿಗೆ ಬಂದಿದ್ದಾರೆ. ನಾವು ಈ ಮನೆಗೆ ಲೀಸ್‌ಗೆ ಬಂದಿದ್ದೇವೆ. ಆದರೆ ಮನೆ ಮಾಲೀಕರು ಮನೆಯ ಮೇಲೆ ಸಾಲ ಪಡೆದು ಅದನ್ನು ಕಟ್ಟದೆ ಪರಾರಿ ಆಗಿದ್ದಾರೆ. ಈಗ ಬ್ಯಾಂಕಿನವರು ಮನೆ ಜಪ್ತಿಗೆ ಬಂದಿದ್ದಾರೆ. ನಮ್ಮ ಲೀಸ್ ಹಣವೂ ಹೋಗುತ್ತದೆ ಎಂದು ಗೋಳು ತೋಡಿಕೊಂಡರು. ತಾವು ಹಾಕಿದ ಹಣ ಕಳೆದುಕೊಳ್ಳುವ ಭೀತಿಯಲ್ಲಿದ್ದೇವೆ. ಮಕ್ಕಳೊಂದಿಗೆ ಬೀದಿಗೆ ಬರುವ ಸ್ಥಿತಿ ಇದೆ, ನೆರವು ನೀಡಿ ಎಂದು ಮನವಿ ಮಾಡಿದರು. ತಕ್ಷಣ ಮುಖ್ಯಮಂತ್ರಿ ಅವರು ನಗರ ಪೊಲೀಸ್ ಕಮಿಷನರ್ ದಯಾನಂದ್ ಅವರನ್ನು ಕರೆದು ಪ್ರಕರಣವನ್ನು ಪರಿಶೀಲಿಸುವಂತೆ ಸೂಚಿಸಿದರು.



**ದಿನೇಶ್, ಚಿಕ್ಕಮಗಳೂರು**

ಚಿಕ್ಕಮಗಳೂರು ಜಿಲ್ಲೆಯ ಕರ್ಕಿಪೇಟೆಯ ದಿನೇಶ್ ಎಂಬುವರು 40 ವರ್ಷಗಳಿಂದ ಬಗರ್ ಹುಕುಂ ಸಾಗುವಳಿ ಮಾಡಿಕೊಂಡು ಬಂದಿದ್ದು, ಸೆಕ್ಷನ್ 50, 53 ಹಾಗೂ 57 ರಡಿ ಸಕ್ರಮಗೊಳಿಸಲು ಅರ್ಜಿ ಸಲ್ಲಿಸಿದ್ದರೂ ಈ ಕುರಿತು ಯಾವುದೇ ರೀತಿಯ ಕ್ರಮ ಆಗಿಲ್ಲ ಎಂದು ಸಾಗುವಳಿ ಚೀಟಿ ಒದಗಿಸುವಂತೆ ಮರು ಮನವಿಯನ್ನು ಮುಖ್ಯಮಂತ್ರಿ ಅವರಿಗೆ ಸಲ್ಲಿಸಿದರು. ಮುಖ್ಯಮಂತ್ರಿ ಅವರು ಆನ್‌ಲೈನ್ ಮೂಲಕ ಚಿಕ್ಕಮಗಳೂರು ಜಿಲ್ಲಾಧಿಕಾರಿಗಳಿಗೆ ಈ ಸಮಸ್ಯೆಯನ್ನು ಪರಿಶೀಲಿಸಿ ಕ್ರಮ ಕೈಗೊಳ್ಳುವಂತೆ ಸೂಚಿಸಿದರು.



**ಪುಟ್ಟಸ್ವಾಮಿ, ಜಾನಪದ ಕಲಾವಿದರು**

ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಜಾನಪದ ಕಲಾವಿದರಾದ ಪುಟ್ಟಸ್ವಾಮಿ ಅವರು ಹೃದ್ರೋಗ ಚಿಕಿತ್ಸೆಗಾಗಿ ನೆರವು ನೀಡುವಂತೆ ಮನವಿ ಮಾಡಿದರು. ಮುಖ್ಯಮಂತ್ರಿಯವರು ಪುಟ್ಟಸ್ವಾಮಿ ಅವರಿಗೆ ನೆರವು ನೀಡುವಂತೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕರಿಗೆ ಸೂಚಿಸಿದರು.



**ಸುನಿತ, ಸೀಗೇಹಳ್ಳಿಗೇಟ್**

ಅಕ್ಟೋಬರ್ 20 ರಂದು ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಾಗಿದ್ದಾಗ, ರಾತ್ರಿಯಿಡೀ ಬೇಧಿ ಆಗಿ ನನ್ನ ಬಟ್ಟೆ ಗಲೀಜಾಗಿದ್ದ ಕಾರಣ ಆಸ್ಪತ್ರೆ ಸಿಬ್ಬಂದಿ ಮಧ್ಯರಾತ್ರಿಯಲ್ಲೇ ಆಸ್ಪತ್ರೆಯಿಂದ ತೆರಳುವಂತೆ ಬೆದರಿಸಿದರಲ್ಲದೆ ಆಯಾಸಗೊಂಡಿದ್ದ ನನಗೆ ಗ್ಲೂಕೋಸ್ ಕೂಡ ಹಾಕದೆ ಕೆಟ್ಟದಾಗಿ ವರ್ತಿಸಿದರು ಎಂದು ಸೀಗೇಹಳ್ಳಿಗೇಟ್ ನಿವಾಸಿ ಸುನಿತ  ಅವರು ಮುಖ್ಯಮಂತ್ರಿ ಅವರ ಬಳಿ ದೂರಿದರು. ಇದಕ್ಕೆ ಮುಖ್ಯಮಂತ್ರಿ ಅವರು ಸ್ಥಳದಲ್ಲೇ ಇದ್ದ ವೈದ್ಯಕೀಯ ಶಿಕ್ಷಣ ಇಲಾಖೆಯ ಅಪರ ಮುಖ್ಯಕಾರ್ಯದರ್ಶಿಗಳಾದ ಜಾವೇದ್ ಅಖ್ತರ್ ಅವರನ್ನು ಕರೆದು ಸಂಬಂಧಪಟ್ಟವರಿಂದ ವಿವರಣೆ ಕೇಳುವಂತೆ ಸೂಚಿಸಿದರು.

ತಾವೇ ಹೋಗಿ ಅಹವಾಲು ಸ್ವೀಕರಿಸಿ, ತ್ವರಿತವಾಗಿ ಪರಿಹಾರ ನೀಡಲು ಅಧಿಕಾರಿಗಳಿಗೆ ತಿಳಿಸಿದರು.

ಜನಸ್ಪಂದನದಲ್ಲಿ ಉದ್ಯೋಗ ಬೇಡಿಕೆಯೊಂದಿಗೆ ಹೆಚ್ಚಿನ ಸಂಖ್ಯೆಯಲ್ಲಿ ವಿಶೇಷಚೇತನರು ಆಗಮಿಸಿದ್ದರು. ಅವರಿಗೆ ಸಾಧ್ಯವಾದ ಕಡೆಗಳಲ್ಲಿ ಉದ್ಯೋಗ ಹಾಗೂ ಮಾಸಾಶನ ಒದಗಿಸಲು ಮುಖ್ಯಮಂತ್ರಿಗಳು ಸೂಚನೆ ನೀಡಿದರು.

ಈ ಜನಸ್ಪಂದನ ಕಾರ್ಯಕ್ರಮವು ಮುಖ್ಯಮಂತ್ರಿಗಳು ಅಧಿಕಾರ ಸ್ವೀಕರಿಸಿದ ಬಳಿಕ ನಡೆದ ಎರಡನೇ ಜನಸ್ಪಂದನ


Downloaded From:www.kpscvaani.com



ಕಾರ್ಯಕ್ರಮವಾದರೂ ಪೂರ್ಣ ಪ್ರಮಾಣದಲ್ಲಿ ದಿನವಿಡೀ ನಡೆದ ಮೊದಲ ಜನಸ್ಪಂದನ ಕಾರ್ಯಕ್ರಮವಾಗಿತ್ತು. ಜನರ ಸಮಸ್ಯೆಗೆ ಪರಿಹಾರ ಒದಗಿಸುವ ಜನಸ್ಪಂದನ ಕಾರ್ಯಕ್ರಮಕ್ಕೆ ವಿವಿಧ ಜಿಲ್ಲೆಗಳಿಂದ ನಿರೀಕ್ಷೆಗೂ ಮೀರಿ ಜನರು ಆಗಮಿಸಿದ್ದರು. ಹಾಗಾಗಿ ಜನಸ್ಪಂದನವು ಅತ್ಯಂತ ಯಶಸ್ವಿಯಾಗಿ ಜರುಗಿತು. ಕೆಲವು ಅರ್ಜಿಗಳಿಗೆ ಸ್ಥಳದಲ್ಲೇ ಪರಿಹಾರ ಒದಗಿಸಲು ಸಾಧ್ಯವಾಗುತ್ತದೆ. ಆದರೆ ಕೆಲವು ಅರ್ಜಿಗಳನ್ನು ಕೂಡಲೇ ತೀರ್ಮಾನ ಮಾಡಲು ಸಾಧ್ಯವಾಗುವುದಿಲ್ಲ, ಕೆಲವು ಅರ್ಜಿಗಳಿಗೆ ಸಮಯ ಹಿಡಿಯುತ್ತದೆ. ಆದರೆ ಈ ಜನಸ್ಪಂದನದಲ್ಲಿ ಬಹುಪಾಲು ಜನರ ಸಮಸ್ಯೆಗಳಿಗೆ ಸ್ಥಳದಲ್ಲೇ ಪರಿಹಾರ ದೊರೆತ ಹಿನ್ನೆಲೆಯಲ್ಲಿ ಜನರು ಕೂಡ ಸಂತೃಪ್ತ ಭಾವದಿಂದ ಮರಳಿದರು.

**ಅಧಿಕಾರಿಗಳಿಗೆ ಮುಖ್ಯಮಂತ್ರಿಗಳ ಖಡಕ್ ಸೂಚನೆ:**

ಜನಸ್ಪಂದನ ಕಾರ್ಯಕ್ರಮದಲ್ಲಿ ಬಹುತೇಕವಾಗಿ ಕಂದಾಯ, ಪೊಲೀಸ್ ಇಲಾಖೆ, ಗೃಹಲಕ್ಷ್ಮಿ ಯೋಜನೆ, ಬಿಬಿಎಂಪಿ, ಪಿಂಚಣಿ, ವೈದ್ಯಕೀಯ ವೆಚ್ಚ, ಉದ್ಯೋಗ ಕೊಡಿಸಿ ಎಂಬ ಮನವಿಗಳು ಹೆಚ್ಚಾಗಿ ಬಂದಿದ್ದವು. ಕಾರ್ಯಕ್ರಮದ ನಂತರ ಅಧಿಕಾರಿಗಳನ್ನು ಉದ್ದೇಶಿಸಿ ಮಾತನಾಡಿದ ಮುಖ್ಯಮಂತ್ರಿಗಳು ಜನರು ಜಿಲ್ಲಾ ಮಟ್ಟದಲ್ಲೇ ಬಗೆಹರಿಯುವಂತಹ ಸಮಸ್ಯೆಗಳಿಗೂ ನನ್ನ ಬಳಿಗೆ ಬಂದಿದ್ದಾರೆ. ಅವರು ದುಡ್ಡು ಖರ್ಚು ಮಾಡಿಕೊಂಡು ಬೆಂಗಳೂರಿನವರೆಗೂ ಬಂದರೆ ಅದು ಜಿಲ್ಲಾ ಮಟ್ಟದ ಅಧಿಕಾರಿಗಳ ವೈಫಲ್ಯ ಎಂದರ್ಥ. ವಿಳಂಬ ಕೂಡ ಭ್ರಷ್ಟಾಚಾರದ ಮತ್ತೊಂದು ರೂಪವಾಗಿದೆ. ಆದ್ದರಿಂದ ಕೂಡಲೇ ಜನರಿಗೆ ಸ್ಪಂದಿಸುವಂತೆ ಮುಖ್ಯಮಂತ್ರಿ ಅವರು ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಖಡಕ್ ಎಚ್ಚರಿಕೆಯನ್ನು ನೀಡಿದರು. ಜಿಲ್ಲಾಧಿಕಾರಿಗಳು, ತಹಸೀಲ್ದಾರರು ಮತ್ತು ಉಪವಿಭಾಗಾಧಿಕಾರಿಗಳು ಜನರ ಸಮಸ್ಯೆಗಳಿಗೆ ಸ್ಪಂದಿಸಿದರೆ ಜನರು ಬೆಂಗಳೂರಿನ ತನಕ ಬರುವುದನ್ನು ತಪ್ಪಿಸಲು ಸಾಧ್ಯ. ಆದ್ದರಿಂದ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆಯನ್ನು ನೀಡುವಂತೆ ಕಂದಾಯ ಇಲಾಖೆಯ ಪ್ರಧಾನ ಕಾರ್ಯದಶಿಗಳಿಗೆ ಸೂಚನೆ ನೀಡಿದರು.

ರಾಜ್ಯದ ಮೂಲೆ ಮೂಲೆಯಿಂದ ತಮ್ಮ ಸಮಸ್ಯೆಗಳನ್ನು ಹೇಳಿಕೊಳ್ಳಲು ಜನರು ಬಂದುದನ್ನು ಗಮನಿಸಿದ ಮುಖ್ಯಮಂತ್ರಿ ಅವರು ಇನ್ನು ಮುಂದೆ ಮೂರು ತಿಂಗಳಿಗೊಮ್ಮೆ ಜನಸ್ಪಂದನ ಕಾರ್ಯಕ್ರಮವನ್ನು ನಡೆಸಲಾಗುವುದು ಎಂದು ತಿಳಿಸಿದ್ದಾರೆ.



**ಜನಸ್ಪಂದನದ ವಿಶೇಷತೆಗಳು**

ಮುಖ್ಯಮಂತ್ರಿಯವರು ಅಂದಿನ ಅಪರ ಮುಖ್ಯ ಕಾರ್ಯದರ್ಶಿ ಡಾ. ರಜನೀಶ್ ಗೋಯಲ್ ಅವರ ನೇತೃತ್ವದಲ್ಲಿ ಮುಖ್ಯಮಂತ್ರಿ ಸಚಿವಾಲಯವು ಜನಸ್ಪಂದನ ಕಾರ್ಯಕ್ರಮಕ್ಕೆ ಮುಖ್ಯಮಂತ್ರಿ ಅವರ ಗೃಹ ಕಚೇರಿ ಕೃಷ್ಣಾದಲ್ಲಿ ಸಕಲ ಸಿದ್ಧತೆಯನ್ನು ಮಾಡಿಕೊಂಡಿತ್ತು.

ಎರಡನೇ ಬಾರಿ ಮುಖ್ಯಮಂತ್ರಿ ಆದ ಬಳಿಕ ನಡೆಯುತ್ತಿರುವ ಮೊದಲ ಪೂರ್ಣಾವಧಿ ಜನತಾ ದರ್ಶನದಲ್ಲಿ ವಿಶೇಷಚೇತನರು ಮತ್ತು ಹಿರಿಯ ನಾಗರಿಕರ ಅಹವಾಲು ಸ್ವೀಕಾರಕ್ಕೆ ಸ್ಥಳದಲ್ಲೇ ಪರಿಹಾರಕ್ಕೆ ಆದ್ಯತೆ ನೀಡಲಾಗಿತ್ತು. ಹರಿಯ ಅಧಿಕಾರಿಗಳೇ ಅವರ ಬಳಿಗೆ ತೆರಳಿ ಅವರ ಅಹವಾಲುಗಳನ್ನು ಸ್ವೀಕರಿಸಿದರು.

ಅರ್ಜಿಗಳನ್ನು ಸ್ವೀಕರಿಸಿ ಅವರಿಗೆ ಸ್ವೀಕೃತಿ ನೀಡಲು 20 ಕೌಂಟರ್‌ಗಳನ್ನು ತೆರೆಯಲಾಗಿತ್ತು. ಜೊತೆಗೆ ಈ ಕೌಂಟರ್‌ಗಳ ನಿರ್ವಹಣೆಗಾಗಿ ನೂರಕ್ಕೂ ಹೆಚ್ಚು ಅಧಿಕಾರಿಗಳನ್ನು ನಿಯುಕ್ತಿಗೊಳಿಸಲಾಗಿತ್ತು. ಹಾಗೆಯೇ ವಿಶೇಷಚೇತನರು ಮತ್ತು ಹಿರಿಯ ನಾಗರಿಕರಿಗೆ ಪ್ರತ್ಯೇಕ ಕೌಂಟರ್‌ಗಳ ವ್ಯವಸ್ಥೆಯನ್ನು ಮಾಡಲಾಗಿತ್ತು.

ಈ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿಯವರ ಸಚಿವಾಲಯದ ಹಿರಿಯ ಅಧಿಕಾರಿಗಳು, ಸರ್ಕಾರದ ಎಲ್ಲ ಕಾರ್ಯದರ್ಶಿಗಳು, ಇಲಾಖಾ ಮುಖ್ಯಸ್ಥರು ಖುದ್ದು ಹಾಜರಿದ್ದರು. ಹಾಗೂ ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು ಹಾಗೂ ಪೊಲೀಸ್ ವರಿಷ್ಠಾಧಿಕಾರಿಗಳು ಮತ್ತು ಎಲ್ಲಾ ಜಿಲ್ಲಾ/ ಉಪವಿಭಾಗ/ ತಾಲ್ಲೂಕು ಮಟ್ಟದ ಅಧಿಕಾರಿಗಳು ಆನ್‌ಲೈನ್ ಮೂಲಕ ಹಾಜರಿದ್ದರು.

ಅಹವಾಲು ಸಲ್ಲಿಸಲು ಆಗಮಿಸಿದ್ದ ನಾಗರಿಕರಿಗೆ ಕುಡಿಯುವ ನೀರು, ಆಹಾರ ಹಾಗೂ ಶೌಚಾಲಯ ಮತ್ತು ಇತರ ಮೂಲಭೂತ ಸೌಕರ್ಯಗಳ ವ್ಯವಸ್ಥೆಯನ್ನು ಮಾಡಲಾಗಿತ್ತು.



Downloaded From:www.kpscvaani.com




# ಸರ್ಕಾರದ ಐದನೇ ಗ್ಯಾರಂಟಿ ಯೋಜನೆಯಾದ

# ಯುವನಿಧಿಗೆ ಚಾಲನೆ

ಎಸ್.ಆರ್. ಆರಾಧ್ಯ

ರಾಜ್ಯ ಸರ್ಕಾರದ ಕೊನೆಯ ಹಾಗೂ ಬಹುನಿರೀಕ್ಷಿತ ಗ್ಯಾರಂಟಿ ಯೋಜನೆಯಾದ 'ಯುವನಿಧಿ' ಯೋಜನೆ ನೋಂದಣಿ ಅಭಿಯಾನಕ್ಕೆ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯನವರು 2023 ಡಿಸೆಂಬರ್ 26ರಂದು ಚಾಲನೆ ನೀಡುವ ಮೂಲಕ ಹೊಸ ಸರ್ಕಾರದ ಐದನೇ ಗ್ಯಾರಂಟಿಯ ಅನುಷ್ಠಾನಕ್ಕೆ ಹಸಿರು ನಿಶಾನೆ ತೋರಿದ್ದಾರೆ. ಆ ಮೂಲಕ ಪದವೀಧರ ಯುವಕ–ಯುವತಿಯರಿಗೆ ಹೊಸ ವರ್ಷಕ್ಕೆ 'ಯುವನಿಧಿ'ಯ ಬಂಪರ್ ಕೊಡುಗೆ ದೊರಕಿದಂತ್ತಾಗಿದೆ.

ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಜರುಗಿದ ಪ್ರಧಾನ ಸಮಾರಂಭದಲ್ಲಿ ಉಪಮುಖ್ಯಮಂತ್ರಿಗಳಾದ ಡಿ.ಕೆ.ಶಿವಕುಮಾರ್‌ರವರು ಯುವನಿಧಿ ಯೋಜನೆಯ ಪೋಸ್ಟರ್ ಅನಾವರಣ ಮಾಡಿದರು. ವೈದ್ಯಕೀಯ ಮತ್ತು ಕೌಶಲ್ಯಾಭಿವೃದ್ಧಿ ಸಚಿವರಾದ ಡಾ. ಶರಣಪ್ರಕಾಶ ರುದ್ರಪ್ಪ ಪಾಟೀಲ್‌ರವರು 'ಯುವನಿಧಿ' ಲೋಗೋ ಅನಾವರಣಗೊಳಿಸಿದರು.

ಕಳೆದ ವಿಧಾನಸಭಾ ಚುನಾವಣೆಯ ವೇಳೆ ಕಾಂಗ್ರೆಸ್ ಪಕ್ಷದ ಪ್ರಣಾಳಿಕೆಯಲ್ಲಿ ನೀಡಲಾದ ಪಂಚ ಗ್ಯಾರಂಟಿಗಳ ಭರವಸೆಯಂತೆ ಈಗಾಗಲೇ ನಾಲ್ಕು ಯೋಜನೆಗಳನ್ನು ಕಾರ್ಯರೂಪಕ್ಕೆ ತರಲಾಗಿದ್ದು, ಐದನೆಯ ಗ್ಯಾರಂಟಿಯಾದ 'ಯುವನಿಧಿ' ಯೋಜನೆಗೆ ಹೊಸ ವರ್ಷದ ಹೊಸ್ತಿಲಿನಲ್ಲಿ ಚಾಲನೆ ದೊರೆಯುತ್ತಿರುವುದು ನಾಡಿನ ಯುವಪೀಳಿಗೆಗೆ ಅಪಾರ ಸಂತಸದ ವಿಷಯವಾಗಿದೆ. 'ಉದ್ಯೋಗ ಕೊಡಿ ಇಲ್ಲವೇ ಅಲ್ಲಿಯವರೆಗೆ ನಿರುದ್ಯೋಗ ಭತ್ಯೆ ಕೊಡಿ' ಎಂಬ ಯುವಜನ ಸಮುದಾಯದ ಬಹುಕಾಲದ ಬೇಡಿಕೆಗೆ ಕೊನೆಗೂ ಮನ್ನಣೆ ದೊರೆತಿರುವುದು ಸ್ವಾಗತಾರ್ಹವಾಗಿದೆ. ನೂತನ ವರ್ಷದ ಈ ಬಂಪರ್ ಕೊಡುಗೆಯು ವಿದ್ಯಾರ್ಥಿ ಯುವಜನರಲ್ಲಿ ನವೋಲ್ಲಾಸ ಮೂಡಿಸಿದ್ದು ಸಾರ್ವಜನಿಕ ವಲಯದಲ್ಲಿ ಅಪಾರ ಪ್ರಶಂಸೆಗೆ ಪಾತ್ರವಾಗಿದೆ.

2023 ಡಿಸೆಂಬರ್ 26ರಿಂದ ಈ ಯೋಜನೆಗೆ ಅರ್ಜಿಯನ್ನು ಸಲ್ಲಿಸಲು ಅವಕಾಶ ಕಲ್ಪಿಸಲಾಗಿದ್ದು 2024ರ ಜನವರಿ ಮಾಹೆಯಲ್ಲಿ ಯೋಜನೆಯು ಜಾರಿಗೆ ಬರಲಿದ್ದು, ಫೆಬ್ರವರಿ ತಿಂಗಳಿಂದ ಫಲಾನುಭವಿಗಳ ಬ್ಯಾಂಕ್ ಖಾತೆಗೆ ನಿರುದ್ಯೋಗ



Downloaded From:www.kpscvaani.com

ಭತ್ಯೆ ಹಣ ನೇರವಾಗಿ ಸಂದಾಯವಾಗಲಿದೆ. 2022-23 ನೇ ಸಾಲಿನಲ್ಲಿ ಪದವಿ ಅಥವಾ ಡಿಪ್ಲೊಮಾ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಆರು ತಿಂಗಳಾದರೂ ಉದ್ಯೋಗ ಸಿಗದಿರುವ ಯುವಕ-ಯುವತಿಯರು ಯೋಜನೆಯ ಪ್ರಯೋಜನ ಪಡೆಯಬಹುದಾಗಿದೆ. ಒಟ್ಟು 5,29,153 ಫಲಾನುಭವಿಗಳು ಈ ಯೋಜನೆಯ ವ್ಯಾಪ್ತಿಗೊಳಪಡುವರೆಂದು ಅಂದಾಜು ಮಾಡಲಾಗಿದ್ದು ಆ ಪೈಕಿ 4,81,000 ಪದವೀಧರರು ಹಾಗೂ 48,153 ಡಿಪ್ಲೊಮಾ ತೇರ್ಗಡೆಯಾದವರು ಸೇರಿದ್ದಾರೆ. ನಿರುದ್ಯೋಗ ಭತ್ಯೆ ಯೋಜನೆ ಜಾರಿಗೊಳಿಸಿರುವ ದೇಶದ ಕೆಲವೇ ರಾಜ್ಯಗಳ ಸಾಲಿಗೆ ಇದೀಗ ಕರ್ನಾಟಕವೂ ಸಹ ಸೇರ್ಪಡೆಯಾಗಿದೆ.

ಪದವೀಧರ ನಿರುದ್ಯೋಗಿಗಳಿಗೆ ಮಾಸಿಕ ರೂ. 3000/- ಹಾಗೂ ಡಿಪ್ಲೊಮಾ ಪೂರ್ಣಗೊಳಿಸಿದವರಿಗೆ ರೂ. 1500/- ಭತ್ಯೆಯನ್ನು ನಿಗದಿಪಡಿಸಲಾಗಿದ್ದು ಎರಡು ವರ್ಷಗಳ ಕಾಲ ಅರ್ಹ ಫಲಾನುಭವಿಗಳಿಗೆ ಈ ಸೌಲಭ್ಯವು ದೊರೆಯಲಿದೆ. ಈ ನೂತನ ಯೋಜನೆಗೆ ಪ್ರಾಥಮಿಕವಾಗಿ ಪ್ರಸಕ್ತ ವರ್ಷ 250 ಕೋಟಿ ರೂಗಳ ಅಗತ್ಯವಿದ್ದು ಮುಂದಿನ ವರ್ಷದಿಂದ 1000 ಕೋಟಿ ರೂಗಳು ಬೇಕಾಗಬಹುದೆಂದು ಅಂದಾಜು ಮಾಡಲಾಗಿದೆ. ಯಾವುದೇ ಉನ್ನತ ಶಿಕ್ಷಣ ಕೋರ್ಸ್‌ಗಳಿಗೆ ಪ್ರವೇಶ ಪಡೆದವರು ಈ ಯೋಜನೆಗೆ ಅರ್ಜಿ ಸಲ್ಲಿಸಲು ಅರ್ಹರಾಗಿರುವುದಿಲ್ಲ. ಅಲ್ಲದೆ ಯೋಜನೆಗೆ ಒಳಪಟ್ಟ ನಂತರ ಎರಡು ವರ್ಷಗಳ ಕಾಲಾವಧಿಯಲ್ಲಿ ಉದ್ಯೋಗ ಲಭ್ಯವಾದ ಕೂಡಲೇ ಅಂತಹವರನ್ನು ಫಲಾನುಭವಿಗಳ ಪಟ್ಟಿಯಿಂದ ಕೈಬಿಡಲಾಗುತ್ತದೆ.

ಯುವನಿಧಿ ಯೋಜನೆಯ ಸದವಕಾಶವನ್ನು ಬಳಸಿಕೊಂಡು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅಗತ್ಯ ಪೂರ್ವಸಿದ್ಧತೆಯನ್ನು ನಡೆಸಿ ಉದ್ಯೋಗಾವಕಾಶ ಪಡೆದುಕೊಳ್ಳುವ ಆಲೋಚನೆಯಲ್ಲಿರುವ ಬಡ ಹಾಗೂ ಮಧ್ಯಮ ವರ್ಗದ ಕುಟುಂಬಗಳ ಯುವಜನರು ಹೆಚ್ಚಿನ ಆತ್ಮವಿಶ್ವಾಸದಿಂದ ಜೀವನದ ಸವಾಲನ್ನು ಎದುರಿಸಲು ಸಹಾಯವಾಗಲಿದೆ. ನಿರುದ್ಯೋಗಿಗಳು ಉದ್ಯೋಗಗಳಿಗೆ ಅರ್ಜಿ ಸಲ್ಲಿಕೆ, ಸಂದರ್ಶನ ವೆಚ್ಚ ಹಾಗೂ ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ಪುಸ್ತಕಗಳ ಖರೀದಿ ಮತ್ತು ತರಬೇತಿ ಖರ್ಚುಗಳನ್ನು ತಾವೇ

**ಅರ್ಜಿ ಸಲ್ಲಿಸುವ ವಿಧಾನ ಮತ್ತು ಪ್ರತಿಹಂತದ ಪ್ರಕ್ರಿಯೆಗಳ ವಿವರ**

- ಅಭ್ಯರ್ಥಿಗಳು ಯುವನಿಧಿ ಯೋಜನೆಗೆ (1) ಕರ್ನಾಟಕ-ಒನ್, (2) ಬಾಪೂಜಿ ಸೇವಾ ಕೇಂದ್ರಗಳು (3) ಗ್ರಾಮ-ಒನ್ ಕೇಂದ್ರಗಳನ್ನು ಬಳಸಿಕೊಂಡು ಅರ್ಜಿ ಸಲ್ಲಿಸಬಹುದಾಗಿದೆ. ಸೇವಾಸಿಂಧು ಜಾಲತಾಣದ ವಿಳಾಸವಾದ https://sevasindhugs.karnataka.gov.in/ ಇಲ್ಲಿ ಲಾಗ್-ಆನ್ ಮಾಡಿಕೊಂಡು ಯುವನಿಧಿ ಯೋಜನೆಯ ಸೇವೆಯನ್ನು ಆಯ್ಕೆ ಮಾಡಿಕೊಳ್ಳತಕ್ಕದ್ದು.
- ಮುಖಪುಟದಲ್ಲಿ ಲಾಗ್-ಆನ್ ಆದ ನಂತರ ಅರ್ಜಿ ನಮೂನೆ ತೆರೆದುಕೊಂಡು ಮೊದಲಿಗೆ ಅಭ್ಯರ್ಥಿಗಳು ನಿಬಂಧನೆಗಳನ್ನು ಓದಿಕೊಂಡು ಮೊದಲ ಘೋಷಣೆಯನ್ನು ನೀಡಬೇಕು.
- ಆಧಾರ್ ಸಂಖ್ಯೆಯನ್ನು ನಮೂದಿಸಿ OTP ಪಡೆದು KYC ಮಾಹಿತಿಯನ್ನು ಪಡೆದುಕೊಳ್ಳತಕ್ಕದ್ದು.
- ಅಭ್ಯರ್ಥಿಗಳು ತಮ್ಮ ಜಿಲ್ಲೆ ಮತ್ತು ತಾಲ್ಲೂಕನ್ನು ಸೂಚಿತ ಪಟ್ಟಿಗಳಿಂದ ಆಯ್ಕೆ ಮಾಡಿ ನಮೂದಿಸಬೇಕು.
- ವಿದ್ಯಾರ್ಹತೆಗೆ ಸಂಬಂಧಿಸಿದ ಮಾಹಿತಿಯನ್ನು ಭರ್ತಿ ಮಾಡುವ ಸಂದರ್ಭದಲ್ಲಿ ಅಭ್ಯರ್ಥಿಗಳು ಪ್ರಮಾಣ ಪತ್ರದಲ್ಲಿರುವ ನೋಂದಣಿ ಸಂಖ್ಯೆಯನ್ನು ನಮೂದಿಸಿದ ತಕ್ಷಣದಲ್ಲಿ ಸ್ವಯಂ-ಚಾಲಿತವಾಗಿ NAD ಪೋರ್ಟಲ್‌ನಿಂದ ಸಕ್ರಿಯಗೊಳಿಸುತ್ತದೆ.
- ಅಭ್ಯರ್ಥಿಗಳು 6 ವರ್ಷ ಕರ್ನಾಟಕ ರಹವಾಸಿ ಎಂದು ನಿರೂಪಿಸಲು ಈ ಕೆಳಗಿನ 4 ಮಾನದಂಡಗಳನ್ನು ಉಪಯೋಗಿಸಿಕೊಳ್ಳಲು ಸೇವಾಸಿಂಧುನಲ್ಲಿ ಅವಕಾಶ ಕಲ್ಪಿಸಲಾಗಿದೆ. (ಪದವೀಧರರು: ಎಸ್.ಎಸ್.ಎಲ್.ಸಿ./ಪಿಯುಸಿ ಅಥವಾ ಸಿಇಟಿ ಸಂಖ್ಯೆ ಅಥವಾ ರೇಷನ್‌ಕಾರ್ಡ್ ಸಂಖ್ಯೆ.
- ಡಿಪ್ಲೊಮೊದಾರರು: 8 ಮತ್ತು 9ನೇ ತರಗತಿ ಅಂಕಪಟ್ಟಿ/ಎಸ್‌ಎಸ್‌ಎಲ್‌ಸಿ./ ಪಿಯುಸಿ/ರೇಷನ್‌ಕಾರ್ಡ್ ಸಂಖ್ಯೆ)
- ಅಭ್ಯರ್ಥಿಗಳು ತಮ್ಮ ಜಾತಿ ಪ್ರವರ್ಗಗಳನ್ನು ಸೂಚಿತ ಪಟ್ಟಿಯಿಂದ ಆಯ್ಕೆ ಮಾಡಿಕೊಂಡು ನಮೂದಿಸಬೇಕು.
- ಅಭ್ಯರ್ಥಿಗಳು ಸಕ್ರಿಯವಾಗಿರುವ ಮೊಬೈಲ್ ಸಂಖ್ಯೆಯನ್ನು ನೀಡಿ OTP ಪಡೆಯುವುದು ಮತ್ತು ಇ-ಮೇಲ್ ವಿಳಾಸ ದಾಖಲಿಸಿ OTP ಪಡೆದು ಮತ್ತೊಮ್ಮೆ ದಾಖಲಿಸುವುದು.
- ಅಂತಿಮವಾಗಿ ಮತ್ತೊಮ್ಮೆ ಸ್ವಯಂ-ಘೋಷಣೆ ಮಾಡಿದ ಬಳಿಕ ಅರ್ಜಿ ಸಲ್ಲಿಕೆಯನ್ನು ಪೂರ್ಣಗೊಳಿಸಬೇಕು.
- ಅರ್ಜಿಯನ್ನು ಸಮರ್ಪಕವಾಗಿ ಸಲ್ಲಿಸಿದ ನಂತರ ಅಭ್ಯರ್ಥಿಯ ಮೊಬೈಲ್‌ಗೆ ನಿಮ್ಮ ಅರ್ಜಿಯು ಯಶಸ್ವಿಯಾಗಿ ಸ್ವೀಕೃತವಾಗಿರುವುದರ ಬಗ್ಗೆ ಸಂದೇಶ ಬರುತ್ತದೆ.
- ಅಭ್ಯರ್ಥಿಯು ಅರ್ಜಿಯನ್ನು ಸಮರ್ಪಕವಾಗಿ ಸಲ್ಲಿಸಿದ ನಂತರ ಸ್ವೀಕೃತಿಯು ಸೃಜಿಸಲ್ಪಡುತ್ತದೆ. ಅಭ್ಯರ್ಥಿಗಳು ಸ್ವೀಕೃತಿಯನ್ನು ಡೌನ್‌ಲೋಡ್ ಮಾಡಿಕೊಳ್ಳತಕ್ಕದ್ದು.
- ಅಭ್ಯರ್ಥಿಗಳ ಫಲಿತಾಂಶ ಪ್ರಕಟವಾದ 180 ದಿನಗಳ ನಂತರವೂ ನಿರುದ್ಯೋಗಿಯಾಗಿರುವ ಪದವೀಧರರಿಗೆ ಮಾಸಿಕ ರೂ. 3000/- ಹಾಗೂ ಡಿಪ್ಲೊಮೊದಾರರಿಗೆ ಮಾಸಿಕ ರೂ. 1500/- ನಿರುದ್ಯೋಗ ಭತ್ಯೆಯನ್ನು 2 ವರ್ಷಗಳವರೆಗೆ ಅಥವಾ ಉದ್ಯೋಗ ದೊರಕುವವರೆಗೆ ಇವೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ನೀಡಲಾಗುವುದು.
- ಅಭ್ಯರ್ಥಿಯು ಸೇವಾಸಿಂಧು ಪೋರ್ಟಲ್‌ನಲ್ಲಿ ನಿರುದ್ಯೋಗಿ ಸ್ಥಿತಿಯ ಬಗ್ಗೆ ಪ್ರತಿ ತಿಂಗಳ 25ನೇ ತಾರೀಖು ಅಥವಾ ಅದಕ್ಕಿಂತ ಮುಂಚಿತವಾಗಿ ಆಧಾರ್ OTP ಮೂಲಕ ಸ್ವಯಂ-ಘೋಷಣೆ ಮಾಡತಕ್ಕದ್ದು.
- ಅಂತಿಮವಾಗಿ ಅರ್ಹ ಅಭ್ಯರ್ಥಿಗಳ ಆಧಾರ್ ಸೀಡೆಡ್ ಬ್ಯಾಂಕ್ ಖಾತೆಗೆ ನೇರ ನಗದು ವರ್ಗಾವಣೆಯ ಮೂಲಕ ನಿರುದ್ಯೋಗ ಭತ್ಯೆಯ ಮೊತ್ತವನ್ನು ಜಮೆ ಮಾಡಲಾಗುವುದು.
- ಯುವನಿಧಿ ಯೋಜನೆಯಲ್ಲಿ ಯಶಸ್ವಿಯಾಗಿ ಅರ್ಜಿ ಸಲ್ಲಿಸಿದ ದತ್ತಾಂಶವನ್ನು ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮಕ್ಕೆ ಸ್ವಯಂ ಚಾಲಿತವಾಗಿ ಹಂಚಿಕೊಳ್ಳಲಾಗುವುದು. https://skillconnect.kaushalkar.com/ ಯುವನಿಧಿ ಯೋಜನೆಗೆ ಪೂರಕವಾಗಿ ಎಲ್ಲ ಅಭ್ಯರ್ಥಿಗಳಿಗೆ ಕೌಶಲ್ಯಾಬಿವೃದ್ಧಿ ನಿಗಮವು ಉಚಿತವಾಗಿ ಕೌಶಲ್ಯ ತರಬೇತಿ ಆಯೋಜಿಸುತ್ತದೆ.



Downloaded From:www.kpscvaani.com



ನಮ್ಮ ಸರ್ಕಾರ ಕೊಟ್ಟ ಮಾತಿನಂತೆ ನಡೆದುಕೊಂಡಿದೆ. 'ಯುವನಿಧಿ' ಯೋಜನೆಯ ನೋಂದಣಿಗೆ ಚಾಲನೆ ನೀಡಲಾಗಿರುವುದರಿಂದ ಪಂಚ ಗ್ಯಾರಂಟಿ ಯೋಜನೆಗಳೆಲ್ಲವನ್ನು ಜಾರಿಗೊಳಿಸಿದಂತ್ತಾಗಿದೆ.

ಯುವ ಜನತೆಯ ಉಜ್ವಲ ಭವಿಷ್ಯಕ್ಕಾಗಿ ಜಾರಿಗೊಳಿಸಲಾಗುತ್ತಿರುವ ಈ ಯೋಜನೆಗೆ ನೋಂದಣಿಯಾಗುವ ಯುವ ಜನರಿಗೆ ನಿರುದ್ಯೋಗ ಭತ್ಯೆಯನ್ನು ನೀಡುವ ಜೊತೆಗೆ ಕೌಶಲ್ಯಾಭಿವೃದ್ಧಿ ಇಲಾಖೆವತಿಯಿಂದ ಕೌಶಲ್ಯ ತರಬೇತಿಯನ್ನು ನೀಡುವ ಮೂಲಕ ಉದ್ಯೋಗ ದೊರಕಿಸಿಕೊಡಲು ಕ್ರಮವಹಿಸಲಾಗುವುದು.

–ಸಿದ್ದರಾಮಯ್ಯ
ಮುಖ್ಯಮಂತ್ರಿಗಳು

**'ಯುವನಿಧಿ' ಯೋಜನೆಯ ಅರ್ಹತೆ ಮಾನದಂಡಗಳು**

- ಅಭ್ಯರ್ಥಿಗಳು 2022–23ನೇ ಶೈಕ್ಷಣಿಕ ಸಾಲಿನಲ್ಲಿ ವ್ಯಾಸಂಗ ಮಾಡಿದ್ದು 2023ರಲ್ಲಿ ಪದವಿ/ಡಿಪ್ಲೊಮಾ ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು.
- ಕರ್ನಾಟಕದಲ್ಲಿ ಕನಿಷ್ಠ 6 ವರ್ಷಗಳವರೆಗೆ ಪದವಿ/ಡಿಪ್ಲೊಮಾ ವ್ಯಾಸಂಗದ ಅವಧಿಯಲ್ಲಿ ಕರ್ನಾಟಕದ ರಹವಾಸಿಯಾಗಿರಬೇಕು.
- ಅರ್ಜಿ ಸಲ್ಲಿಸಲು ಅಗತ್ಯವಿರುವ ವಿದ್ಯಾರ್ಹತೆ ದಾಖಲಾತಿಗಳು: ಎಸ್.ಎಸ್.ಎಲ್.ಸಿ./ಪಿಯುಸಿ ಅಂಕಪಟ್ಟಿ, ಪದವಿ/ಡಿಪ್ಲೊಮಾ ಪ್ರಮಾಣಪತ್ರ ಅಥವಾ ತಾತ್ಕಾಲಿಕ ಪ್ರಮಾಣಪತ್ರ.

ಸರ್ಕಾರಿ/ ಅನುದಾನಿತ ಸಂಸ್ಥೆ/ ಖಾಸಗಿ ವಲಯದಲ್ಲಿ ಉದ್ಯೋಗದಲ್ಲಿರುವ ಅಥವಾ ಸ್ವಯಂ ಉದ್ಯೋಗ ಹೊಂದಿರುವ ಹಾಗೂ ವಿದ್ಯಾಭ್ಯಾಸ ಮುಂದುವರಿಸುತ್ತಿರುವವರು ಈ ಯೋಜನೆಗೆ ಅರ್ಹರಾಗಿರುವುದಿಲ್ಲ.

ಯುವನಿಧಿ ಯೋಜನೆಗೆ ನೋಂದಣಿ ಮಾಡಿಕೊಂಡು ಯೋಜನೆಯ ಸೌಲಭ್ಯವನ್ನು ಪಡೆಯುವ ಯುವಕ–ಯುವತಿಯರಿಗೆ ಕೌಶಲ್ಯಾಭಿವೃದ್ಧಿ ನಿಗಮದ ವತಿಯಿಂದ ಉನ್ನತ ಶಿಕ್ಷಣ ಇಲಾಖೆ ಹಾಗೂ ಐಟಿ–ಬಿಟಿ ಇಲಾಖೆಯ ಸಹಯೋಗದೊಂದಿಗೆ ಉದ್ಯೋಗಕ್ಕೆ ಪೂರಕವಾಗುವಂತಹ ತರಬೇತಿಯನ್ನು ಉಚಿತವಾಗಿ ನೀಡಲಾಗುವುದು.

**–ಡಾ. ಶರಣ ಪ್ರಕಾಶ್ ಪಾಟೀಲ್**
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಸಚಿವರು

ನಿಭಾಯಿಸಿ ಸ್ವಾವಲಂಬಿಗಳಾಗಿ ವೃತ್ತಿ ಜೀವನವನ್ನು ರೂಪಿಸಿಕೊಳ್ಳಲು ನೆರವಾಗುವ ಮೂಲಕ ಪೋಷಕರ ಹೊರೆಯನ್ನು ತಗ್ಗಿಸುವುದು 'ಯುವನಿಧಿ' ಯೋಜನೆಯ ಉದ್ದೇಶವಾಗಿದೆ ಎಂದು ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಸಚಿವರಾದ ಡಾ. ಶರಣ ಪ್ರಕಾಶ ರುದ್ರಪ್ಪ ಪಾಟೀಲ್‌ರವರು ಇತ್ತೀಚೆಗೆ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಆಸಕ್ತ ಅರ್ಹ ಅಭ್ಯರ್ಥಿಗಳು ಸೇವಾಸಿಂಧು ಜಾಲತಾಣ ವಿಳಾಸ https://sevasindhugs.karnataka.gov.in/ ರಲ್ಲಿ ಲಾಗಿನ್ ಆಗಿ ಅರ್ಜಿ ಸಲ್ಲಿಸಬೇಕಾಗುತ್ತದೆ. ಈಗಾಗಲೇ ಪದವಿ/ಡಿಪ್ಲೊಮೊ ತೇರ್ಗಡೆಯಾದ ಅಭ್ಯರ್ಥಿಗಳ ಶೈಕ್ಷಣಿಕ ಪ್ರಮಾಣಪತ್ರಗಳನ್ನು NAD ಪೋರ್ಟಲ್‌ನಲ್ಲಿ ಸಂಬಂಧಿಸಿದ ವಿಶ್ವವಿದ್ಯಾಲಯಗಳು/ ಶೈಕ್ಷಣಿಕ ಸಂಸ್ಥೆಗಳು/ಮಂಡಳಿಗಳು ಇಂಧೀಕರಿಸಿರುವುದನ್ನು ಖಚಿತಪಡಿಸಿಕೊಳ್ಳಲು ಅಭ್ಯರ್ಥಿಗಳು https://nad.karnataka.gov.in/#/YuvaNidhi ಜಾಲತಾಣದಲ್ಲಿ ಲಾಗಿನ್ ಆಗಿ ತಮ್ಮ ಪದವಿ/ಡಿಪ್ಲೊಮಾ ಪ್ರಮಾಣ ಪತ್ರದಲ್ಲಿ ನೀಡಿರುವ ನೋಂದಣಿ ಸಂಖ್ಯೆ ದಾಖಲಿಸಿ ಪರಿಶೀಲಿಸಿಕೊಳ್ಳಬಹುದು. ಇದಕ್ಕೆ ಪೂರಕವಾಗಿ ಸೇವಾಸಿಂಧು ಮುಖಪುಟದಲ್ಲಿ ಲಿಂಕ್ ಅನ್ನು ನೀಡಲಾಗಿದೆ.



Downloaded From:www.kpscvaani.com



# ವಿಶ್ವದ ಆಕರ್ಷಣೆಯಾದ ಮೂರು ದಿನಗಳ
# ಬೆಂಗಳೂರು ಟೆಕ್ ಸಮ್ಮಿಟ್

**ಬೆಂಗಳೂರಿನಲ್ಲಿ ಮೂರು ದಿನಗಳ ಕಾಲ ಜರುಗಿದ ಟೆಕ್ ಸಮ್ಮಿಟ್ ಈ ಬಾರಿ ವಿಶ್ವದ ಬಹುಪಾಲು ತಂತ್ರಜ್ಞಾನ ಅಭಿವೃದ್ಧಿಗೊಂಡ ರಾಷ್ಟ್ರಗಳಿಗೆ ತಲುಪಿರುವುದು ವಿಶೇಷ.**

ಅ.ನಾ.ಪ್ರಹ್ಲಾದರಾವ್

ವಿಷ್ವಾ ಖಂಡದ ಅತಿ ದೊಡ್ಡ ತಂತ್ರಜ್ಞಾನ ಶೃಂಗಸಭೆ ಬೆಂಗಳೂರು ಟೆಕ್ ಸಮ್ಮಿಟ್– 2023 ನವೆಂಬರ್ 29 ರಿಂದ ಡಿಸೆಂಬರ್ 1 ರವರೆಗೆ ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಇಲಾಖೆಗಳ ಸಚಿವರಾದ ಪ್ರಿಯಾಂಕ್ ಖರ್ಗೆ ಅವರ ನಿರ್ದೇಶನದಲ್ಲಿ ಯಶಸ್ವಿಯಾಗಿ ಬೆಂಗಳೂರು ಅರಮನೆ ಆವರಣದಲ್ಲಿ ನಡೆಯಿತು.

ಈ ಬಾರಿಯ ಬೆಂಗಳೂರು ಟೆಕ್ ಸಮ್ಮಿಟ್ ವಿಶ್ವದ ಬಹುಪಾಲು ತಂತ್ರಜ್ಞಾನ ಅಭಿವೃದ್ಧಿಗೊಂಡ ರಾಷ್ಟ್ರಗಳಿಗೆ ತಲುಪಿರುವುದು ಅಂತ್ಯಂತ ವಿಶೇಷವಾಗಿದೆ. ಈ ಬಾರಿಯ ಶೃಂಗಸಭೆಯಲ್ಲಿ ವಿಶ್ವದ 45 ದೇಶಗಳು ಭಾಗವಹಿಸಿದ್ದವು. ಸಮ್ಮೇಳನದಲ್ಲಿ 83 ಅಧಿವೇಶನಗಳು ನಡೆದಿದ್ದು, 401 ಭಾಷಣಕಾರರು ಪಾಲ್ಗೊಂಡರು. 4773 ಪ್ರತಿನಿಧಿಗಳು ನೋಂದಾವಣೆ ಮಾಡಿಕೊಂಡಿದ್ದು, 8606 ಮಂದಿ ಪಾಲ್ಗೊಂಡರು. ಅಲ್ಲದೆ, 18,592 ಮಂದಿ ಉದ್ಯಮಿಗಳು ನೋಂದಾವಣೆ ಮಾಡಿಕೊಂಡಿದ್ದರು. 50,000ಕ್ಕೂ ಅಧಿಕ ಆಸಕ್ತರು ಎಕ್ಸ್‌ಪೋಗೆ ಭೇಟಿ ನೀಡಿದರು. ಶೃಂಗದಲ್ಲಿ 37 ಉತ್ಪನ್ನಗಳನ್ನು ಬಿಡುಗಡೆ ಮಾಡಲಾಯಿತಲ್ಲದೆ 553 ಪ್ರದರ್ಶಕರು ಪಾಲ್ಗೊಂಡರು. ಸಾಮಾಜಿಕ ಮಾಧ್ಯಮಗಳಾದ ಫೇಸ್ಬುಕ್, ಟ್ವಿಟರ್, ಲಿಂಕ್ಡ್‌ಇನ್, ಇನ್ಸ್ಟಾಗ್ರಾಂ, ವೈಟಿ ಮೂಲಕ 3.16 ಕೋಟಿ ವೀಕ್ಷಕರನ್ನು ಶೃಂಗಸಭೆಯ ವಿವಿಧ ಕಲಾಪಗಳು ತಲುಪಿದವು.

**258 ಸ್ಟಾರ್ಟ್‌ಅಪ್ ಪ್ರಾತಿನಿಧ್ಯ**

ಸಮ್ಮೇಳನ ಸ್ಥಳದಲ್ಲಿ ಮೂರು ದಿನಗಳ ಅವಧಿಯಲ್ಲಿ 427 ಸಭೆಗಳು ಆಯೋಜಿಸಲ್ಪಟ್ಟವು. 1981 ವರ್ಚುವಲ್ ಸಭೆಗಳು ನಡೆದವು. ಈ ಸಭೆಗಳಲ್ಲಿ



Downloaded From:www.kpscvaani.com

ಮಾಹಿತಿ ತಂತ್ರಜ್ಞಾನ ಸೇವೆ, ಕೃತಕ ಬುದ್ಧಿಮತ್ತೆ, ಐಒಟಿ, ಡಿಜಿಟಲ್ ಕಲಿಕೆ, ಮೊಬಿಲಿಟಿ, ಬ್ಲಾಕ್‌ಚೈನ್, ರೋಬೋ ಮತ್ತು ಡ್ರೋನ್, ಸೈಬರ್ ಸೆಕ್ಯೂರಿಟಿ, ಗೇಮಿಂಗ್, ಹೆಲ್ತ್‌ಟೆಕ್, ಫಿನ್ವೆಕ್, ಸ್ಮಾರ್ಟ್ವೆಕ್ ಮತ್ತು ಅಗ್ರಿಟೆಕ್ ಮುಂತಾದ ಕ್ಷೇತ್ರಗಳ 258 ಸ್ಟಾರ್ಟ್‌ಅಪ್‌ಗಳು ಭಾಗವಹಿಸಿದ್ದವು. ಆಸ್ಟ್ರೇಲಿಯಾ, ಡೆನ್ಮಾರ್ಕ್, ದಕ್ಷಿಣ ಕೊರಿಯಾ, ಜಪಾನ್, ಎನ್‌ಆರ್‌ಡಬ್ಲ್ಯೂಸಿಟಿ ಆಫ್ ಡಸೆಲ್ಡಾರ್ಫ್, ಥೈಲ್ಯಾಂಡ್, ಬ್ರಿಟನ್, ಫಿನ್ಲ್ಯಾಂಡ್, ಇಸ್ರೇಲ್, ರಷ್ಯಾ ದೇಶದ ಪ್ರತಿನಿಧಿಗಳು ಭಾಗಿಗಳಾಗಿದ್ದರು.

**ವೇದಿಕೆ ಹಂಚಿಕೊಂಡ ಪ್ರತಿಷ್ಠಿತರು**

ಅಮಿಟಿ ವಿಶ್ವವಿದ್ಯಾಲಯ, ಬೆಳಗಾವಿಯ ವಿಟಿಯು, ಮಣಿಪಾಲ್ ವಿಶ್ವವಿದ್ಯಾಲಯ, ಅಲಯನ್ಸ್ ವಿಶ್ವವಿದ್ಯಾಲಯ, ಗಾರ್ಡನ್ ಯೂನಿವರ್ಸಿಟಿ, ಪ್ರೆಸಿಡೆನ್ಸಿ ಯೂನಿವರ್ಸಿಟಿ ಮುಂತಾದ ಶೈಕ್ಷಣಿಕ ಸಂಸ್ಥೆಗಳು ಸಮ್ಮೇಳನದಲ್ಲಿ ಸಕ್ರಿಯವಾಗಿ ಪಾಲ್ಗೊಂಡರು. ಇನ್ಫೋಸಿಸ್, ಬಯೋಕಾನ್, ಭಾಷ್, ಮೈಕ್ರೋಸಾಫ್ಟ್ ಸ್ಟಾರ್ಟ್‌ಅಪ್, ಕ್ಯಾಶ್‌ಫ್ರೀ, ಬಿಲ್ಡರ್ ಎಐ, ಒವಿಹೆಚ್ ಕ್ಲೌಡ್, ಅಪ್ಲೈಡ್ ಮೆಟೀರಿಯಲ್ಸ್, ಹನಿವೆಲ್, ನಾರ್ವಿಚ್ ಕ್ಲಿನಿಕಲ್ ಮುಂತಾದ ಮಾಹಿತಿ ತಂತ್ರಜ್ಞಾನ ಕ್ಷೇತ್ರದ ಕಂಪೆನಿಗಳು ಸಮಾವೇಶದಲ್ಲಿ ಪಾಲ್ಗೊಂಡಿದ್ದವು. ಭಾರತದ ಹಲವಾರು ಪ್ರಮುಖ ಆರ್ ಅಂಡ್ ಡಿ ಸಂಸ್ಥೆಗಳು, ಸಿ.ಎಸ್.ಐ.ಆರ್, ಡಿ.ಆರ್.ಡಿ.ಒ, ಐ.ಸಿ.ಎಂ.ಆರ್ ಮುಂತಾದ ಪ್ರತಿಷ್ಠಿತ ಸಂಸ್ಥೆಗಳು ಪೆವಿಲಿಯನ್ನಿನಲ್ಲಿ ತಮ್ಮ ಪ್ರದರ್ಶನಗಳನ್ನು ನಡೆಸಿದವು. ಎಸ್.ಟಿ.ಪಿ.ಐ, ಎಲ್ಸಿಯ, ಟೈ, ಎಬಲ್ ಬಯೊಟೆಕ್, ಕೆಡಂ, ಐಕೆಪಿ ನಾಲೆಡ್ಜ್ ಪಾರ್ಕ್, ನಾಸ್ಕಾಂ ಐಒಟಿ ಅಂಡ್ ಎಐ, ವಾಯ್ಸ್ ಕನ್ಸೋರ್ಟಿಯಂ, ಪ್ರೆಸಿಡೆನ್ಸಿ ಲಾಂಚ್ಪ್ಯಾಡ್ ಮುಂತಾದ ವಿಶ್ವದ ಪ್ರಮುಖ ಸಂಸ್ಥೆಗಳು ಶೃಂಗದಲ್ಲಿ ವೇದಿಕೆ ಹಂಚಿಕೊಂಡವು.

ಉದ್ಘಾಟನಾ ಸಮಾರಂಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಕೈಗಾರಿಕಾ ಸಚಿವರಾದ ಎಂ.ಬಿ.ಪಾಟೀಲ್, ಶಿಕ್ಷಣ ಸಚಿವರಾದ ಮಧು ಬಂಗಾರಪ್ಪ, ಸರ್ಕಾರದ ಮುಖ್ಯ ಕಾರ್ಯದರ್ಶಿಗಳಾದ ವಂದಿತಾ ಶರ್ಮ ಸೇರಿದಂತೆ ವಿವಿಧ ಕ್ಷೇತ್ರದ ಗಣ್ಯರು ಪಾಲ್ಗೊಂಡರು.




## ಸರ್ಕಾರದ ಎರಡು ಪ್ರಮುಖ ನೀತಿಗಳು ಪ್ರಾರಂಭ

ಶೃಂಗದಲ್ಲಿ ಕರ್ನಾಟಕ ಸರ್ಕಾರಕ್ಕಾಗಿ ಎರಡು ಪ್ರಮುಖ ನೀತಿಗಳನ್ನು ಪ್ರಾರಂಭಿಸಲಾಯಿತು. ಕರ್ನಾಟಕವು ಜೈವಿಕ ತಂತ್ರಜ್ಞಾನದಲ್ಲಿ ಭಾರತದ ರಫ್ತು ಮತ್ತು ಉತ್ಪಾದನೆಯಲ್ಲಿ 60% ರಷ್ಟು ಕೊಡುಗೆ ನೀಡುತ್ತಿದ್ದು ಇದು ಗಃಖ 20 ಶತಕೋಟಿ ಮೌಲ್ಯಗಳನ್ನು ಹೊಂದಿದೆ. ಪೂರಕವಾಗುವಂತೆ ಬಯೋಟೆಕ್ ಪಾಲಿಸಿಯನ್ನು ಮುಖ್ಯಮಂತ್ರಿಗಳು ಬಿಡುಗಡೆ ಮಾಡಿದರು. ರಾಜ್ಯವನ್ನು ತಾಂತ್ರಿಕ ಆವಿಷ್ಕಾರ ಮತ್ತು ಆರ್ಥಿಕ ಅಭಿವೃದ್ಧಿಯ ಕೇಂದ್ರವಾಗಿ ವರ್ಧಿಸಲು ನೆರವಾಗುವ, ಭಾರತದಲ್ಲಿಯೇ ಮೊದಲ ರಾಜ್ಯವಾಗಿ ಎವಿಜಿಸಿ (**AVGC policy** ಅನಿಮೇಷನ್, ವಿಷುಯಲ್ ಎಫೆಕ್ಟ್ಸ್, ಗೇಮಿಂಗ್ ಮತ್ತು ಕಾಮಿಕ್ಸ್) ಪಾಲಿಸಿಯನ್ನು ಮುಖ್ಯಮಂತ್ರಿಗಳು ಬಿಡುಗಡೆಗೊಳಿಸಿದರು.

ಸ್ಟಾರ್ಟ್‌ಅಪ್‌ಗಳ ವಿಷನ್ ಗ್ರೂಪ್‌ನ ಅಧ್ಯಕ್ಷರಾದ ಪ್ರಶಾಂತ್ ಪ್ರಕಾಶ್, ಕರ್ನಾಟಕದ ಬಯೋಟೆಕ್ನಾಲಜಿ ಇಂಡಸ್ಟ್ರಿಯ ಡಾ. ಕಿರಣ್ ಮಜುಂದಾರ್ ಶಾ, ಕರ್ನಾಟಕ ಸರ್ಕಾರದ ಮಾಹಿತಿ ತಂತ್ರಜ್ಞಾನ ವಿಷನ್ ಗ್ರೂಪಿನ ಅಧ್ಯಕ್ಷರಾದ ಕ್ರಿಸ್ ಗೋಪಾಲಕೃಷ್ಣನ್, ಭಾರತೀಯ ಸಾಫ್ಟ್ ವೇರ್ ಟೆಕ್ನಾಲಜಿ ಪಾರ್ಕ್ಸ್‌ನ ಮಹಾನಿರ್ದೇಶಕರಾದ ಅರವಿಂದ್ ಕುಮಾರ್, ಇನ್ವೆಸ್ಟ್ ಕರ್ನಾಟಕದ ವ್ಯವಸ್ಥಾಪಕ ನಿರ್ದೇಶಕರಾದ ನಿವೃತಿ ರೈ, ಎಎಂಡಿ ಸಂಸ್ಥೆಯ ಉಪಾಧ್ಯಕ್ಷರಾದ ಮಾರ್ಕ್ ಪೇಪರ್‌ಮಾಸ್ಟರ್, ವಿಪ್ರೋ ಲಿಮಿಟೆಡ್‌ನ ಕಾರ್ಯನಿರ್ವಾಹಕ ಅಧ್ಯಕ್ಷ ರಿಷಾದ್ ಪ್ರೇಮ್‌ಜಿ ಮುಂತಾದ ಐಟಿ–ಬಿಟಿ ಕ್ಷೇತ್ರದ ಗಣ್ಯರು ಭಾಗವಹಿಸಿದ್ದರು.

ಸಮಾವೇಶದ 7. 26 ನೇ ಆವೃತ್ತಿಯ ಸಮ್ಮಿಟ್‌ನಲ್ಲಿ ಕೆಲವು ಪ್ರತಿಷ್ಠಿತ ಸಂಸ್ಥೆಯ ಉದ್ಯಮಿಗಳು ಹಾಗೂ ಸಂಸ್ಥೆಯ ಪ್ರತಿನಿಧಿಗಳು ಸಾಕ್ಷಿಯಾದರು. ಇನ್ಫೋಸಿಸ್ ಸಂಸ್ಥೆಯ ಸ್ಥಾಪಕರಾದ ಎನ್.ಆರ್. ನಾರಾಯಣ ಮೂರ್ತಿ, ಕೌನ್ಸಿಲ್ ಆಫ್ ಸೈಂಟಿಫಿಕ್ ಅಂಡ್ ಇಂಡಸ್ಟ್ರಿಯಲ್ ರಿಸರ್ಚ್ ಸಂಸ್ಥೆಯ (ಸಿ.ಎಸ್.ಐ.ಆರ್) ಮಾಜಿ ಡೈರೆಕ್ಟರ್ ಜನರಲ್ ಡಾ. ಆರ್.ಎ. ಮಶೇಲ್ಕರ್, ಝುರೋಧಾ ಸಂಸ್ಥೆಯ ಸಹ–ಸಂಸ್ಥಾಪಕ ನಿಖಿಲ್ ಕಾಮತ್, ಕೇಂದ್ರ ಮಾಹಿತಿ ತಂತ್ರಜ್ಞಾನ ಸಚಿವರಾದ ರಾಜೀವ್ ಚಂದ್ರಶೇಖರ್, ಕಂದಾಯ ಸಚಿವರಾದ



Downloaded From:www.kpscvaani.com




ಕೃಷ್ಣಬೈರೇಗೌಡ, ಆರೋಗ್ಯ ಸಚಿವರಾದ ದಿನೇಶ್ ಗುಂಡೂರಾವ್, ವೈದ್ಯಕೀಯ ಶಿಕ್ಷಣ ಹಾಗೂ ಕೌಶಾಲ್ಯಾಭಿವೃದ್ಧಿ ಸಚಿವರಾದ ಡಾ.ಶರಣಪ್ರಕಾಶ್ ಪಾಟೀಲ್, ಉನ್ನತ ಶಿಕ್ಷಣ ಸಚಿವರಾದ ಡಾ.ಎಂ.ಸಿ.ಸುಧಾಕರ್ ಮೊದಲಾದ ಗಣ್ಯರು ಬೇರೆ ಬೇರೆ ಚರ್ಚಾಗೋಷ್ಠಿಗಳಲ್ಲಿ ಪಾಲ್ಗೊಂಡಿದ್ದರು.

**ಪ್ರಶಸ್ತಿ ವಿತರಣೆ–ಬಯೋ ರಸಪ್ರಶ್ನೆ**

ಬೆಂಗಳೂರು ಟೆಕ್ಸ್ ಸಮ್ಮಿಟ್‌ನಲ್ಲಿ ಕೆಲವಾರು ವಿಶೇಷ ಕಾರ್ಯಕ್ರಮಗಳು ಆಯೋಜನೆಗೊಂಡಿದ್ದವು. ಭಾರತ ಯುಎಸ್ ಟೆಕ್ ಕಾನ್ಕ್ಲೇವ್, ಇಂಡಿಯಾ ಇನ್ನೋವೇಶನ್ ಅಲೈಯನ್ಸ್, 2022–2023ನೇ ಸಾಲಿನ ಪ್ರಶಸ್ತಿಗಳ ವಿತರಣೆ, ಎಸ್ಟಿಪಿಐ–ಐಟಿ ಪ್ರಶಸ್ತಿ ಪ್ರದಾನ, ಸ್ಮಾರ್ಟ್ ಬಯೋ ಪ್ರಶಸ್ತಿ ನೀಡಿಕೆ, ಬಯೋಕ್ವಿಜ್, ಬಯೋಪೋಸ್ಟರ್ ಮುಂತಾದವು ಅವುಗಳಲ್ಲಿ ಪ್ರಮುಖವಾದವು. ಇಂಡಿಯಾ– ಯುಎಸ್ ಟೆಕ್ ಕೂಟದಲ್ಲಿ ಎರಡೂ ದೇಶಗಳ ಸಹಯೋಗದಲ್ಲಿ ಉದ್ಯಮಗಳ ಸ್ಥಾಪನೆಗೆ ಹಾದಿ ಸುಗಮ ಮಾಡುವುದು, ಪ್ರಸ್ತುತ ನೀತಿ ಮತ್ತು ನಿಯಮಗಳ ಸಡಿಲಿಕೆ, ಎರಡು ದೇಶಗಳ ನಡುವೆ ವ್ಯಾಪಾರ ವ್ಯವಹಾರವನ್ನು ಸುಧಾರಿಸುವ ಕುರಿತಂತೆ ಸಚಿವ ಪ್ರಿಯಂಕ ಖರ್ಗೆ ಫಲಪ್ರಧ ಚರ್ಚೆ ನಡೆಸಿದರು.

ಜೈವಿಕ ತಂತ್ರಜ್ಞಾನ ಮತ್ತು ಪ್ರಪಂಚದ ಬಗ್ಗೆ ಜಾಗೃತಿ ಮೂಡಿಸುವ ವಸ್ತುವನ್ನು ಒಳಗೊಂಡ ಬಯೋ ರಸ ಪ್ರಶ್ನೆ ಆಯೋಜಿಸಲಾಗಿತ್ತು. ಜೈವಿಕ ತಂತ್ರಜ್ಞಾನ ವಿಭಾಗದಲ್ಲಿ ಭಾರತದ ಅತಿದೊಡ್ಡ ರಾಷ್ಟ್ರೀಯ ಮಟ್ಟದ ರಸಪ್ರಶ್ನೆ ಇದಾಗಿತ್ತು. ಬೆವನ್ ಮ್ಯಾಥ್ಯೂ ವಿಜೇತ ಪ್ರಶಸ್ತಿ ಹಾಗೂ ಸಂಚೇತಿ ಕಲ್ಯಾಣಿ ರನ್ನರ್–ಅಪ್ ಪ್ರಶಸ್ತಿಯನ್ನು ಗಳಿಸಿದರು.

**25 ದೇಶದ ರಾಯಭಾರಿಗಳ ಉಪಸ್ಥಿತಿ**

ಬೆಂಗಳೂರು ಟೆಕ್ ಸಮ್ಮಿಟ್–2023ರಲ್ಲಿ ವಿಶ್ವದ 25 ದೇಶಗಳ ರಾಯಭಾರಿಗಳು ಭಾಗವಹಿಸಿದ್ದರು. ಕರ್ನಾಟಕ ಸರ್ಕಾರ ರಾಯಭಾರಿಗಳನ್ನು ಒಳಗೊಂಡ ದುಂಡು ಮೇಜಿನ ಸಭೆಯನ್ನು ನಡೆಸಿತು. ಇನ್ವೆಸ್ಟ್ ಇಂಡಿಯಾ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರಾದ ನಿವೃತಿ ರೈ ಈ ಸಭೆಯನ್ನು ನಿರ್ವಹಿಸಿದರು. ಜಿಐಎ ರಾಷ್ಟ್ರಗಳಾದ ಆಸ್ಟ್ರೇಲಿಯಾ, ಆಸ್ಟ್ರಿಯಾ, ಬೆಲ್ಜಿಯಂ, ಕೆನಡ,

**ಗ್ರೀನ್ ಬಿಟಿಎಸ್ ಘೋಷಣೆ**

ಈ ಬಾರಿಯ ಬೆಂಗಳೂರು ಟೆಕ್ ಸಮ್ಮಿಟ್ 'ಗ್ರೀನ್ ಬಿಟಿಎಸ್' ಘೋಷಣೆಯನ್ನು ಮಾಡಿದ್ದು ವಿಶೇಷವಾಗಿತ್ತು. ಇಂಗಾಲ, ತ್ಯಾಜ್ಯ, ನೀರು, ಆಹಾರ ಮತ್ತು ಸಂಪನ್ಮೂಲಗಳಂತಹ ಪರಿಸರದ ನಿಯತಾಂಕಗಳಾದ್ಯಂತ ಗಮನಾರ್ಹವಾದ ದಾಪುಗಾಲು ಇಡುವಾಗ ಜೀರೋವೇಸ್ಟ್ ಸಾಧನೆ ಮಾಡುವ ಗುರಿ ಇದಾಗಿದೆ. ಸಮರ್ಥನೀಯ ಪಾಲುದಾರರಾದ 'Eco Morphosys' ಈ ನಿಟ್ಟಿನಲ್ಲಿ ಪ್ರಮುಖ ಪಾತ್ರವನ್ನು ವಹಿಸಿದ್ದು, ದೊಡ್ಡ ಪ್ರಮಾಣದ ಹೆಜ್ಜೆಗೆ ಸಹಾಯ ಮಾಡಿತು. "ಗ್ರೀನ್ ಬಿಟಿಎಸ್" ಗುರಿಯೊಂದಿಗೆ ಹೊಂದಾಣಿಕೆ ಮಾಡುವ ಎಲೆಕ್ಟ್ರಿಕ್ ವಾಹನಗಳನ್ನು ಅಧಿಕೃತವಾಗಿ ಬಿಡುಗಡೆ ಮಾಡಲಾಯಿತು.


Downloaded From:www.kpscvaani.com






ಡೆನ್ಮಾರ್ಕ್ ಫಿನ್ಲ್ಯಾಂಡ್, ಫ್ರಾನ್ಸ್, ಜರ್ಮನಿ, ಇಸ್ರೇಲ್, ಇಟಲಿ, ಜಪಾನ್ ಲಿಥುಯೇನಿಯಾ, ನೆದರ್ಲ್ಯಾಂಡ್ಸ್, ಓಮನ್, ಪೋಲ್ಯಾಂಡ್, ಸೌತ್ ಕೊರಿಯಾ, ಸ್ವೀಡನ್, ಸ್ವಿಜರ್ಲ್ಯಾಂಡ್, ಥೈಲ್ಯಾಂಡ್ ಯುಎಇ, ಯುನೈಟೆಡ್ ಕಿಂಗ್‌ಡಂ, ಯುಎಸ್‌ಎ, ಇಯು–ಸ್ಪೇನ್, ನಾರ್ಥರ್ನ್ ಐರ್ಲ್ಯಾಂಡ್, ಹಂಗೇರಿ ಮತ್ತು ಬಲ್ಗೇರಿಯಾ ಹಾಗೂ ಜಿಐಎ (ಗ್ಲೋಬಲ್ ಇನ್ನೋವೇಶನ್ ಅಲೈಯನ್ಸ್) ಗುಂಪಿನಲ್ಲಿಲ್ಲದ ಮಲೇಷಿಯಾ ಮತ್ತು ಖಜುಕಿಸ್ಥಾನ್ ದೇಶಗಳ ರಾಯಭಾರಿಗಳು ಸಮಾವೇಶದಲ್ಲಿ ಪಾಲ್ಗೊಂಡು ಚರ್ಚೆಗಳಲ್ಲಿ ತೊಡಗಿಕೊಂಡರು. ಭಾರತದಲ್ಲಿನ ಫಿನ್‌ಲ್ಯಾಂಡ್ ದೇಶದ ರಾಯಭಾರಿ ಕಿಮ್ಮೋ ಲಹ್‌ದೇವಿರ್ತಾ, ನೆದರ್ಲ್ಯಾಂಡ್ಸ್ ಸಾಮ್ರಾಜ್ಯದ ಭಾರತದ ರಾಯಭಾರಿ ಮಾರಿಸಾ ಗೆರಾರ್ಡ್ಸ್, ಭಾರತದಲ್ಲಿನ ಆಸ್ಟ್ರೇಲಿಯಾದ ಹೈ ಕಮಿಷನರ್ ರಾಯಭಾರಿ ಫಿಲಿಪ್ ಗ್ರೀನ್, ಭಾರತದಲ್ಲಿನ ಲಿಥುವೇನಿಯಾ ರಾಯಭಾರಿ ಶ್ರೀಮತಿ ಡಯಾನಾ ಮಿಕೆವಿಸಿಯೆನೆ, ಭಾರತಕ್ಕೆ ಬ್ರಿಟಿಷ್ ಡೆಪ್ಯುಟಿ ಹೈ ಕಮಿಷನರ್ ಮತ್ತು ಮಂತ್ರಿ ಕ್ರಿಸ್ಟಿನಾ ಸ್ಕಾಟ್, ಭಾರತ ಮತ್ತು ಭೂತಾನ್ ದೇಶಗಳ ಜರ್ಮನ್ ರಾಯಭಾರಿ ಡಾ: ಫಿಲಿಪ್ ಅಕರ್‌ಮನ್ ಅವರುಗಳೊಂದಿಗೆ ಪ್ರಿಯಾಂಕ್ ಖರ್ಗೆ ಅವರು ಪ್ರತ್ಯೇಕವಾಗಿ ಸಭೆಗಳನ್ನು ನಡೆಸಿದರು.

### 'ಇನ್ವೆಸ್ಟರ್ ಸ್ಟಾರ್ಟ್‌ಅಪ್ ಕನೆಕ್ಟ್'

ಸ್ಟಾರ್ಟ್‌ಅಪ್‌ಗಳಿಗೆ ಯುಎಇ ಹೂಡಿಕೆದಾರರಿಂದ ಆರ್ಥಿಕ ನೆರವು ಕಲ್ಪಿಸುವ 'ಇನ್ವೆಸ್ಟರ್ ಸ್ಟಾರ್ಟ್‌ಅಪ್ ಕನೆಕ್ಟ್' ಸಭೆಯನ್ನು ಮೊದಲ ಬಾರಿಗೆ ನಡೆಸಲಾಯಿತು. ದುಬೈ ಮತ್ತು ಅಬುಧಾಬಿಯಿಂದ ಆಗಮಿಸಿದ್ದ ಹೂಡಿಕೆದಾರರ ಮುಂದೆ 20ಕ್ಕೂ ಹೆಚ್ಚು ಸ್ಟಾರ್ಟ್‌ಅಪ್‌ಗಳು ತಮ್ಮ ವಿನೂತನ ಆಲೋಚನೆಗಳನ್ನು ಹಂಚಿಕೊಂಡವು. ಪ್ರಮುಖವಾಗಿ ಕೃತಕ ಬುದ್ಧಿಮತ್ತೆ, ಬ್ಲಾಕ್‌ಚೈನ್, ವರ್ಧಿತ ರಿಯಾಲಿಟಿ, ಮೆಡ್ ಟೆಕ್, ಫಿನ್ ಟೆಕ್ಮಂಡ್ 3 ಡಿ ಪ್ರಿಂಟಿಂಗ್ ಸೇರಿದಂತೆ ಹಲವು ವಿಭಾಗದ ಸ್ಟಾರ್ಟ್‌ಅಪ್‌ಗಳು ಹೂಡಿಕೆದಾರರ ಗಮನ ಸೆಳೆದವು.

### ಕೃಷಿ ಕ್ಷೇತ್ರದ ನಾವೀನ್ಯತೆ ಕಾರ್ಯಕ್ರಮ

ಕರ್ನಾಟಕ ಇನ್ನೋವೇಶನ್ ಮತ್ತು ಟೆಕ್ನಾಲಜಿ ಸೊಸೈಟಿ, (KITS) ಮತ್ತು ಕೃಷಿ ಇಲಾಖೆಯು ಸೆಲ್ಯುಲಾರ್ ಮತ್ತು ಮಾಲಿಕ್ಯುಲರ್ ಪ್ಲಾಟ್‌ಫಾರ್ಮ್‌ಗಳು ಪ್ರಮುಖ ನಾವೀನ್ಯತೆ ಕಾರ್ಯಕ್ರಮಗಳ ಪಾಲುದಾರಿಕೆಯನ್ನು ಘೋಷಿಸಿದವು. ಅಗ್ರಿಗ್ರ್ಯಾಂಡ್ ಚಾಲೆಂಜ್– II ಸಸ್ಯ ಕೀಟ ಮತ್ತು ರೋಗ ತಗ್ಗಿಸುವಿಕೆ, ಸುಗ್ಗಿಯ ನಂತರದ ನಷ್ಟ, ನಗದು ಬೆಳೆಗಳ ಸಂಸ್ಕರಣೆ ಮತ್ತು ಹೈನುಗಾರಿಕೆ ಕ್ಷೇತ್ರಗಳಿಗೆ ಸಂಬಂಧಿಸಿದ ಸಮಸ್ಯೆಗಳಿಗೆ ಪರಿಹಾರ ಒದಗಿಸಲು ಈ ಪಾಲುದಾರಿಕೆ ಸಹಕಾರಿಯಾಗಲಿದೆ.

### ಸಮಸ್ಯೆಗಳು ಸವಾಲುಗಳು

50ಕ್ಕೂ ಹೆಚ್ಚು ಮಹಿಳಾ ನೇತೃತ್ವದ ಸ್ಟಾರ್ಟ್‌ಅಪ್‌ಗಳೊಂದಿಗೆ 'ಡಿಜಿಟಲ್ ಮಾರ್ಕೆಟಿಂಗ್ ಮತ್ತು ಬ್ರಾಂಡ್‌ಬಿಲ್ಡಿಂಗ್' ಕುರಿತು ಮೌಲ್ಯಮಾಪನ ನಡೆಸಲಾಯಿತು. ಬೆಂಗಳೂರು ಹೊರತುಪಡಿಸಿದಂತೆ ರಾಜ್ಯದ ಇತರ ನಗರಗಳಲ್ಲಿ ಉದಯೋನ್ಮುಖ ತಂತ್ರಜ್ಞಾನ ಕ್ಲಸ್ಟರ್‌ಗಳ ಉತ್ತೇಜನ, ಪರಿಸರ ವ್ಯವಸ್ಥೆಯ ಪಾಲುದಾರಿಕೆಯ ಕುರಿತು ದುಂಡು ಮೇಜಿನ ಸಭೆಗಳು, ಬಹು ರಾಷ್ಟ್ರೀಯ ಕಂಪೆನಿಗಳೊಂದಿಗೆ ದುಂಡು ಮೇಜಿನ ಸಭೆಗಳು ಆಯೋಜನೆಗೊಂಡವು. ಪ್ರತಿಷ್ಠಿತ ಐಟಿ ಕಂಪೆನಿಗಳು ಎದುರಿಸುತ್ತಿರುವ ಸಮಸ್ಯೆಗಳು ಮತ್ತು ಸವಾಲುಗಳ ಬಗ್ಗೆ ನಡೆದ ಸಭೆಯಲ್ಲಿ SAP, Philips, Allstate, Wells Fargo, Mashreq, Target, ANZ, Cargill, UD TrucksIndia, BeckmanCoulter, Sciex India, Sasken, Twilio, J P Morgan, VMWare, Trellix, Celonis, Nokia, Sciex Laxter LSE ಕಂಪೆನಿಗಳು ಹಾಜರಾಗಿ ತಮ್ಮ ಒಳಹರಿವುಗಳನ್ನು ಹಂಚಿಕೊಂಡವು.

ವಿಶ್ವದ ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಕಲಶಪ್ರಾಯವಾಗಿರುವ ಸುಂದರ ಬೆಂಗಳೂರು ನಗರದ ಕಿರೀಟದಲ್ಲಿ ಶೋಭಾಯಮಾನವಾಗುವ ಮಣಿಯಂತೆ ಇಡೀ ಜಗತ್ತಿನ ಗಮನ ಸೆಳೆದ ಮೂರು ದಿನಗಳ 'ಬೆಂಗಳೂರು ಟೆಕ್ ಸಮ್ಮಿಟ್' ಬೆಂಗಳೂರು ನಗರದ ಐಟಿ ಪ್ರೇಮಿಗಳನ್ನು ಸೂಜಿಗಲ್ಲಿನಂತೆ ಆಕರ್ಷಿಸಿತು. ಶೃಂಗದಲ್ಲಿ ಸಾವಿರಾರು ಮಂದಿಯನ್ನು ಪ್ರಮುಖವಾಗಿ ಸೆಳೆದ 'ಚಂದ್ರಯಾನ–3' ಸಾಹಸಗಾತೆಯನ್ನು ತೆರೆದಿರಿಸಿದ ಹೊಸ ಪ್ರಯೋಗ ಎಲ್ಲರ ಕೇಂದ್ರ ಬಿಂದುವಾಯಿತು. ಮಾಹಿತಿ ತಂತ್ರಜ್ಞಾನ ಕ್ಷೇತ್ರದ ಹೊಸ ಹೊಸ ಆವಿಷ್ಕಾರಗಳು ಒಂದೆಡೆ ಮೇಳೈಸಿ ಆಸಕ್ತರ ಮೆಚ್ಚುಗೆಗೆ ಪಾತ್ರವಾಯಿತು. ಮಾಹಿತಿ ತಂತ್ರಜ್ಞಾನ ಸಚಿವರಾದ ಪ್ರಿಯಾಂಕ್ ಖರ್ಗೆ, ಮಾಹಿತಿ ತಂತ್ರಜ್ಞಾನ ಇಲಾಖೆಯ ಕಾರ್ಯದರ್ಶಿ ಡಾ.ಏಕರೂಪ್ ಕೌರ್ ಅವರ ಸಾರ್ಥಕ ಶ್ರಮ ಸಾಕಾರಗೊಂಡಿತು.


Downloaded From:www.kpscvaani.com



# ಬೆಂಗಳೂರು ಕಂಬಳದ ರೋಮಾಂಚನ ನೋಟ

**ಇದೇ ಮೊದಲ ಬಾರಿಗೆ ಬೆಂಗಳೂರಿನಲ್ಲಿ ನಡೆದ ತುಳುನಾಡಿನ ಜನಪದ ಕ್ರೀಡೆ ಕಂಬಳವು ವೀಕ್ಷಕರನ್ನು ರೋಮಾಂಚನಗೊಳಿಸಿತು**

ಪ್ರಶಾಂತ ಕುಮಾರ್ ಎಂ.ಎನ್

"ಅಲೆ ಬುಡ್ಯೆರ್....." ಕೆಂಪು ನಿಶಾನೆ ತೋರಿದೊಡನೆ ಒಂದೇ ಉಸಿರಿನಲ್ಲಿ ಬರುವ ಈ ಘೋಷ ಬೆಂಗಳೂರಿನ ಅರಮನೆ ಮೈದಾನದಲ್ಲಿ ಮಾರ್ದನಿಸುತ್ತಿದ್ದಂತೆ ಜೋಡಿ ಕೋಣಗಳು ನಾ ಮುಂದು ತಾ ಮುಂದು ಎನ್ನುವಂತೆ ಕಣ್‌ರೆಪ್ಪೆ ಮುಚ್ಚಿ ತೆರೆಯುವಷ್ಟರಲ್ಲಿ ಮತ್ತೊಂದು ಅಂಚು ತಲುಪಿ ಲಕ್ಷಾಂತರ ನೋಡುಗರಿಗೆ ರೋಮಾಂಚನದ ನೋಟ ನೀಡಿದವು. ಇದು ಬೆಂಗಳೂರಿನ ಅರಮನೆ ಮೈದಾನದಲ್ಲಿ ವಿಶೇಷವಾಗಿ ನಿರ್ಮಿಸಲಾಗಿದ್ದ ರಾಜ–ಮಹಾರಾಜ ಎಂದು ನಾಮಕರಣಗೊಂಡಿದ್ದ 'ಕಂಬಳ ಕರೆ' (ಎರಡು)ಗಳಲ್ಲಿ ಎರಡು ದಿನಗಳ ಕಾಲ ಭರ್ಜರಿ ಓಟ ನಡೆಸಿದ ಕೋಣಗಳ ಓಟದ ಕಂಬಳ.

ತುಳುನಾಡಿನ (ಅವಿಭಜಿತ ದಕ್ಷಿಣ ಕನ್ನಡ) ಐತಿಹಾಸಿಕ ಜನಪದ ಕ್ರೀಡೆ ಕಂಬಳ ರಾಜಧಾನಿಯಲ್ಲಿ "ಬೆಂಗಳೂರು ಕಂಬಳ ನಮ್ಮ ಕಂಬಳ" ಎಂಬ ಘೋಷ ವಾಕ್ಯದಡಿಯಲ್ಲಿ ಕಲರವ ಮಾಡಿ ಲಕ್ಷಾಂತರ ಜನರನ್ನು ಆಕರ್ಷಿಸಿದ್ದು ಮಾತ್ರವಲ್ಲ ಕಂಬಳ ಕರುನಾಡಿನ ಹೆಮ್ಮೆಯ ಜನಪದ ಕ್ರೀಡೆಯಾಗುವ ಹೊಸ ಭರವಸೆ ಮೂಡಿಸಿತು.

ಪರಶುರಾಮ ಸೃಷ್ಟಿಯೆಂದೇ ಕರೆಯಲಾಗುವ ಹಸಿರ ಸೀರೆಯುಟ್ಟು ಕಂಗೊಳಿಸುವ ಪಶ್ಚಿಮ ಘಟ್ಟ ಸಾಲಿನ ತಪ್ಪಲಿನ ತುಳು ಭಾಷಿಕರ ಜನಪದ ಕ್ರೀಡೆಯಾದ ಕಂಬಳ ರಾಜ ವೈಭೋಗದ ನೆರಳಿನಲ್ಲಿ ನಡೆದು ಬಂದ ಐತಿಹಾಸಿಕ ಸ್ಪರ್ಧೆ. ಶಾಸನಗಳಲ್ಲೂ ಉಲ್ಲೇಖಿಸಲ್ಪಟ್ಟಿರುವ (ಕ್ರಿ.ಶ.1200 ಅಳುಪ ರಾಣಿ ಬಲ್ಲ ಮಹಾದೇವಿ, ಕ್ರಿ.ಶ.1421 ಬಾರಕೂರು ಶಾಸನ) ಈ ಕಂಬಳ ಕ್ರೀಡೆ ತುಳುನಾಡಿನ ಜೀವನದ ಅವಿಭಾಜ್ಯ ಕ್ರೀಡೆಯಾಗಿದೆ. ಕೇವಲ ಕರಾವಳಿಗಷ್ಟೇ ಸೀಮಿತವಾಗಿದ್ದ ಕಂಬಳ ಬೆಂಗಳೂರಿನಲ್ಲಿ ಇದೇ ಮೊಟ್ಟ ಮೊದಲ ಬಾರಿಗೆ ಯಶಸ್ವಿಯಾಗಿ ಆಯೋಜಿತವಾಗಿದ್ದು ಕೋಣಗಳು ಘಟ್ಟದ ಮೇಲೇರಿ ಬಂದು ಇಲ್ಲೂ ತಮ್ಮ



Downloaded From:www.kpscvaani.com

ಖದರ್ ತೋರಿಸಿವೆ. ಪೊಗದಸ್ತಾದ ಮೈಕಟ್ಟಿನ ತರಬೇತಾದ ಕೋಣಗಳು ಓಡುವುದನ್ನು ಕಂಡ ಬೆಂಗಳೂರು ಸುತ್ತಮುತ್ತಲ ಲಕ್ಷಾಂತರ ಜನರು ನಿಬ್ಬೆರಗಾಗಿದ್ದಾರೆ. ಇದೇ ಮೊಟ್ಟ ಮೊದಲ ಬಾರಿಗೆ ಕಂಬಳ ಕೂಟ ಕಂಡವರಿಗಂತೂ ಇದೊಂದು ಅದ್ಭುತ ಅನುಭವವಾಗಿ ರೋಮಾಂಚನವುಂಟು ಮಾಡಿದೆ.

**ಕಂಬಳ ಏನು ಹೇಗೆ?**

ಕಂಬಳಕ್ಕಾಗಿಯೇ ವಿಶೇಷವಾಗಿ ಆರೈಕೆ ಮಾಡಿರುವ ಮತ್ತು ಯಾವುದೇ ಇತರೇ ಚಟುವಟಿಕೆಗಳಿಗೆ (ಗದ್ದೆ ಉಳುವುದು ಇತ್ಯಾದಿ) ಬಳಸದ ಲಕ್ಷಾಂತರ ರೂಪಾಯಿ ಬೆಲೆ ಬಾಳುವ ಮನೆ ಮಕ್ಕಳಂತೆ ಸಾಕಿ ಸಲಹಿರುವ ಕಂಬಳ ಕೋಣಗಳು ಮೊದಲೇ ಸಿದ್ಧಪಡಿಸಲಾದ ಟ್ರಾಕ್‌ನಲ್ಲಿ (ನೀರು ತುಂಬಿರುವ ಕೃತಕವಾಗಿ ನಿರ್ಮಿಸಿರುವ 'ಕರೆ' ಎಂದು ಕರೆಯಲಾಗುವ ಕಂಬಳದ ಕರೆಯಲ್ಲಿ ಓಡುವ ಸ್ಪರ್ಧೆಯೇ ಕಂಬಳ. ಕರಾವಳಿ ಕರ್ನಾಟಕದ ರೈತರು ತಮ್ಮ ಪ್ರಧಾನ ಬೆಳೆ ಭತ್ತದ ಕೊಯ್ಲಿನ ಬಳಿಕ ಮನರಂಜನೆಗಾಗಿ ಏರ್ಪಡಿಸುತ್ತಿದ್ದ ಈ ಕ್ರೀಡೆ ಪ್ರಾಣಿ ಹಿಂಸೆ ಎಂಬ ಕಾರಣಕ್ಕೆ ಸುಪ್ರೀಂ ಕೋರ್ಟ್ ಮೆಟ್ಟಿಲೇರಿ ಅಲ್ಲೂ ಗೆದ್ದು ಬಂದು ಇದೀಗ ಆಧುನಿಕವಾಗಿ ತೆರೆದುಕೊಳ್ಳುತ್ತಿದೆ. ಇದಕ್ಕೆ ಬೆಂಗಳೂರು ಕಂಬಳ ಮುನ್ನುಡಿ ಬರೆದಿದ್ದು ಕರಾವಳಿ ಭಾಗದಲ್ಲಿ ನವೆಂಬರ್, ಡಿಸೆಂಬರ್, ಜನವರಿ ತಿಂಗಳವರೆಗೂ ಪ್ರತೀ ವಾರಕ್ಕೊಂದು ಬಾರಿ ನಡೆಯುವ ಕಂಬಳ ಇದೀಗ ರಾಜ್ಯ, ರಾಷ್ಟ್ರಮಟ್ಟದ ಗಮನ ಸೆಳೆಯುತ್ತಿದೆ. ಮೊದಲು ಭತ್ತದ ವಿಶಾಲ ಗದ್ದೆಗಳಲ್ಲಿ ಏರ್ಪಾಡಗಾಗುತ್ತಿದ್ದ ಕೋಣಗಳ ಸ್ಪರ್ಧೆಗೀಗ ವಿಶೇಷವಾಗಿ ನಿರ್ಮಾಣವಾಗುವ ಟ್ರಾಕ್, ನಾಲ್ಕೂ ಬದಿಗಳಲ್ಲಿ ಸಹಸ್ರಾರು ಜನರು ಕುಳಿತುಕೊಂಡು ನೋಡುವಂತಹ ವೀಕ್ಷಣಾ ಗ್ಯಾಲರಿ ಹೀಗೆ ಕಾಲಕ್ಕೆ ತಕ್ಕಂತೆ ಕೋಲ ಎನ್ನುವಂತೆ ಆಧುನಿಕತೆಯನ್ನೂ ಮೈಗೂಡಿಸಿಕೊಂಡು ಕರಾವಳಿ ಬಿಟ್ಟು, ಮೊಟ್ಟ ಮೊದಲು ರಾಜ್ಯದ ರಾಜಧಾನಿ ತಲುಪಿದೆ.

ಭೂಮಿಯ ಮಟ್ಟಕ್ಕಿಂತ 3–4 ಅಡಿ ಆಳಕ್ಕಿರುವ ಕಂಬಳ ಕರೆ ಸುಮಾರು 100 ಮೀಟರ್‌ಗಳಷ್ಟಿದ್ದು ಬೆಂಗಳೂರು ಅರಮನೆ ಮೈದಾನದಲ್ಲಿ ನಿರ್ಮಾಣ ಮಾಡಿದ್ದ ಟ್ರಾಕ್ (ಕರೆ) 151 ಮೀಟರ್‌ನೊಂದಿಗೆ ಕಂಬಳ ಇತಿಹಾಸದಲ್ಲೇ ಅತಿ ಉದ್ದದ ಟ್ರಾಕ್ ಎಂಬ ದಾಖಲೆ ಬರೆದಿದೆ. ಅರಮನೆ ಮೈದಾನದಲ್ಲಿ ಇದಕ್ಕಾಗಿಯೇ 2 ಕೊಳವೆ ಬಾವಿ ಕೊರೆದು ಆ ನೀರನ್ನು ಬಳಸಿ ಮಣ್ಣು ಮರಳಿನ ಹದವಾದ ಮಿಶ್ರಣದೊಂದಿಗೆ ಪರಿಣತ ಜಾನ್ ಸಿರಿಲ್ ಡಿಸೋಜಾ ಕರೆ ನಿರ್ಮಾಣ ಮಾಡಿದ್ದು ಕೋಣಗಳ ಓಟಕ್ಕೆ ಒಂದಿಷ್ಟೂ ಅಡ್ಡಿ ಆತಂಕಗಳಿಲ್ಲದೇ ಕೋಣಗಳಿಗೂ ಅದನ್ನು ಓಡಿಸುವ ಓಟಗಾರರಿಗೂ ಯಾವುದೇ ಗಾಯಗಳಾಗದೇ ಅತ್ಯುತ್ತಮ ಟ್ರಾಕ್ ಎಂಬ ಮೆಚ್ಚುಗೆಯನ್ನೂ ಪಡೆದಿದೆ.

**ಸೆಲೆಬ್ರಿಟಿ ಕೋಣಗಳು**

ಕಂಬಳ ಕೋಣಗಳು ಒಟ್ಟು ಕಂಬಳದ ಆಕರ್ಷಣೆ. ಇವುಗಳು ಕರಾವಳಿಯಲ್ಲಿ ಸೆಲೆಬ್ರಿಟಿಗಳಂತೆ ಆರಾಧಿಸಲ್ಪಡುತ್ತವೆ ಎಂದರೆ ಅಚ್ಚರಿ ಅನಿಸೀತು. ಕೋಣಗಳನ್ನು ಸಾಕುವುದು ಅವುಗಳ ಆರೈಕೆ ತಿಂಗಳೊಂದಕ್ಕೆ ಲಕ್ಷಕ್ಕೂ ಹೆಚ್ಚು ಖರ್ಚಿನ ಬಾಬತ್ತು. ಸಿನೆ ತಾರೆಯರು ಮೋಹಕ ನಟಿಯರು ತಮ್ಮ ಮೈ ಮಾಟ ಕಾಪಿಟ್ಟುಕೊಳ್ಳಲು ಹೇಗೆ ಖರ್ಚು ಮಾಡುತ್ತಾರೋ ಹಾಗೆಯೇ ಕೋಣಗಳನ್ನು ಅವುಗಳ ಆಹಾರ (ಜೊತೆಗೆ ಈಜು, ತರಬೇತಿ) ಫಿಟ್ ಅಂಡ್ ಫೈನ್ ಆಗಿ ನೋಡಿಕೊಳ್ಳುವುದು ಆರೈಕೆ ಮಾಡುವುದು ಸುಲಭದ ಮಾತಲ್ಲ. ಕರಾವಳಿಯ ಕೆಲವೊಂದು ಕೋಣಗಳಿಗೆ ಲಕ್ಷಾಂತರ ಫ್ಯಾನ್ ಫಾಲೋವರ್ಸ್ ಇದ್ದಾರೆ ಎಂದರೆ ಅತಿಶಯೋಕ್ತಿ ಆಗಲಾರದು.

**ಇಂಡಿಯನ್ ಉಸೇನ್ ಬೋಲ್ಟ್!**

ಕೋಣಗಳಂತೆ ಇತ್ತೀಚೆಗೆ ಅದನ್ನು ಓಡಿಸುವವರೂ ಕೂಡ ಸೆಲಬ್ರಿಟಿಗಳಾಗುತ್ತಿದ್ದಾರೆ. ಇಲ್ಲಿ ನೀವು ಉಸೇನ್ ಬೋಲ್ಟ್‌ರಂತೆ



**ಮುಂದೆ ಮುಂಬೈ, ದುಬೈ**

ಕಂಬಳ ಕರಾವಳಿ ಬಿಟ್ಟು ಬೆಂಗಳೂರಿಗೆ ಬಂದಿದ್ದು, ಬೆಂಗಳೂರು ಕಂಬಳದ ಯಶಸ್ಸಿಗಾಗಿ ಹಗಲಿರುಳು ಶ್ರಮಿಸಿದ, ಸರ್ಕಾರದಿಂದ 1 ಕೋಟಿ ನೆರವು ಪಡೆದು ಮುಖ್ಯಮಂತ್ರಿ ಸಿದ್ದರಾಮಯ್ಯನವರನ್ನೂ ಕಂಬಳಕ್ಕೆ ಕರೆದು ಅವರಿಂದಲೂ ಕಂಬಳ ಆಯೋಜನೆ ಬಗ್ಗೆ ಮೆಚ್ಚುಗೆ ಪಡೆದ ಪುತ್ತೂರಿನ ಶಾಸಕ ಅಶೋಕ್ ಕುಮಾರ್ ರೈ ಇದೀಗ ಕಂಬಳವನ್ನು ರಾಷ್ಟ್ರೀಯ ಅಂತಾರಾಷ್ಟ್ರೀಯ ಮಟ್ಟಕ್ಕೆ ಕೊಂಡೊಯ್ಯಲು ಹುಮ್ಮಸ್ಸಿನಲ್ಲಿದ್ದಾರೆ. ಜೊತೆಗೆ ರಾಜ್ಯದ ರಾಜಧಾನಿಯಲ್ಲಿ ಇದೀಗ ನಿರ್ಮಾಣವಾದ ಕಂಬಳ ಕರೆ ಶಾಶ್ವತವಾಗಿ ಉಳಿದು ಪ್ರತಿ ವರ್ಷವೂ ಕಂಬಳ ಆಯೋಜಿಸುವ ಮೂಲಕ ತುಳುನಾಡ ಕಂಬಳವನ್ನು ಕರುನಾಡ ನಮ್ಮ ಕಂಬಳವಾಗಿಸುವ ಉದ್ದೇಶ ಹೊಂದಿದ್ದಾರೆ. ಜೊತೆಗೆ ಮುಂಬೈ, ಬಳಿಕ ದುಬೈನಲ್ಲೂ ಕಂಬಳ ಆಯೋಜಿಸಲು ಅವರಿಗೆ ಆಹ್ವಾನ ಬಂದಿದೆ. ನೀವು ಕೋಣಗಳನ್ನು ಕರೆ ತನ್ನಿ. ಆಯೋಜನೆ ಜವಾಬ್ದಾರಿ ನಮ್ಮದು ಎಂದು ಅಲ್ಲಿ ಆಸಕ್ತ ಸಂಘಟಕರು ಹೇಳಿದ್ದು, ಕೋಣಗಳು ವಿಮಾನವೇರುವ ದಿನಗಳು ದೂರವಿಲ್ಲ ಎನ್ನಬಹುದು. ಈ ಮೂಲಕ ತುಳುನಾಡಿನ ಲೋಕಲ್ ಕಂಬಳ ಗ್ಲೋಬಲ್ ಮಟ್ಟಕ್ಕೇರಿಸುವ ಗುರಿಯನ್ನು ರೈ ಮತ್ತವರ ಬೆನ್ನಿಗೆ ನಿಂತ ಬೆಂಗಳೂರು ಕಂಬಳದ ಆಯೋಜಕರ ತಂಡ ಹೊಂದಿದೆ.



Downloaded From:www.kpscvaani.com



ಓಡುವ, ಕೋಣ ಓಡಿಸುವವರನ್ನು ಕಾಣಬಹುದು. ಮಿಂಚಿನ ವೇಗದಲ್ಲಿ ಕೋಣಗಳು ಓಡುತ್ತಿದ್ದಂತೆ ಅವುಗಳನ್ನು ಓಡಿಸುವ ಓಟಗಾರರು (ತುಳುವಿನಲ್ಲಿ ಗಿಡುಪುನಾಯೆ) ಕೂಡ ಅಷ್ಟೇ. ಉಸೇನ್ ಬೋಲ್ಟ್‌ರನ್ನೇ ಮೀರಿಸುವಂತಹ ಮಿಂಚಿನ ಓಟ. ಈ ಮೊದಲು 2020ರಲ್ಲಿ ಮೂಡುಬಿದಿರೆ ಸಮೀಪದ ಅಶ್ವತ್ಥಪುರದ ಶ್ರೀನಿವಾಸ್ ಗೌಡ 142.5 ಮೀಟರ್ ಕಂಬಳ ಕರೆಯಲ್ಲಿ 13.62 ಸೆಕೆಂಡ್‌ಗಳಲ್ಲಿ ಓಡಿ ದಾಖಲೆ ಮಾಡಿದ್ದಲ್ಲದೇ 100 ಮೀಟರ್ ಅನ್ನು ಕೇವಲ 9.55 ಸೆಕೆಂಡ್‌ಗಳಲ್ಲಿ ದಾಟಿ ಉಸೇನ್ ಬೋಲ್ಟ್ ದಾಖಲೆ (100 ಮೀ ಒಲಿಂಪಿಕ್ಸ್ ಚಿನ್ನ 9.58 ಸೆ) ಯನ್ನು ಮುರಿದು ಇಂಡಿಯನ್ ಉಸೇನ್ ಬೋಲ್ಟ್ ಎಂದು ವಿಶ್ವದಾದ್ಯಂತ ಹೆಸರು ಮಾಡಿದ್ದರು. ಬೆಂಗಳೂರು ಕಂಬಳದಲ್ಲೂ ಇವರು ವಿಶೇಷ ಆಕರ್ಷಣೆಯಾಗಿದ್ದರು. ನೂರಕ್ಕೂ ಹೆಚ್ಚು ಕೋಣ ಓಡಿಸುವವರು ತಮ್ಮ ಸಹಜವಾದ ಸಿಕ್ಸ್ ಪ್ಯಾಕ್ ದೇಹದೊಂದಿಗೆ ಎಲ್ಲರ ಗಮನ ಸೆಳೆದರು.

**159 ಜೋಡಿ ಕೋಣಗಳು!**

ಟನ್‌ಗಟ್ಟಲೆ ಭಾರ ಇರುವ 158 ಜೋಡಿ ಕೋಣಗಳನ್ನು ಬೆಂಗಳೂರಿಗೆ ತರುವ ಹರ ಸಾಹಸ ಮಾಡಿದ್ದ ಕೋಣದ ಮಾಲಿಕರು ಮತ್ತು ಕಂಬಳ ಆಯೋಜಕರು ಗೆದ್ದ ಕೋಣಗಳ ಜೋಡಿಗೆ ಆಕರ್ಷಕ ಬಹುಮಾನಗಳನ್ನು ಘೋಷಿಸಿದ್ದರು. ಈ ಕೋಣಗಳನ್ನು ಲಾರಿಗಳಲ್ಲಿ ಬೆಂಗಳೂರಿಗೆ ತರಲಾಗಿದ್ದು ಅರಮನೆ ಮೈದಾನದ ಎಪ್ಪತ್ತು ಎಕರೆ ವಿಶಾಲದ ಕಂಬಳ ಸ್ಪರ್ಧೆ ನಡೆಯುವ ಆವರಣದಲ್ಲಿ ಪ್ರತಿ ಜೋಡಿಗೂ ವಿಶೇಷವಾದ ಟೆಂಟ್ ವ್ಯವಸ್ಥೆ ಮಾಡಲಾಗಿತ್ತು. ಕೋಣಗಳಿಗೆ ತಿನ್ನಲು ಬೇಕಾದ ಹುರುಳಿ, ಬೈ ಹುಲ್ಲು ಜೊತೆಗೆ ಅವುಗಳಿಗೆ ಕುಡಿಯುವ ನೀರನ್ನೂ ಕೂಡ ಕರಾವಳಿಯ ಬಾವಿಗಳಿಂದಲೇ ಸಂಗ್ರಹಿಸಿ ತರಲಾಗಿತ್ತು. ಕೋಣಗಳ ಆರೋಗ್ಯದ ಕುರಿತು ಅಷ್ಟರ ಮಟ್ಟಿನ ಆಸ್ಥೆ ವಹಿಸಲಾಗಿತ್ತು.

**ವಿಭಾಗಗಳು**

ಕೋಣಗಳ ಜೊತೆಗೆ ಓಟಗಾರನಿಗೂ ಬಹುಮಾನ ನೀಡಲಾಯಿತು. ಅಡ್ಡ ಹಲಗೆ ಓಟ (ಅಡ್ಡ ಪಲಾಯಿ) ದಲ್ಲಿ ಕೋಣಗಳ ಹಿಂಭಾಗಕ್ಕೆ ಅಡ್ಡವಾಗಿ ಹಲಗೆಯೊಂದನ್ನು ಕಟ್ಟಿ ಅದರ ಮೇಲೆ ಓಟಗಾರ ನಿಂತು ಓಡುತ್ತಾನೆ. ಗುರಿಗೆ ತುಳುವಿನಲ್ಲಿ ಮಂಜೋಟಿ (ಅಂತಿಮ ಗೆರೆ) ಎಂದು ಕರೆಯಲಾಗುತ್ತದೆ. ಅದನ್ನು ಮೊದಲು ತಲುಪುವ ಜೋಡಿ ವಿಜೇತವಾಗುತ್ತದೆ. ಎರಡನೆಯದ್ದು ನಾಯೆರ್ (ನೇಗಿಲು) ಸ್ಪರ್ಧೆ. ಉಳುಮೆ ಮಾಡುವಾಗ ಕಟ್ಟುವಂತೆ ನೇಗಿಲನ್ನು ಕೋಣಗಳ ಹೆಗಲಿಗೆ ಕಟ್ಟುತ್ತಾರೆ. ಈ ನೇಗಿಲನ್ನು ಹಿಡಿದು ಕೋಣವನ್ನು ಓಡಿಸಿ ಗುರಿ ತಲುಪಬೇಕಾಗುವುದು. ಹಗ್ಗದ ಓಟ ಮತ್ತೊಂದು ವಿಭಾಗವಾಗಿದ್ದು ಓಟಗಾರ ಕೋಣಗಳಿಗೆ ಕಟ್ಟಿದ ನೊಗದ ಮಧ್ಯೆ ಕಟ್ಟಿದ ಹಗ್ಗವನ್ನು ಹಿಡಿದು ಕೋಣಗಳನ್ನು ಓಡಿಸುತ್ತಾನೆ. ಕನೆ ಹಲಗೆ ಓಟ ಅತ್ಯಂತ ಆಕರ್ಷಕ ಸ್ಪರ್ಧೆ ಆಗಿದ್ದು, ಅಡ್ಡ ಹಲಗೆಯಂತೆ ಇರುವ ಕಟ್ಟಲಾದ ಹಲಗೆಯ ಮಧ್ಯದಲ್ಲಿ ಮಾಡಲಾದ ತೂತುಗಳಿಂದ ನೀರನ್ನು ಅತಿ ಎತ್ತರಕ್ಕೆ (ನಿಸಾನೆ–ಆರೂವರೆ ಅಡಿ/ಏಳೂವರೆ ಅಡಿ) ಚಿಮ್ಮಿಸುವ ಕೋಣಗಳು ವಿಜೇತವಾಗುತ್ತದೆ. ■

ಕಂಬಳ ಕ್ರೀಡೆಗೆ ಸರ್ಕಾರದ ಎಲ್ಲ ನೆರವು ನೀಡಲಾಗುವುದು. ಬೆಂಗಳೂರಿನಲ್ಲಿ ಕಂಬಳ ಪ್ರತಿ ವರ್ಷವೂ ನಡೆಯುವಂತಾಗಬೇಕು. ಮಂಗಳೂರಿನಲ್ಲಿ ಕಂಬಳ ಭವನ ನಿರ್ಮಾಣದ ಜೊತೆಗೆ ಬೆಂಗಳೂರಿನಲ್ಲಿ ಕಂಬಳಕ್ಕಾಗಿ ನಿವೇಶನ ಶೀಘ್ರದಲ್ಲೇ ಒದಗಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಲಾಗುವುದು. ತುಳು ಭಾಷಾ ಜನರ ಭಾಷಾ ಪ್ರೇಮವನ್ನು ಶ್ಲಾಘಿಸುವ ಜೊತೆಗೆ ತುಳು ಭಾಷೆಯನ್ನು ಕರ್ನಾಟಕದ ಹೆಚ್ಚುವರಿ ಭಾಷೆಯಾಗಿ ಸ್ಥಾನಮಾನ ನೀಡಲು ಸಂಬಂಧಿಸಿದ ಇಲಾಖಾ ಸಚಿವರೊಂದಿಗೆ ಮಾತನಾಡಿ ತುಳು ಭಾಷೆಗೆ ನೀಡಬೇಕಾದ ಎಲ್ಲ ಮಾನ್ಯತೆಗಳನ್ನು ಒದಗಿಸುವ ನಿಟ್ಟಿನಲ್ಲಿ ಕ್ರಮ ವಹಿಸಲಾಗುವುದು.

–ಸಿದ್ದರಾಮಯ್ಯ
ಮುಖ್ಯಮಂತ್ರಿಗಳು

**ಕರಾವಳಿ ನೋಟ**

ಅರಮನೆ ಮೈದಾನದ ಸುಮಾರು ಎಪ್ಪತ್ತು ಎಕರೆ ವಿಶಾಲವಾದ ಸ್ಥಳ ಕರಾವಳಿಯ ಸೊಬಗು, ಸೊಗಡಿನಂಗಣವಾಗಿ ಮಾರ್ಪಡಿಸಿದ್ದು "ಬೆಂಗಳೂರು ಕಂಬಳ...ನಮ್ಮ ಕಂಬಳ". ತುಳು ನಾಡಿನ ಸಂಸ್ಕೃತಿಗಳ ಪರಿಚಯದ ಜೊತೆಗೆ ಇಲ್ಲಿನ ಆಹಾರ, ಆಚಾರ, ವಿಚಾರಗಳ ವೈಭವದ ವೇದಿಕೆಯಾಗಿಯೂ ಅರಮನೆಯಂಗಳ ಮಾರ್ಪಟ್ಟಿತ್ತು. ಕಂಬಳದ ಮೂಲ ಪುರುಷರು ತುಳು ನಾಡಿನ ಆರಾಧ್ಯ ದೈವ ಕೋಟಿ ಚೆನ್ನಯ್ಯರು, ಭಾರೀ ಗಾತ್ರದ ಬೇತಾಳಗಳು, ಬೊಂಬೆಗಳು, ಹುಲಿವೇಷ, ಆಷಾಡ ಮಾಸದ ವಿಶೇಷ ಆಟಿಕಳಂಜ, ನೈಜತೆಯ ಪ್ರತಿರೂಪವಾಗಿದ್ದ ಎತ್ತಿನ ಬಂಡಿ, ಕೆಸರಿನಲ್ಲಿ ಕೋಣಗಳು..ಹೀಗೆ ಕರಾವಳಿಗೆ ಕರಾವಳಿಯೇ ಅರಮನೆ ಮೈದಾನದಲ್ಲಿ ಮೈದಳೆದಿತ್ತು.


Downloaded From:www.kpscvaani.com



# ಬೆಳಗಾವಿ ಸುವರ್ಣಸೌಧಕ್ಕೆ ಹೊಸಬೆಳಕು !

ಗುರುನಾಥ ಕಡಬೂರ

ಬೆಳಗಾವಿಯ ಹೊರ ವಲಯದಲ್ಲಿ ಪುಣೆ–ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ದೂರದಿಂದ ಸಕ್ಕರೆ ಬೊಂಬೆಯಂತೆ ಕಾಣುವ ಸುವರ್ಣ ವಿಧಾನಸೌಧ ಇದೀಗ ಬಣ್ಣ ಬಣ್ಣದ ಎಲ್ಇಡಿ ದೀಪಾಲಂಕಾರದಿಂದ ರಾತ್ರಿಯಲ್ಲೂ ಮಿನುಗುತ್ತಿದೆ.

2023, ಡಿಸೆಂಬರ್ 4 ರಿಂದ 15 ರವರೆಗೆ ನಡೆದ ಕರ್ನಾಟಕ ವಿಧಾನಮಂಡಲದ ಚಳಿಗಾಲ ಅಧಿವೇಶನ ಹಿನ್ನೆಲೆಯಲ್ಲಿ ಮೊದಲ ಬಾರಿ ಸುವರ್ಣ ವಿಧಾನಸೌಧಕ್ಕೆ ದೀಪಾಲಂಕಾರ ಮಾಡಲಾಗಿದೆ.

ವಿಧಾನಸಭೆಯ ಸಭಾಧ್ಯಕ್ಷರಾದ ಯು.ಟಿ.ಖಾದರ್ ಫರೀದ್ ಮತ್ತು ವಿಧಾನ ಪರಿಷತ್ತಿನ ಸಭಾಪತಿಯವರಾದ ಬಸವರಾಜ ಹೊರಟ್ಟಿ ಅವರ ವಿಶೇಷ ಆಸಕ್ತಿಯ ಫಲವಾಗಿ ಸುವರ್ಣ ವಿಧಾನಸೌಧ ಹೊಸಬೆಳಕು ಕಂಡಿದೆ.

ಬೆಂಗಳೂರಿನ ವಿಧಾನಸೌಧವು ರಾಜ್ಯದಲ್ಲಿಯೇ ಅತ್ಯಂತ ಸುಂದರವಾದ ಕಟ್ಟಡಗಳಲ್ಲಿ ಒಂದು ಎಂದು ಪರಿಗಣಿಸಲಾಗುತ್ತದೆ. ವಿಧಾನಸೌಧದ ಪ್ರತಿರೂಪದಂತಿರುವ ಬೆಳಗಾವಿಯ ಸುವರ್ಣ ವಿಧಾನಸೌಧ ಕೂಡ ಈಗ ಅದೇ ಸಾಲಿಗೆ ಸೇರಿದೆ.

ಬೆಳಗಾವಿ ಸಮೀಪದ ಹಲಗಾ–ಬಸ್ತವಾಡ ಗ್ರಾಮಗಳ ವ್ಯಾಪ್ತಿಯ ಗುಡ್ಡದ ಮೇಲೆ ನಿರ್ಮಿಸಲಾಗಿರುವ ಸುವರ್ಣ ವಿಧಾನಸೌಧವನ್ನು ಅಂದಿನ ಘನತೆವೆತ್ತ ರಾಷ್ಟ್ರಪತಿಯವರಾದ ಪ್ರಣಬ್ ಮುಖರ್ಜಿ ಅವರು 11–10–2012 ರಂದು ಲೋಕಾರ್ಪಣೆಗೊಳಿಸಿದರು.

ಹೆದ್ದಾರಿಯ ಬದಿಯಲ್ಲಿರುವ ಈ ಸುಂದರ ಕಟ್ಟಡವು ಪ್ರತಿದಿನ ಹಗಲು ಹೊತ್ತಿನಲ್ಲಿ ಲಕ್ಷಾಂತರ ಪ್ರಯಾಣಿಕರ ಗಮನಸೆಳೆಯುತ್ತಿದೆ. ಇದೀಗ ಎಲ್ಇಡಿ ದೀಪಾಲಂಕಾರ ಮಾಡಿರುವುದರಿಂದ ರಾತ್ರಿ ಹೊತ್ತಿನಲ್ಲಿ ಕೂಡ ಜನರ ಗಮನಸೆಳೆಯಲಿದೆ.

ನವೆಂಬರ್–ಡಿಸೆಂಬರ್ ಮಾಹೆಯಲ್ಲಿ ನಡೆಯುವ ಕರ್ನಾಟಕ ವಿಧಾನಮಂಡಲ ಚಳಿಗಾಲ ಅಧಿವೇಶನ ಹೊರತುಪಡಿಸಿದರೆ ಬೇರೆ ದಿನಗಳಲ್ಲಿ ಸುವರ್ಣ ವಿಧಾನಸೌಧವು ಸಮರ್ಪಕವಾಗಿ ಬಳಕೆಯಾಗುತ್ತಿಲ್ಲ ಎಂಬ ಅಸಮಾಧಾನ ಜನರಲ್ಲಿತ್ತು.

**ಪ್ರವಾಸಿತಾಣವಾಗಿ ರೂಪಿಸಲು ಕ್ರಮ:**

ಸುವರ್ಣ ವಿಧಾನಸೌಧದ ಘನತೆಗೆ ಧಕ್ಕೆ ಬಾರದ ರೀತಿಯಲ್ಲಿ ಅದನ್ನು ಸದ್ಬಳಕೆ ಮಾಡಿಕೊಳ್ಳುವುದರ ಜತೆಗೆ ಈ ಭಾಗದ ಪ್ರವಾಸಿತಾಣವಾಗಿ ರೂಪಿಸಬೇಕು ಎಂಬುದು ತಮ್ಮ ಆಶಯವಾಗಿದೆ ಎಂದು ಮಾನ್ಯ ಸಭಾಧ್ಯಕ್ಷರಾದ ಯು.ಟಿ.ಖಾದರ್ ಫರೀದ್ ಅವರು ಹಲವಾರು ಬಾರಿ ತಿಳಿಸಿದ್ದಾರೆ.

ಅವರ ಆಶಯದ ಫಲವಾಗಿ ಈ ವರ್ಷದ ಚಳಿಗಾಲ ಅಧಿವೇಶನದ ಸಂದರ್ಭದಲ್ಲಿ ವಿದ್ಯುತ್ ದೀಪಾಲಂಕಾರ ಸೇರಿದಂತೆ ಹಲವಾರು ಹೊಸತನಗಳಿಗೆ ಸೌಧ ಸಾಕ್ಷಿಯಾಗಿದೆ. ಈ ಬಾರಿ ಶಾಶ್ವತ ದೀಪಾಲಂಕಾರ ಮಾಡಲಾಗಿದೆ. ವಿಶೇಷ ದಿನಗಳು, ವಾರದ ಕೊನೆ ದಿನಗಳಲ್ಲಿ ಹಾಗೂ ರಾಷ್ಟ್ರೀಯ ಹಬ್ಬಗಳಂದು ಈ ಎಲ್ಇಡಿ ದೀಪಗಳು ಬೆಳಗಲಿವೆ ಎಂದು ಸಭಾಧ್ಯಕ್ಷರು ತಿಳಿಸಿದ್ದಾರೆ.

ಪಶ್ಚಿಮ ದ್ವಾರದ ಗ್ರ್ಯಾಂಡ್ ಸ್ಟೆಪ್ಸ್ ಎದುರಿನಲ್ಲಿ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್, ರಾಣಿ ಕಿತ್ತೂರು ಚನ್ನಮ್ಮ ಹಾಗೂ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಅವರ ಪ್ರತಿಮೆಗಳನ್ನು ಈಗಾಗಲೇ ಪ್ರತಿಷ್ಠಾಪಿಸಲಾಗಿದೆ.

ಬೆಂಗಳೂರಿನ ವಿಧಾನಸೌಧ–ವಿಕಾಸ ಸೌಧದ ಮಧ್ಯದಲ್ಲಿರುವ ಮಹಾತ್ಮಾ ಗಾಂಧೀಜಿಯವರ ಬೃಹತ್ ಪುತ್ಥಳಿಯ ಮಾದರಿಯಲ್ಲಿ ಸುವರ್ಣ ವಿಧಾನಸೌಧದ ಉತ್ತರ ದ್ವಾರದ ಎದುರು ಪುತ್ಥಳಿಯನ್ನು ಪ್ರತಿಷ್ಠಾಪಿಸುವ ಕೆಲಸ ನಡೆದಿದೆ.

ಇದಲ್ಲದೇ ಪಶ್ಚಿಮ ದ್ವಾರದ ಎದುರುಗಡೆ ಸುಂದರ ಭೂದೃಶ್ಯ(ಲ್ಯಾಂಡ್ ಸ್ಕೇಪ್) ಸೃಷ್ಟಿಸುವ ಕಾಮಗಾರಿ ಕೂಡ ಶೀಘ್ರ ಆರಂಭಗೊಳ್ಳಲಿದೆ ಎಂದು ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಸಚಿವ ಸಂಪುಟದ ಸದಸ್ಯರು, ಶಾಸಕರು ಸುವರ್ಣ ವಿಧಾನಸೌಧದ ಆವರಣದಲ್ಲಿ ಸಸಿಗಳನ್ನು ನೆಡುವ ಮೂಲಕ ಈ ಹಸೀರಕರಣಕ್ಕೆ ಚಾಲನೆ ಕೊಟ್ಟಿದ್ದಾರೆ.

ಬೆಳಗಾವಿ ಜಿಲ್ಲಾಧಿಕಾರಿ ನಿತೇಶ್ ಪಾಟೀಲ ಅವರ ಮುತುವರ್ಜಿಯಿಂದಾಗಿ ವಿದ್ಯುತ್ ದೀಪಾಲಂಕಾರ ಮಾತ್ರವಲ್ಲದೇ ಕಲಾಪಗಳ ವೀಕ್ಷಣೆಗೆ ಆಗಮಿಸುವ ಸಾವಿರಾರು ಮಕ್ಕಳಿಗೆ ಸಂವಿಧಾನ, ಪ್ರಜಾಪ್ರಭುತ್ವ ವ್ಯವಸ್ಥೆ, ಶಾಸಕಾಂಗ ಕಾರ್ಯ ವಿಧಾನದ ಬಗ್ಗೆ ತಿಳಿಸಿಕೊಡುವ ವಿನೂತನ ಪ್ರಯೋಗ ಯಶಸ್ಸು ಕಂಡಿದೆ.

ಇದೇ ಮೊದಲ ಬಾರಿ ಸುವರ್ಣ ವಿಧಾನಸೌಧದ ಆವರಣದಲ್ಲಿ ಮಾಜಿ ಸಭಾಪತಿಗಳು ಹಾಗೂ ಸಭಾಧ್ಯಕ್ಷರುಗಳನ್ನು ಗೌರವಿಸಿ, ಸನ್ಮಾನಿಸುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಇದೇ ವೇಳೆ ನಡೆದ "ಆಳ್ವಾಸ್ ನುಡಿಸಿರಿ–ವಿರಾಸತ್" ಸಾಂಸ್ಕೃತಿಕ ಸಂಜೆ ಕಾರ್ಯಕ್ರಮ ಕೂಡ ಸಾರ್ವಜನಿಕರ ಮೆಚ್ಚುಗೆಗೆ ಪಾತ್ರವಾಯಿತು.



Downloaded From:www.kpscvaani.com

# ಸಿಂಹ ಶೀರ್ಷದ ರಾಷ್ಟ್ರ ಲಾಂಛನ



**ಸಿಂಹ ಶೀರ್ಷದ ಲಾಂಛನವು ನಮ್ಮ ದೇಶದ ಪ್ರಾಚೀನತೆ, ಸಂಸ್ಕೃತಿ, ಪರಂಪರೆ ಹಾಗೂ ಮೌಲ್ಯಗಳನ್ನು ಸಂಕೇತಿಸುತ್ತದೆ.**

ಪ್ರಹ್ಲಾದ ಪರ್ವತಿ

ನಮ್ಮ ರಾಷ್ಟ್ರವು ತನ್ನ ಪರಂಪರೆ, ಸಂಸ್ಕೃತಿ ಹಾಗೂ ಅಂತಃಸತ್ವದ ವೈಶಿಷ್ಟವನ್ನು ಬಿಂಬಿಸುವ ರಾಷ್ಟ್ರ ಲಾಂಛನವನ್ನು ಹಾಗೂ ಚಿಹ್ನೆಗಳನ್ನು ಹೊಂದಿದೆ. ಜನವರಿ 26, ಸ್ವತಂತ್ರ ಭಾರತದ ಅತ್ಯಂತ ಮಹತ್ವಪೂರ್ಣ ದಿನಗಳಲ್ಲೊಂದು. ಈ ದಿನದಂದು ಭಾರತವನ್ನು ಗಣರಾಜ್ಯವೆಂದು ಘೋಷಿಸಲಾಯಿತು. ಇದು ಸ್ವತಂತ್ರ ಭಾರತದ ಸಂವಿಧಾನ ಜಾರಿಗೆ ಬಂದ ದಿನವು ಹೌದು. ಈ ಎರಡು ಮಹತ್ವ ಪೂರ್ಣ ಘಟನೆಗಳು ಜರುಗಿದ್ದು 1950 ಜನವರಿ 26 ರಂದು. ಇದೇ ದಿನದಂದು ಭಾರತದ ಉತ್ತರ ಪ್ರದೇಶದ ವಾರಣಾಸಿ ಸಮೀಪದ ಸಾರಾನಾಥದಲ್ಲಿರುವ ಅಶೋಕ ಚಕ್ರವರ್ತಿ ಸ್ಥಾಪಿಸಿದ ಶಿಲ್ಪ ಸ್ತಂಭದ ಅಗ್ರಭಾಗದಿಂದ ಆಯ್ದುಕೊಂಡ ಸಿಂಹ ಶೀರ್ಷವನ್ನು "ಸತ್ಯಮೇವ ಜಯತೆ" ಎಂಬ ಉಪನಿಷತ್ ವಾಕ್ಯದೊಡನೆ ತನ್ನ ರಾಷ್ಟ್ರ ಲಾಂಛನವನ್ನಾಗಿ ಅಂಗೀಕರಿಸಿತು. ಈ ಲಾಂಛನವನ್ನು ಈಗಲೂ ಸಾರಾನಾಥದಲ್ಲಿರುವ ವಸ್ತು ಸಂಗ್ರಹಾಲಯದಲ್ಲಿ ಸುರಕ್ಷಿತವಾಗಿ ಸಂರಕ್ಷಿಸಿ ಇಡಲಾಗಿದೆ. ಪ್ರಾಚೀನ ಸ್ಫೂರ್ತಿಯ ಈ ಲಾಂಛನದ ಐತಿಹಾಸಿಕ ಮಹತ್ವ ಹಾಗೂ ಅದರ ಪರಿವಾರದ ಮಾಹಿತಿ ಇಲ್ಲಿದೆ.

"ದೇವನಾಂಪ್ರಿಯ" ಎಂದು ಪ್ರಸಿದ್ಧಿಯಾದ ಮೌರ್ಯ ಚಕ್ರವರ್ತಿ ಅಶೋಕನ ಕಾಲದಲ್ಲಿ (ಕ್ರಿ.ಪೂ. 3ನೇ ಶತಮಾನ) ಭಾರತದ ವಾಸ್ತುಶಿಲ್ಪ ಮತ್ತು ಶಿಲ್ಪಕಲೆಗಳು ಅಮೂಲ್ಯವಾದ ಪ್ರಗತಿ ಸಾಧಿಸಿದ್ದವು. ನಾಡಿಗೆ ಉನ್ನತ ಸಂಸ್ಕೃತಿಯನ್ನು ನೀಡಿ, ವಿಶ್ವ ಪ್ರೇಮ, ಸದ್ವರ್ತನೆ ಹಾಗೂ ಆಧ್ಯಾತ್ಮಿಕತೆಯನ್ನು ಸಾಧಿಸಿ, ಮೈತ್ರಿ ಬಲದಿಂದಲೇ ಸಾಮ್ರಾಜ್ಯವನ್ನು ಪಾಲಿಸಿದ ಸಾಮ್ರಾಟ ಅಶೋಕನು ಚರಿತ್ರಾರ್ಹ ಪ್ರಭುವಾಗಿದ್ದಾನೆ. ರಾಜಾ ಅಶೋಕನು ತೀರ್ಥಯಾತ್ರೆ ಕೈಗೊಂಡ ಸಂದರ್ಭದಲ್ಲಿ, ಮಹಾತ್ಮ ಬುದ್ಧನ ಪ್ರಥಮ ಧರ್ಮಚಕ್ರ ಪ್ರವರ್ತನಕ್ಕೆ ಭೂಮಿಯೆನ್ನಿಸಿದ ಸಾರಾನಾಥ ಕ್ಷೇತ್ರವನ್ನು ಸಂದರ್ಶಿಸಿ ಅಲ್ಲಿ ಒಂದು ಸ್ಮಾರಕ ಸ್ತಂಭವನ್ನು ಸ್ಥಾಪಿಸಿದನು. ಈ ಸ್ತಂಭಕ್ಕಾಗಿ ಚುನಾರ್



Downloaded From:www.kpscvaani.com

ಪರ್ವತಗಳಿಂದ ಕಲ್ಲಿನ ಕಂಬವನ್ನು ತರಿಸಿ, ಅದರ ಮೇಲ್ಭಾಗದಲ್ಲಿ "ಸಿಂಹ ಶೀರ್ಷ" ಎಂದು ಕರೆಯಲಾಗುವ ಸುಂದರ ಶಿಲ್ಪವನ್ನು ಕೆತ್ತನೆ ಮಾಡಿಸಿ ಸ್ಥಾಪಿಸಿದ. ನಂತರದ ಆರೇಳು ಶತಮಾನಗಳು ಕಳೆದ ಮೇಲೆ ಚೀನಾದಿಂದ ಪ್ರವಾಸಕ್ಕೆ ಬಂದ ಫಾಹಿಯಾನ್, ನಂತರ ಭೇಟಿ ನೀಡಿದ ಅದೇ ದೇಶದ ಹುಯೆನ್‌ತ್ಸಾಂಗ್ ಮತ್ತು ಇತ್ಸಿಂಗ್ ಅವರು ಸಾರಾನಾಥದ ಈ ಅದ್ಭುತ ಸ್ಮಾರಕವನ್ನು ಕಂಡು ವಿಸ್ಮಯಗೊಂಡದ್ದು ದಾಖಲಾಗಿದೆ.

**ಸಿಂಹಶೀರ್ಷ:** ಏಕ ಘನವಾದ ಮರಳುಗಲ್ಲಿನ ಈ ಶಿಲಾ ಕಂಬದ ಮೇಲ್ಭಾಗದಲ್ಲಿರುವ ಅಪೂರ್ವ ಸೌಂದರ್ಯದ ಸಿಂಹ ಶೀರ್ಷದ ಅಲಂಕಾರ ಭಾಗವನ್ನು ಸಾರಾನಾಥದ ವಸ್ತು ಸಂಗ್ರಹಾಲಯದಲ್ಲಿ ಸಂರಕ್ಷಿಸಿ ಇಡಲಾಗಿದೆ. ಅದರ ರಚನೆ ಮೇಲಿನಿಂದ ಕೆಳಕ್ಕೆ ಮೂರು ಹಂತಗಳಲ್ಲಿ ಇರುವುದನ್ನು ಕಾಣಬಹುದು. ಮೇಲ್ಭಾಗದಲ್ಲಿ, ನೇರ ನೋಟಕ್ಕೆ ಈ ಶಿಲಾ ಪೀಠದಲ್ಲಿ ಮೂರು ಸಿಂಹಗಳು ಕಾಣಿಸುತ್ತಿದ್ದು, ವಾಸ್ತವವಾಗಿ ಅಲ್ಲಿರುವುದು ನಾಲ್ಕು ಸಿಂಹಗಳು. ಎದುರಿಗೆ ಕಾಣುವ ಸಿಂಹದ ಹಿಂದೆ, ಬೆನ್ನಿಗೆ ಬೆನ್ನು ಕೊಟ್ಟು ಅದೇ ದಿಕ್ಕಿಗೆ ಮುಖಮಾಡಿಕೊಂಡ ಇನ್ನೊಂದು ಸಿಂಹವಿದ್ದು, ಅದು ಗೋಚರಿಸುವುದಿಲ್ಲ. ಪೂರ್ವ, ಪಶ್ಚಿಮ, ಉತ್ತರ ಹಾಗೂ ದಕ್ಷಿಣದ ಈ ನಾಲ್ಕು ದಿಕ್ಕಿಗೆ ಮುಖ ಮಾಡಿಕೊಂಡ ಈ ಮಹಾ ಸಿಂಹಗಳು, ಮುಂದಿನ ಎರಡು ಕಾಲುಗಳನ್ನು ಸ್ಥಿರವಾಗಿ ಊರಿ, ಬಾಯ್ದೆರೆದು ಗರ್ಜಿಸುತ್ತ ನಿಂತಿವೆ.

**ಅಶೋಕ ಚಕ್ರ:** ಸಿಂಹಗಳ ಕಾಲಿನ ಕೆಳಗಿರುವ ಮಧ್ಯಭಾಗದಲ್ಲಿ, ದಪ್ಪ ಅಂಚಿನ ದುಂಡಗಾಗಿರುವ ಅಲಂಕಾರದ ಶಿಲಾ ಪೀಠವಿದೆ. ಈ ಚಕ್ರಾಕಾರದ ಪೀಠದ ಎತ್ತರ ಒಂದೂವರೆ ಅಡಿ ಇದ್ದು, ಅಡ್ಡಳತೆ ಎರಡು ಅಡಿ ಹತ್ತು ಅಂಗುಲವಿದೆ. ಪೀಠದ ನಾಲ್ಕು ದಿಕ್ಕಿಗೂ ಮುಖ ಮಾಡಿ ನಿಂತ ಸಿಂಹದ ಪಾದದ ಕೆಳಭಾಗದಲ್ಲಿ ನಾಲ್ಕು ಚಕ್ರಗಳು ಕಾಣುತ್ತವೆ. ಅವುಗಳಲ್ಲಿ ಒಂದನ್ನು ಆಯ್ದು ನಮ್ಮ ರಾಷ್ಟ್ರಧ್ವಜದಲ್ಲಿ ಇರಿಸಿಕೊಳ್ಳಲಾಗಿದೆ. ಈ ಚಕ್ರವನ್ನೇ ಅಶೋಕ ಚಕ್ರ, ಧರ್ಮ ಚಕ್ರ ಎಂದು ಕರೆಯಲಾಗುವುದು. ಈ ಪೀಠದ ಎದುರಲ್ಲಿರುವ ಚಕ್ರದ ಬಲಭಾಗದಲ್ಲಿ ಒಂದು ಗೂಳಿ ನಿಂತಿದ್ದು, ಎಡಭಾಗದಲ್ಲಿ ಒಂದು ಓಡುವ ಕುದುರೆ ಕಾಣುತ್ತದೆ. ಕುದುರೆಯ ಮುಂದಿರುವ (ಮರೆಯಾದ) ಅಂಶತಃ ಕಾಣುವ ಚಕ್ರವನ್ನು ದಾಟಿದರೆ, ಒಂದು ನಿಂತ ಸಿಂಹವಿದೆ. ಅದರಂತೆ ಬಲಭಾಗದಲ್ಲಿರುವ ಗೂಳಿ ಹಿಂಭಾಗದ ಅಂಶತಃ ಕಾಣುವ ಚಕ್ರ ದಾಟಿದರೆ, ನಿಂತ ಭಂಗಿಯ ಆನೆಯ ಚಿತ್ರವಿದೆ. ಈ ನಾಲ್ಕು ಪ್ರಾಣಿಗಳ ಮತ್ತು ನಾಲ್ಕು ಚಕ್ರದಿಂದ ಕೂಡಿದ ಶಿಲಾ ಪೀಠವನ್ನು ಉದ್ದಕ್ಕೆ ಬಿಡಿಸಿ ನೋಡಿದಾಗ, ಈ ನಾಲ್ಕು ಪ್ರಾಣಿಗಳು ತಮ್ಮ ಮುಂದಿನ ಚಕ್ರವನ್ನು ತಾವು ನಡೆಸುತ್ತಿವೆಯೋ ಎಂದು ಭಾಸವಾಗುತ್ತದೆ. ಮತ್ತೊಂದು ಸಲ ವಿವೇಚನೆ ಮಾಡಿದಾಗ, ಈ ಒಂದೊಂದು ಪ್ರಾಣಿಯನ್ನು ಅವುಗಳ ಹಿಂದಿರುವ ಚಕ್ರವೇ ಮುನ್ನಡೆಸುತ್ತಿದೆಯೋ ಎಂದೆನಿಸುತ್ತದೆ.

ಈ ಪೀಠದ ಕೆಳಭಾಗದಲ್ಲಿ ಗಂಟೆಯ ಆಕಾರದ ಒಂದು ಕಮಲ ಪುಷ್ಪವಿದ್ದು, ಈ ಹೂವಿನ ಹದಿನಾರು ದಳಗಳು ಅರಳಿದ ನಂತರ ಅದನ್ನು ಕೆಳಕ್ಕೆ ಒತ್ತಿ ಹಿಡಿದ ಹಾಗೆ ಕಾಣುತ್ತದೆ. ಇದು ಮೂರನೆ ಭಾಗವಾಗಿದೆ. ಮಧ್ಯದಲ್ಲಿರುವ 24 ಅರಗಳ ಚಕ್ರವು, ಸಿಂಹ ಮುಖ ಹಾಗೂ ಕಮಲ ಪುಷ್ಪವನ್ನು ಪ್ರತ್ಯೇಕಿಸುತ್ತದೆ. ಆದರೆ ರಾಷ್ಟ್ರೀಯ ಲಾಂಛನದಲ್ಲಿ ಗಂಟೆಯಾಕಾರದ ಕಮಲದ ಈ ಭಾಗವನ್ನು ಕೈಬಿಡಲಾಗಿದೆ. ಈ ಸಿಂಹ ಶೀರ್ಷಿಕೆಯ ಕೆಳಭಾಗದಲ್ಲಿ ಮೂಂಡಕ ಉಪನಿಷತ್ತಿನಿಂದ ಆಯ್ದ "ಸತ್ಯಮೇವ ಜಯತೇ" ಎಂಬ ವಾಕ್ಯವನ್ನು ದೇವನಾಗರ ಲಿಪಿಯಲ್ಲಿ ಕೆತ್ತಲಾಗಿದೆ. "ಕೇವಲ ಸತ್ಯವೇ ಗೆಲ್ಲುತ್ತದೆ" ಎಂಬುದು ಅದರ ಅರ್ಥ.

**ಧರ್ಮ ಚಕ್ರದ ಪರಿವಾರ:** ಅಶೋಕ ಸ್ಥಂಭದಲ್ಲಿರುವ ಧರ್ಮ ಚಕ್ರವು ನಮ್ಮ ಪ್ರಾಚೀನತೆಯಿಂದ ಸ್ಫೂರ್ತಿ ಪಡೆದಿರುವುದನ್ನು ಗಮನಿಸಬಹುದು. ಇಲ್ಲಿರುವ ಪ್ರಾಣಿಗಳಿಗೆ ವೈಶಿಷ್ಟ್ಯಪೂರ್ಣವಾದ ಅರ್ಥವನ್ನು ವಿದ್ವಾಂಸರು ಮಂಡಿಸುತ್ತಾರೆ. ಕಾಡಿನಲ್ಲಿ ರಾಜ ಠೀವಿಯಿಂದ ಗಂಭೀರವಾಗಿ ಹೆಜ್ಜೆ ಹಾಕುವ ಆನೆಗೆ ಅಸಾಮಾನ್ಯ ದೇಹವಿದ್ದು, ಕಣ್ಣು ಸಣ್ಣದಾದರೂ ದೃಷ್ಟಿ ತೀಕ್ಷ್ಣವಾಗಿರುವ ಆನೆಯನ್ನು ರಾಜರು ಯುದ್ಧ ಕಾಲದಲ್ಲಿ ಉಪಯೋಗಿಸುತ್ತಿದ್ದರು. ಮೈತುಂಬ ಉಕ್ಕಿನ ಉಂಡೆಗಳ, ಓಡಿದರೆ ಮಿಂಚು ಹರಿದಂತಾಗುವ ಗೂಳಿ, ಹಸುಗಳ ನಾಯಕ. ಅದರ ಕೊಂಬು ಸಶಕ್ತ ಆಯುಧ. ಇನ್ನು ಕುದುರೆ ವೇಗದ ಓಟಕ್ಕೆ ಬಹು ಪ್ರಸಿದ್ಧವಾಗಿದೆ. ಯಜಮಾನನ ಆಜ್ಞೆ ಅರಿತು ಗುರಿ ತಲುಪುವಲ್ಲಿ ಅದು ನಿಸ್ಸೀಮವಾದದು. ಸಿಂಹವು ಕಾಡಿನ ಮೃಗಗಳ ರಾಜ.



ತನ್ನ ಗರ್ಜನೆಯಿಂದಲೇ ಇರುವಿಕೆಯನ್ನು ದಾಖಲಿಸುವ ಸಿಂಹಕ್ಕೆ ಪ್ರಾಣಿಗಳೇ ಏಕೆ, ಮನುಷ್ಯರೂ ಭಯ ಬೀಳುತ್ತಾರೆ. ಈ ರೀತಿಯಿಂದ ತಮ್ಮ ದೇಹ, ಶಕ್ತಿ, ಧ್ವನಿ ಮತ್ತು ಇರುವಿಕೆಯಿಂದ ಈ ಪ್ರಾಣಿಗಳು ಹೆಸರಾದವು. ಈ ನಾಲ್ಕು ಪ್ರಾಣಿಗಳು ಇತರರಗಿಂತ ಅಧಿಕ ಶಕ್ತಿ ಪಡೆದವುಗಳಾಗಿದ್ದು ಅವು ಮಹಾಪುರುಷರನ್ನು ಸಂಕೇತಿಸುವಂತೆ ತೋರುತ್ತವೆ. ಈ ಮಹಾಪುರುಷರು ಮಾಡುವ ಕೆಲಸವನ್ನು "ಧರ್ಮ" ಎಂದು ಗುರುತಿಸಬಹುದು. ಅವರು ತಮ್ಮ ಕೆಲಸವನ್ನು ನಿರಂತರವಾಗಿ ಮಾಡುತ್ತಲೇ ಇರಬೇಕು. ಅದು ಮುಗಿಯಿತು ಎಂದು ನಿಲ್ಲಿಸುವಂತಿಲ್ಲ. ಆದ್ದರಿಂದಲೇ ಧರ್ಮವನ್ನು ನಿರಂತರ ಚಲನೆಯಲ್ಲಿರುವ ಚಕ್ರದ ರೂಪದಲ್ಲಿ ಚಿತ್ರಿಸಿದ್ದಾರೆ. ಧರ್ಮಚಕ್ರದ ಪ್ರಾಣಿಯ ಹಿಂದೆ ಮುಂದೆ ಚಕ್ರವಿದೆ. ಮಹಾಪುರುಷರು ಸದಾ ಧರ್ಮದ ನಡುವೆಯೇ ನಿಂತು, ಧರ್ಮ ಪಾಲಿಸಬೇಕು ಎಂಬುದು ಅದರ ತಾತ್ಪರ್ಯ. ನಾಲ್ಕು ಸಿಂಹಗಳು ಧರ್ಮ ಚಕ್ರದ ಮೇಲೆ ಸ್ಥಿರವಾಗಿ ನಿಂತು, ಪ್ರತಿಯೊಂದು ದಿಕ್ಕಿಗೂ ಗರ್ಜಿಸುತ್ತ



Downloaded From:www.kpscvaani.com



ಬಾಯಿ ತೆರೆದು ನಿಂತು ಲೋಕವನ್ನು ಎಚ್ಚರಿಸುತ್ತಿರುವುದರ ಜೊತೆಗೆ ಒಂದಕ್ಕೊಂದು ಬೆನ್ನಿಗೆ ಬೆನ್ನುಕೊಟ್ಟು ಅನ್ಯೋನ್ಯವಾಗಿ ನಿಂತು ಐಕ್ಯತೆಯನ್ನು ಬಿಂಬಿಸುತ್ತವೆ ಎಂದು ವಿದ್ವಾಂಸರು ವಿಶ್ಲೇಷಿಸಿದ್ದಾರೆ.

ಸೃಷ್ಟಿ, ಸ್ಥಿತಿ, ಲಯಗಳನ್ನು ಪ್ರತಿಪಾದಿಸುವ ಧರ್ಮ ಚಕ್ರ ಎಲ್ಲಿಯೂ ನಿಲ್ಲದೇ ನಿರಂತರವಾಗಿ ಸಾಗುವ ಚಲನೆಯನ್ನು ಅರ್ಥೈಸುತ್ತದೆ. ಅದರಲ್ಲಿರುವ 24 ಅರಗಳು ದಿನದ 24 ಗಂಟೆಗಳನ್ನು ಮತ್ತು ಒಂದು ಸಂವತ್ಸರಕ್ಕೆ 24 ವರ್ಷಗಳು ಎಂಬುದನ್ನು ಜ್ಞಾಪಿಸುತ್ತ, ಇಪ್ಪತ್ನಾಲ್ಕು ಗಂಟೆಗಳ ಕಾಲ ಎಡಬಿಡದೆ ಒಂದೇ ಸಮನೆ ಚಕ್ರದ ಹಾಗೆ ಮುಂದೆ ಸಾಗಬೇಕೆಂಬುವ ಬದುಕಿನ ತಿರುಳು ಇಲ್ಲಿದೆ ಎಂಬುದನ್ನು ಧ್ವನಿಸುತ್ತದೆ.

**ಅಧಿಕೃತ ಮುದ್ರೆ:** ರಾಷ್ಟ್ರೀಯ ಲಾಂಛನವು ಪ್ರತಿಯೊಂದು ದೇಶದ ಅಧಿಕೃತ ಆಡಳಿತ ಮುದ್ರೆಯಾಗಿರುತ್ತದೆ. ಸ್ವತಂತ್ರ ರಾಷ್ಟ್ರದ ಅಸ್ತಿತ್ವ ಮತ್ತು ಸಾರ್ವಭೌಮತ್ವಗಳನ್ನು ಸಾರುತ್ತದೆ. ಅತ್ಯಂತ ಹಳೆಯ ನಾಗರಿಕತೆಗಳಲ್ಲಿ ಒಂದಾದ ಮತ್ತು ವಿಶ್ವದ ಅತಿ ದೊಡ್ಡ ಪ್ರಜಾಪ್ರಭುತ್ವ ಹೊಂದಿರುವ ದೇಶ ಭಾರತ. ನಮ್ಮ ರಾಷ್ಟ್ರದ ಈ ವಿಶಿಷ್ಟ ಲಾಂಛನ ಪ್ರಾಚೀನತೆ, ಸಂಸ್ಕೃತಿ, ಪರಂಪರೆ ಹಾಗೂ ಮೌಲ್ಯಗಳನ್ನು ಸಂಕೇತಿಸುತ್ತದೆ.

ನಮ್ಮ ರಾಷ್ಟ್ರ ಲಾಂಛನಕ್ಕೂ ಅಶೋಕನ ಹೆಸರಿಗೂ ಸಂಬಂಧವಿದೆ. ಸಾಮ್ರಾಟ ಅಶೋಕನ ಹೆಸರು ಭಾರತದಲ್ಲಿ ಮಾತ್ರವಲ್ಲ ಜಗತ್ತಿನಲ್ಲೇ ಪ್ರಖ್ಯಾತವಾಗಿದೆ. "ಅಶೋಕನ ಕಾಲ ಭಾರತದ ಇತಿಹಾಸದಲ್ಲಿ ಅಂತಾರಾಷ್ಟ್ರೀಯ ಕಾಲ. ಅದು ಸಂಕುಚಿತವಾದ ರಾಷ್ಟ್ರೀಯ ಕಾಲವಲ್ಲ. ಭಾರತದ ರಾಯಭಾರಿಗಳು ಚಕ್ರವರ್ತಿಗಳಿಗಾಗಿ ದೂರ ದೂರದ ದೇಶಗಳಿಗೆ ಹೋದ ಕಾಲವಲ್ಲ. ಶಾಂತಿ ಸಂಸ್ಕೃತಿ, ಸೌಹಾರ್ದಗಳ ಪ್ರತಿನಿಧಿಗಳಾಗಿ ಹೋದ ಕಾಲವದು" ಎಂದು ಪಂಡಿತ ಜವಹರಲಾಲ್ ನೆಹರು ಅವರು ಬಣ್ಣಿಸಿದ್ದಾರೆ.

ಈ ರಾಷ್ಟ್ರ ಲಾಂಛನವನ್ನು ಕೇವಲ ಭಾರತ ಸರಕಾರ ಹಾಗೂ ರಾಜ್ಯ ಸರಕಾರಗಳು ಅಧಿಕೃತ ಉದ್ದೇಶಗಳಿಗಷ್ಟೇ ಬಳಸಬಹುದಾಗಿದೆ. ಇದನ್ನು ಯಾವುದೇ ವ್ಯಕ್ತಿ ಅಥವಾ ಖಾಸಗಿ ಸಂಸ್ಥೆ ಬಳಸುವಂತಿಲ್ಲ. ಇದರ ಬಳಕೆಯನ್ನು ರಾಷ್ಟ್ರೀಯ ಲಾಂಛನ ಕಾಯಿದೆ, 2005ರ ಅಡಿಯಲ್ಲಿ ನಿಯಂತ್ರಿಸಲಾಗಿದೆ ಮತ್ತು ನಿಷೇಧಿಸಲಾಗಿದೆ. ಭಾರತದ ರಾಷ್ಟ್ರಪತಿಗಳು, ಕೇಂದ್ರ ಸಚಿವ ಸಂಪುಟದ ಸದಸ್ಯರು, ಸಚಿವಾಲಯ, ವಿದೇಶದಲ್ಲಿರುವ ರಾಯಭಾರಿಗಳು, ರಾಜ್ಯಗಳ ರಾಜ್ಯಪಾಲರು, ಮುಖ್ಯ ಆಯುಕ್ತರು, ರಾಜ್ಯ ಸರ್ಕಾರದ ಅಧಿಕೃತ ಮುದ್ರೆಯಾಗಿರುತ್ತದೆ. ಭಾರತದ ನಾಣ್ಯ, ನೋಟುಗಳಲ್ಲಿ, ಅಂಚೆಪತ್ರ, ಕೇಂದ್ರ ಸರ್ಕಾರದ ಲೇಖನ ಸಾಮಗ್ರಿ ಮತ್ತು ಮೊಹರುಗಳು ಹಾಗೂ ಪಾಸ್ ಪೋರ್ಟ್‌ದಲ್ಲಿ ಈ ಲಾಂಛನ ಉಪಯೋಗಿಸಲಾಗುತ್ತದೆ. ರಾಷ್ಟ್ರೀಯ ಲಾಂಛನದ ಅನುಚಿತ ಉಪಯೋಗ ಕಂಡುಬಂದಲ್ಲಿ "ಪ್ರಿವೆನ್ಶನ್ ಆಫ್ ಇಂಪ್ರಾಪರ್ ಯೂಸ್ ಕಾಯ್ದೆ 1950" ರನ್ವಯ ಅಂತಹವರು ಶಿಕ್ಷೆಗೆ ಗುರಿಯಾಗುತ್ತಾರೆ. ನಮ್ಮ ದೇಶದ ರಾಷ್ಟ್ರ ಲಾಂಛನ ಭಾರತದ ಅಸ್ತಿತ್ವ ಪರಂಪರೆಯ ಸಂಕೇತವಾಗಿದೆ. ನಮ್ಮ ರಾಷ್ಟ್ರಧ್ವಜ, ರಾಷ್ಟ್ರಗೀತೆಯಂತೆ ರಾಷ್ಟ್ರ ಲಾಂಛನಕ್ಕೂ ಸಹ ಗೌರವ ತೋರಬೇಕಾದುದು ಪ್ರತಿಯೊಬ್ಬ ಭಾರತೀಯನ ಕರ್ತವ್ಯವಾಗಿದೆ.

> ನಾಲ್ಕು ಸಿಂಹಗಳು ಧರ್ಮ ಚಕ್ರದ ಮೇಲೆ ಸ್ಥಿರವಾಗಿ ನಿಂತು, ಪ್ರತಿಯೊಂದು ದಿಕ್ಕಿಗೂ ಗರ್ಜಿಸುತ್ತ ಬಾಯಿ ತೆರೆದು ನಿಂತು ಲೋಕವನ್ನು ಎಚ್ಚರಿಸುತ್ತಿರುವುದರ ಜೊತೆಗೆ ಒಂದಕ್ಕೊಂದು ಬೆನ್ನಿಗೆ ಬೆನ್ನುಕೊಟ್ಟು ಅನ್ಯೋನ್ಯವಾಗಿ ನಿಂತು ಐಕ್ಯತೆಯನ್ನು ಬಿಂಬಿಸುತ್ತವೆ ಎಂದು ವಿದ್ವಾಂಸರು ವಿಶ್ಲೇಷಿಸಿದ್ದಾರೆ.



Downloaded From:www.kpscvaani.com




# ಆಯುಷ್ಮಾನ್ ಆರೋಗ್ಯ ಕಾರ್ಡ್‌ಗೆ ಹೊಸ ರೂಪ

**ರಾಷ್ಟ್ರದಾದ್ಯಂತ ಉಚಿತ ಚಿಕಿತ್ಸೆ ಪಡೆಯಲು ಅನುಕೂಲವಾಗುವಂತೆ ಆಯುಷ್ಮಾನ್ ಆರೋಗ್ಯ ಕಾರ್ಡ್ ವಿತರಣೆ.**

ರಿಷಿಕೇಶ್ ಪಿ. ವಿ

ಇನ್ನು ಮುಂದೆ ಸರ್ಕಾರಿ ಮತ್ತು ನೋಂದಾಯಿತ ಖಾಸಗಿ ಆಸ್ಪತ್ರೆಗಳಿಗೆ ಆಗಮಿಸುವ ಬಿಪಿಎಲ್ ಕುಟುಂಬದ ಫಲಾನುಭವಿಗಳು ಆಯುಷ್ಮಾನ್ ಆರೋಗ್ಯ ಕಾರ್ಡ್ ಹೊಂದಿದ್ದರೆ ಸಾಕು, ಅವರು 5 ಲಕ್ಷದವರೆಗೆ ಉಚಿತವಾಗಿ ಚಿಕಿತ್ಸೆಯನ್ನು ಪಡೆಯಬಹುದು. ಈ ಕಾರ್ಡ್ ಅನ್ನು ಹೊಂದಿರುವವರಿಗೆ ಮತ್ಯಾವುದೇ ದಾಖಲೆಯನ್ನು ಕೇಳಬಾರದೆಂದು ಆರೋಗ್ಯ ಇಲಾಖೆ ಎಚ್ಚರಿಕೆಯನ್ನು ನೀಡಿದೆ.

ಗ್ಯಾರಂಟಿ ಯೋಜನೆಗಳ ಮೂಲಕ ಜನರ ಮನ ಗೆಲ್ಲುವ ಪ್ರಯತ್ನಕ್ಕೆ ಕೈ ಹಾಕಿರುವ ರಾಜ್ಯ ಸರ್ಕಾರವು ಜನತೆಗೆ ಮತ್ತೊಂದು ಸಿಹಿ ಸುದ್ದಿ ನೀಡಿದೆ. ಆಯುಷ್ಮಾನ್ ಭಾರತ್ ಪ್ರಧಾನ ಮಂತ್ರಿ ಜನಾರೋಗ್ಯ- ಮುಖ್ಯಮಂತ್ರಿಗಳ ಆರೋಗ್ಯ ಕರ್ನಾಟಕ ಹೆಸರಲ್ಲಿ ಇನ್ಮುಂದೆ ಹೆಲ್ತ್ ಕಾರ್ಡ್‌ಗಳು ರಾಜ್ಯದ ಜನಸಾಮಾನ್ಯರಿಗೆ ತಲುಪಲಿವೆ. ಎಪಿಎಲ್ ಕುಟುಂಬದವರಿಗೂ ಸಹ ಈ ಯೋಜನೆಯಲ್ಲಿ ಅವಕಾಶ ಕಲ್ಪಿಸಿ, ದೇಶದ ಮೊದಲ ರಾಜ್ಯ ಕರ್ನಾಟಕ ಎಂಬ ಹೆಗ್ಗಳಿಕೆಗೂ ಪಾತ್ರವಾಗಿದೆ. ರಾಜ್ಯದ ಆಸ್ಪತ್ರೆಗಳ ಜೊತೆಗೆ ದೇಶದ ಇತರ ರಾಜ್ಯಗಳ ಆಸ್ಪತ್ರೆಗಳಲ್ಲೂ ಹೆಚ್ಚಿನ ಚಿಕಿತ್ಸೆ ಪಡೆಯಲು ಅವಕಾಶ ಕಲ್ಪಿಸಲಾಗಿದೆ.

ರಾಜ್ಯದ ಪ್ರತಿ ಪ್ರಜೆಗೂ ಗುಣಮಟ್ಟದ, ಸುಲಲಿತ, ಸಮಗ್ರ, ಅಗ್ಗದ ಮತ್ತು ಸುರಕ್ಷಿತ ಆರೋಗ್ಯ ಸೇವೆ ಒದಗಿಸುವ ಉದ್ದೇಶವನ್ನು ಈ ಯೋಜನೆ ಹೊಂದಿದೆ. ಈ ಹಿನ್ನೆಲೆಯಲ್ಲಿ ಯೋಜನೆ ಕುರಿತ ವೈಶಿಷ್ಟ್ಯತೆ ಪ್ರಯೋಜನ ಹಾಗೂ ಈ ಸೌಲಭ್ಯವನ್ನು ಹೇಗೆ ಪಡೆಯಬಹುದು ಎಂಬುವುದರ ಬಗ್ಗೆ ಸಂಪೂರ್ಣ ವಿವರ ಇಲ್ಲಿದೆ.

ರಾಜ್ಯದ ಜನತೆಗೆ ಸಾಮಾನ್ಯ ರೋಗಗಳಿಂದ ಹಿಡಿದು ಗಂಭೀರ ಪ್ರಮಾಣದ ಕಾಯಿಲೆಗಳಿಗೆ ಚಿಕಿತ್ಸೆ ಪಡೆಯಲು ಅನುಕೂಲ ಆಗುವಂತೆ ಸರ್ಕಾರದಿಂದ ಆಯುಷ್ಮಾನ್ ಭಾರತ್-ಆರೋಗ್ಯ ಕರ್ನಾಟಕ ಯೋಜನೆ ಅಡಿಯಲ್ಲಿ ಅನುಕೂಲ


Downloaded From:www.kpscvaani.com

**ಅಭಾ ಜತೆ ಜೋಡಣೆ**

ರೋಗಿಯ ಹಿತದೃಷ್ಟಿಯಿಂದ ಆರೋಗ್ಯದ ಸ್ಥಿತಿ-ಗತಿ, ಪಡೆಯುತ್ತಿರುವ ಚಿಕಿತ್ಸೆಯ ರಾಷ್ಟ್ರೀಯ ಆರೋಗ್ಯ ಐಡಿ (ABHA ID) ಮೂಲಕ ಡಿಜಿಟಲ್ ರೂಪದಲ್ಲಿ ಸಂರಕ್ಷಿಸಿ ಇಡಲಾಗುತ್ತದೆ. ಈ ಡಿಜಿಟಲ್ ಲಾಕರ್‌ನಿಂದ ಆತ ಹಿಂದೆ ಪಡೆದಿರುವ ಚಿಕಿತ್ಸೆಗಳ ಮಾಹಿತಿಯು ದೊರಕಲಿದೆ. ಇದು ಆತನ ಮುಂದಿನ ಚಿಕಿತ್ಸೆಗೆ ನೆರವಾಗಲಿದೆ.

ಆಯುಷ್ಮಾನ್ ಭಾರತ್-ಪ್ರಧಾನ ಮಂತ್ರಿ ಜನಾರೋಗ್ಯ ಯೋಜನಾ-ಮುಖ್ಯಮಂತ್ರಿಗಳ ಆರೋಗ್ಯ ಕರ್ನಾಟಕ ಗುರುತಿನ ಚೀಟಿಯನ್ನು ರಾಷ್ಟ್ರೀಯ ಆರೋಗ್ಯ ಐಡಿ (ABHA ID) ಯೊಂದಿಗೆ ಜೋಡಿಸಲಾಗಿರುತ್ತದೆ. ಇದರಿಂದ ಫಲಾನುಭವಿಗಳ ವೈದ್ಯಕೀಯ ದಾಖಲೆಗಳನ್ನು ಸಂರಕ್ಷಿಸಿ, ಪರಿಣಾಮಕಾರಿ ಚಿಕಿತ್ಸೆ ನೀಡಲು ನೆರವಾಗುತ್ತದೆ.

ಈ ಗುರುತಿನ ಚೀಟಿಯು ವ್ಯಕ್ತಿಯೊಬ್ಬರ ಆರೋಗ್ಯ ಕುರಿತಾದ ಎಲ್ಲಾ ಮಾಹಿತಿಯನ್ನು ಒಳಗೊಂಡಿರಲಿದೆ. ಅಂದರೆ ಕಾರ್ಡ್ ವಿತರಿಸಿದ ಬಳಿಕ ಆ ವ್ಯಕ್ತಿ ದೇಶದ ಯಾವುದೇ ವೈದ್ಯರನ್ನು ಭೇಟಿ ಮಾಡಿದ ವಿಷಯ, ಅವರು ಆತನಿಗೆ ನೀಡಿದ ಚಿಕಿತ್ಸೆ, ವೈದ್ಯಕೀಯ ವರದಿಗಳು, ಕಾಯಿಲೆಗಳು ಸೇರಿದಂತೆ ಆತನ ಎಲ್ಲಾ ಆರೋಗ್ಯದ ಮಾಹಿತಿ ಒಳಗೊಂಡಿರುತ್ತದೆ.

ಡಿಜಿಟಲ್ ಆರೋಗ್ಯ ಕಾರ್ಡ್‌ಲ್ಲಿ (Digital Health card) ವ್ಯಕ್ತಿಯ ಆರೋಗ್ಯಕ್ಕೆ ಸಂಬಂಧಿಸಿದ ಎಲ್ಲಾ ಮಾಹಿತಿಯನ್ನು ದಾಖಲಿಸಲಾಗುತ್ತದೆ. ಹೀಗಾಗಿ ವ್ಯಕ್ತಿಯೊಬ್ಬ ಭವಿಷ್ಯದಲ್ಲಿ ಯಾವುದೇ ವೈದ್ಯರ ಭೇಟಿ ವೇಳೆ ಈ ಕಾರ್ಡ್ ತೋರಿಸಿದರೆ ಅವರಿಗೆ ರೋಗಿಯ ಎಲ್ಲಾ ಪೂರ್ವಾಪರ ತಿಳಿಯುತ್ತದೆ. ಇದರಿಂದ ತಮ್ಮ ಹಳೆಯ ಚಿಕಿತ್ಸೆಯ ಮಾಹಿತಿಯ ಕಡತಗಳನ್ನು ರೋಗಿ ಎಲ್ಲೆಡೆ ತೆಗೆದುಕೊಂಡು ಹೋಗಬೇಕಿಲ್ಲ. ರೋಗಿಯ ಈ ಆರೋಗ್ಯ ಗುರುತಿನ ಚೀಟಿಯನ್ನು ನೋಡಿದರೆ, ವೈದ್ಯರು ಆರೋಗ್ಯ ಪರಿಸ್ಥಿತಿಯನ್ನು ತಿಳಿದುಕೊಳ್ಳಬಹುದು. ಜೊತೆಗೆ ಹೆಚ್ಚಿನ ಚಿಕಿತ್ಸೆಯನ್ನು ಮುಂದುವರಿಸಲು ಸಾಧ್ಯವಾಗುತ್ತದೆ.

ಕಲ್ಪಿಸಲಾಗಿದೆ. ಆಯುಷ್ಮಾನ್ ಭಾರತ್ (Ayushman Bharat) – ಆರೋಗ್ಯ ಕರ್ನಾಟಕ (Arogya Karnataka) ಹೆಲ್ತ್ ಕಾರ್ಡ್‌ಗಳಿಗೆ (Health Card) ಆರೋಗ್ಯ ಇಲಾಖೆ ಈಗ ಹೊಸ ರೂಪ ನೀಡಿದೆ. ಇದರ ಹೆಸರಿನಲ್ಲೂ ಅಲ್ಪ ಬದಲಾವಣೆಯಾಗಿದ್ದು, ಆಯುಷ್ಮಾನ್ ಭಾರತ್ – ಪ್ರಧಾನ ಮಂತ್ರಿ ಜನಾರೋಗ್ಯ – ಮುಖ್ಯಮಂತ್ರಿಗಳ ಆರೋಗ್ಯ ಕರ್ನಾಟಕ ಎಂದು ಹೆಸರಿಡಲಾಗಿದೆ.

ಈ ಕಾರ್ಡ್ ಹೊಂದಿದವರು ದೇಶದ ಯಾವುದೇ ಕಡೆ (ನೋಂದಾಯಿತ) ಆಸ್ಪತ್ರೆಗಳಲ್ಲಿ ಚಿಕಿತ್ಸೆಯನ್ನು ಪಡೆಯಬಹುದಾಗಿದೆ. ಈ ಮರುನಾಮಕರಣಗೊಂಡ ನವೀಕೃತ ಹೆಲ್ತ್ ಕಾರ್ಡ್‌ಗಳನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಡಿಸೆಂಬರ್ 6ರಂದು ಬಿಡುಗಡೆಗೊಳಿಸಿದರು. ಅದರಂತೆ ಇನ್ನು ಆರು ತಿಂಗಳಲ್ಲಿ ಬರೊಬ್ಬರಿ 5.09 ಕೋಟಿ ಮಂದಿಗೆ ಪರಿಷ್ಕೃತ ಕಾರ್ಡ್ ವಿತರಿಸುವ ಗುರಿ ಹೊಂದಲಾಗಿದೆ. ರಾಜ್ಯದ ಪ್ರತಿಯೊಬ್ಬ ಜನಸಾಮಾನ್ಯರಿಗೆ ಉತ್ತಮ ಆರೋಗ್ಯ ಸೇವೆ ಹಾಗೂ ಚಿಕಿತ್ಸೆಗಳನ್ನು ಒದಗಿಸಬೇಕು ಎಂಬುದು ಸರ್ಕಾರದ ಆದ್ಯತೆಗಳಲ್ಲಿ ಒಂದು. ಇನ್ನು ಈ ಕಾರ್ಯಕ್ರಮದಲ್ಲಿ ಆರೋಗ್ಯ ಸಚಿವರಾದ ದಿನೇಶ್ ಗುಂಡೂರಾವ್, ಇಲಾಖೆ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

ಈ ಯೋಜನೆಯಡಿ ಬಿ.ಪಿ.ಎಲ್ ಕುಟುಂಬದಾರರು ಹೊಂದಿರುವ ಪ್ರತಿ ಕಾರ್ಡ್‌ಗೆ ಒಟ್ಟು ಕುಟುಂಬ ಸದಸ್ಯರಿಗೆ ವಾರ್ಷಿಕ 5 ಲಕ್ಷ ರೂ ವರೆಗಿನ ಚಿಕಿತ್ಸೆಯನ್ನು ಉಚಿತವಾಗಿ ನೀಡಲಾಗುವುದು. ಬಿ.ಪಿ.ಎಲ್ ಸದಸ್ಯರ ಚಿಕಿತ್ಸಾ ವೆಚ್ಚದಲ್ಲಿ ಶೇ.66 ರಷ್ಟು ಅನುದಾನವನ್ನು ರಾಜ್ಯ ಸರ್ಕಾರವು ಹಾಗೂ ಶೇ.34 ರಷ್ಟು ಅನುದಾನವನ್ನು ಕೇಂದ್ರ ಸರ್ಕಾರವು ಭರಿಸಲಿದೆ.

ಆಯುಷ್ಮಾನ್ ಭಾರತ್ ಪ್ರಧಾನಮಂತ್ರಿ ಜನಾರೋಗ್ಯ ನ್ಯಾಷನಲ್ ಪೋರ್ಟಲ್‌ಗೆ ನೂತನ ಹೆಲ್ತ್ ಕಾರ್ಡ್‌ಗಳನ್ನು ಸಂಯೋಜನೆಗೊಳಿಸಲಾಗಿದೆ. ಹಾಗಾಗಿ ರಾಜ್ಯದ ಬಿಪಿಎಲ್ ಕಾರ್ಡುದಾರರು ಹೆಲ್ತ್ ಕಾರ್ಡ್‌ನ ಅಡಿ ಈ ಯೋಜನೆಯಡಿ ನೋಂದಣಿಯಾಗಿರುವ ದೇಶದ ಯಾವುದೇ ಆಸ್ಪತ್ರೆಗಳಲ್ಲಿ ಗುರುತಿಸಲಾಗಿರುವ 171 ಅತ್ಯಂತ ತುರ್ತು ಚಿಕಿತ್ಸೆಯನ್ನು ಹಾಗೂ 1650 ಚಿಕಿತ್ಸಾ ಪ್ಯಾಕೇಜ್‌ಗಳನ್ನು ಪಡೆಯಬಹುದಾಗಿದೆ. ನಮ್ಮ ರಾಜ್ಯದಲ್ಲಿ 3450 ಕ್ಕೂ ಹೆಚ್ಚು ಆಸ್ಪತ್ರೆಗಳು ಈ ಯೋಜನೆಯಡಿ ನೋಂದಣೆಯಾಗಿವೆ.

**ವಾರ್ಷಿಕ 5 ಲಕ್ಷ ರೂ. ಮೌಲ್ಯದ ಉಚಿತ ಚಿಕಿತ್ಸೆ**

ಈ ಯೋಜನೆಯಡಿಯಲ್ಲಿ ಬಿ.ಪಿ.ಎಲ್ ಪಡಿತರ ಚೀಟಿ ಹೊಂದಿರುವ ಬಡ ಕುಟುಂಬಗಳು ವಾರ್ಷಿಕ 5 ಲಕ್ಷ ರೂ. ಮೌಲ್ಯದ ಚಿಕಿತ್ಸೆಯನ್ನು ಕುಟುಂಬದ ಒಬ್ಬರು ಅಥವಾ ಹಲವು ಸದಸ್ಯರು ಸೇರಿದಂತೆ ಪಡೆದುಕೊಳ್ಳಬಹುದು.

ಈ ಕಾರ್ಡುಗಳನ್ನು ರಾಷ್ಟ್ರೀಯ ಆರೋಗ್ಯ ಕಾರ್ಡ್ (ABHA) ನೊಂದಿಗೆ ಜೋಡಿಸಲಾಗಿರುವುದರಿಂದ ಫಲಾನುಭವಿಗಳ ವೈದ್ಯಕೀಯ ದಾಖಲೆಗಳನ್ನು ಸಂರಕ್ಷಿಸಿ, ಸುಲಭ ಮತ್ತು ಪರಿಣಾಮಕಾರಿ ಚಿಕಿತ್ಸೆ ನೀಡಲು ನೆರವಾಗಲಿದೆ.

**ಎಪಿಎಲ್ ಕುಟುಂಬಗಳಿಗೂ ಸೌಲಭ್ಯ**

ಎಪಿಎಲ್ ಕುಟುಂಬದವರಿಗೂ ಸಹ ಯೋಜನೆಯಲ್ಲಿ ಅವಕಾಶ ಕಲ್ಪಿಸಿರುವ ಮೊದಲ ರಾಜ್ಯ ಕರ್ನಾಟಕವಾಗಿದ್ದು, ಎಪಿಎಲ್ ಕುಟುಂಬಗಳಿಗೆ 5 ಲಕ್ಷ ಮೌಲ್ಯದ ಚಿಕಿತ್ಸೆಯಲ್ಲಿ ಗರಿಷ್ಠ ರೂ.1.5 ಲಕ್ಷ ವೆಚ್ಚವನ್ನು ರಾಜ್ಯ ಸರ್ಕಾರ ಪಾವತಿಸಲಿದೆ. ಅಂದರೆ ಎಪಿಎಲ್ ಕಾರ್ಡುದಾರರು ಶೇ 70 ರಷ್ಟು ಚಿಕಿತ್ಸಾ ವೆಚ್ಚವನ್ನು ಪಾವತಿಸಿದರೆ, ಶೇ 30 ರಷ್ಟು ವೆಚ್ಚವನ್ನು ರಾಜ್ಯ ಸರ್ಕಾರ ಭರಿಸಲಿದೆ.

ಆಯುಷ್ಮಾನ್ ಭಾರತ್-ಪ್ರಧಾನ ಮಂತ್ರಿ ಜನಾರೋಗ್ಯ ಯೋಜನಾ-ಮುಖ್ಯಮಂತ್ರಿಗಳ ಆರೋಗ್ಯ ಕರ್ನಾಟಕ ಯೋಜನೆಯ Co-branded ಗುರುತಿನ ಚೀಟಿಗಳಾಗಿದ್ದು, Co-branded ಗುರುತಿನ ಚೀಟಿಗಳನ್ನು ಉಚಿತವಾಗಿ ನೀಡಲಾಗುತ್ತದೆ. ಆಯುಷ್ಮಾನ್ ಭಾರತ್-ಪ್ರಧಾನ ಮಂತ್ರಿ ಜನಾರೋಗ್ಯ ಯೋಜನಾ-ಮುಖ್ಯಮಂತ್ರಿಗಳ ಆರೋಗ್ಯ ಕರ್ನಾಟಕ ಕಾರ್ಡ್‌ಗಳನ್ನು ಪಡಿತರ ಚೀಟಿಯೊಂದಿಗೆ ಜೋಡಿಸಲಾದ ಮೂಲ ಆಧಾರ್ ಗುರುತಿನ ಚೀಟಿಯ ಸಹಾಯದಿಂದ ಹತ್ತಿರದ ಗ್ರಾಮ ಒನ್ ಕೇಂದ್ರಗಳು ಅಥವಾ ನಾಗರೀಕ ಸೇವಾ ಕೇಂದ್ರಗಳಿಂದ ಸುಲಭವಾಗಿ ಪಡೆಯಬಹುದು. ಸದ್ಯದಲ್ಲೇ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲೂ ಈ ಹೆಲ್ತ್ ಕಾರ್ಡ್ ನೋಂದಣೆ ಸೇವೆಯನ್ನು ಪ್ರಾರಂಭಿಸಲಾಗುವುದು. ■


Downloaded From:www.kpscvaani.com



# ಅಕ್ರಮ ಸಾಗುವಳಿ ಮಂಜೂರಿಗೆ ಡಿಜಿಟಲ್ ಸ್ಪರ್ಶ

**ಬಗರ್ ಹುಕುಂ ಎಂಬ ಹೆಸರಿನಲ್ಲಿ ವಿನೂತನ ತಂತ್ರಾಂಶದ ಮೂಲಕ ಭೂ ಮಂಜೂರಾತಿಯನ್ನು ನೀಡಲು ಮುಂದಾಗಿರುವ ಸರ್ಕಾರ**

ಲಕ್ಷ್ಮೀಕಾಂತರಾಜು ಎಂ ಜಿ

**ಸ**ರ್ಕಾರಿ ಭೂಮಿಯಲ್ಲಿ ಅಕ್ರಮವಾಗಿ ಸಾಗುವಳಿ ಮಾಡಿಕೊಂಡು ಬಂದಿರುವ ರೈತರಿಗೆ ಭೂ ಮಂಜೂರು ಮಾಡುವ ಉದ್ದೇಶಕ್ಕೆ ಕರ್ನಾಟಕ ಸರ್ಕಾರವು ವಿನೂತನ ತಂತ್ರಾಂಶವೊಂದನ್ನು ರೂಪಿಸುವ ಮೂಲಕ ಭೂ ಮಂಜೂರಾತಿ ಸಮಿತಿಯು (ಬಗರ್ ಹುಕುಂ ಕಮಿಟಿ) ತಾಂತ್ರಿಕ ನೆರವಿನಿಂದಲೂ ರೈತರ ಸಾಗುವಳಿ ಪರಿಶೀಲನೆ ಮಾಡುವ ಮೂಲಕ ಭೂ ಮಂಜೂರಾತಿ ಪ್ರಕ್ರಿಯೆಗೆ ಇದೇ ಮೊದಲ ಬಾರಿಗೆ ಹೊಸ ಆಯಾಮ ನೀಡಲಾಗಿದೆ. ಈ ಕಾರ್ಯಕ್ಕೆ ಕಂದಾಯ ಸಚಿವರ ವಿನೂತನ ಆಲೋಚನೆಯು ಕಾರಣವಾಗಿದೆ ಎಂದರೆ ತಪ್ಪಾಗಲಾರದು.

ಬಗರ್ ಹಕುಂ ಎಂಬ ಹೆಸರಿನಲ್ಲಿ ಸಿದ್ಧಪಡಿಸಿರುವ ತಂತ್ರಾಂಶದಲ್ಲಿ ಅರ್ಜಿದಾರನ ಸಾಗುವಳಿ ಜಮೀನಿನ ಕಳೆದ ಹದಿನೈದು ವರ್ಷದ ಹಿಂದಿನ ಫೋಟೋವನ್ನು ಕೆಎಸ್‌ಆರ್‌ಎಸ್‌ಎಸಿ ಯಿಂದ ಉಪಗ್ರಹ ಆಧಾರಿತ ಫೋಟೋ ಪಡೆದು ಇಲ್ಲಿ ಉಳುಮೆ ಮಾಡುತ್ತಿದ್ದ ಕುರಿತು ಪರಿಶೀಲಿಸಿ ಮಂಜೂರಿಗೆ ಸಮಿತಿ ಮುಂದೆ ಅರ್ಜಿ ಮಂಡಿಸಲು ಸಮಿತಿಯ ಸದಸ್ಯ ಕಾರ್ಯದರ್ಶಿಯೂ ಆದ ತಹಸೀಲ್ದಾರ್ ಅವರುಗಳಿಗೆ ನಿರ್ದೇಶನ ನೀಡಲಾಗಿದೆ.

ರಾಜ್ಯದ ಎಲ್ಲ ತಾಲ್ಲೂಕು ಮಟ್ಟದಲ್ಲಿ ಸ್ಥಳೀಯ ಶಾಸಕರುಗಳ ಅಧ್ಯಕ್ಷತೆಯಲ್ಲಿ ಭೂ ಮಂಜೂರಾತಿ ಸಮಿತಿ ರಚನೆಯಾಗಿದ್ದು, ಮುಂದಿನ ಎಂಟು ತಿಂಗಳಲ್ಲಿ ಭೂ ಮಂಜೂರು ಕೋರಿ ಬಂದಿರುವ ಅರ್ಜಿಗಳ ವಿಲೇ ಮಾಡಲಾಗುವುದು ಎಂದು ಕಂದಾಯ ಸಚಿವರಾದ ಕೃಷ್ಣಭೈರೆಗೌಡರು ಹೇಳಿರುವುದು ಬಹಳ ವರ್ಷಗಳಿಂದ ಮಂಜೂರಾತಿಗಾಗಿ ಬಾಕಿ ಇರುವ ಅರ್ಜಿದಾರರಾದ ಅರ್ಹ ರೈತರುಗಳಿಗೆ ವರದಾನವಾಗಲಿದೆ.


Downloaded From:www.kpscvaani.com



**ಬಗರ್ ಹುಕುಂ ತಂತ್ರಾಂಶ**

ನಮೂನೆ 57 ರಲ್ಲಿ ಅರ್ಜಿ ಸಲ್ಲಿಸಿರುವವರು ಅರ್ಜಿ ಸಲ್ಲಿಸಿದ ದಿನಾಂಕಕ್ಕೆ ಸರ್ಕಾರಿ ಭೂಮಿಯಲ್ಲಿ ಹದಿನೈದು ವರ್ಷ ಸಾಗುವಳಿ ಮಾಡಿರಬೇಕೆಂಬುದು ನಿಯಮ. ಅರ್ಜಿದಾರ ರೈತ ಹದಿನೈದಕ್ಕೂ ಹೆಚ್ಚು ವರ್ಷ ಸಾಗುವಳಿ ಮಾಡಿದ್ದಾನೋ? ಇಲ್ಲವೋ ಎಂಬುದನ್ನು ಖಚಿತ ಪಡಿಸಿಕೊಳ್ಳಲು ಬಗರ್ ಹುಕುಂ ಎಂಬ ತಂತ್ರಾಂಶ ರೂಪಿಸಲಾಗಿದೆ. ಇದರಿಂದ ಹದಿನೈದು ವರ್ಷಗಳ ಹಿಂದಿನ ಉದ್ದೇಶಿತ ಭೂಮಿಯ ಫೋಟೋಗಳನ್ನು ವೀಕ್ಷಿಸಿ ಮಂಜೂರಿಗೆ ಅರ್ಹನಿದ್ದಾನೆಯೇ? ಇಲ್ಲವೋ? ಎಂಬುದನ್ನು ಸಮಿತಿ ತೀರ್ಮಾನಿಸುತ್ತದೆ.

ನಮೂನೆ 50, 53 ಹಾಗೂ 57 ಗಳಲ್ಲಿ ತಾಲ್ಲೂಕು ಮಟ್ಟದಲ್ಲಿ ಸಾವಿರಾರು ಅರ್ಜಿಗಳು ಬಾಕಿ ಇವೆ. 54 ಲಕ್ಷ ಎಕರೆ ಮಂಜೂರಾತಿ ಕೋರಿ 9,56,512 ಲಕ್ಷ ಅರ್ಜಿಗಳು ಸ್ವೀಕೃತವಾಗಿದ್ದು, ಈ ಎಲ್ಲ ಅರ್ಜಿಗಳನ್ನು ನಿಯಾಮಾನುಸಾರ ತ್ವರಿತವಾಗಿ ವಿಲೇವಾರಿ ಮಾಡಲಾಗುವುದು ಎಂದು ಸಚಿವರು ಹೇಳಿದ್ದಾರೆ. ವಾಸ್ತವದಲ್ಲಿ 50 ಲಕ್ಷ ಎಕರೆ ಮಂಜೂರು ಮಾಡಬಹುದಾದ ಭೂಮಿ ಇಲ್ಲದಿರುವುದು ಮತ್ತು ಅನರ್ಹ ಅರ್ಜಿಗಳೇ ತುಂಬಿರುವುದರಿಂದ ಪಾರದರ್ಶಕವಾಗಿ ಹಾಗೂ ನಿಯಮಾನುಸಾರ ವಿಲೇ ಮಾಡುವ ಉದ್ದೇಶವನ್ನು ಕಂದಾಯ ಸಚಿವರು ಹೊಂದಿರುವುದು ಆಶಾದಾಯಕ ಬೆಳವಣಿಗೆಯಾಗಿದೆ.

ಗ್ರಾಮವೊಂದರ ಸರ್ವೇ ನಂಬರ್‌ವೊಂದರಲ್ಲಿ ಹಲವರು ಮಂಜೂರು ಕೋರಿ ಅರ್ಜಿ ಸಲ್ಲಿಸಿದ್ದರೆ ಅರ್ಜಿ ನಮೂನೆಗಳಾದ 50, 53, 57 ಗಳನ್ನು ಹಿರಿತನದಲ್ಲಿ ಆದ್ಯತೆ ನೀಡಿ ವಿಲೇವಾರಿ ಮಾಡಬೇಕೆಂದು ಕಂದಾಯ ಇಲಾಖೆಯು ಡಿಸೆಂಬರ್ ಒಂದ ರಂದು ಹೊರಡಿಸಿರುವ ಬಗರ್ ಹುಕುಂ ಸಮಿತಿ



ಸಂಬಂಧದ ಮಾರ್ಗಸೂಚಿಯಲ್ಲಿ ಸ್ಪಷ್ಟಪಡಿಸಲಾಗಿದೆ.

**ಬಾರ್ ಕೋಡ್ ಮತ್ತು "ಇ" ಸಾಗುವಳಿ ಚೀಟಿ**

ಈ ಬಾರಿ ಮಂಜೂರು ಆಗುವ ಭೂಮಿಯ ಅರ್ಜಿದಾರನಿಗೆ ನೀಡುವ ಸಾಗುವಳಿ ಚೀಟಿಗೆ ಇ ಸಾಗುವಳಿ ಚೀಟಿ ನೀಡುವುದು ಹಾಗೂ ಬಾರ್ ಕೋಡ್ ಹಾಗೂ ಸಮಿತಿಯ ನಡವಳಿಗಳೆಲ್ಲವನ್ನೂ ಆನ್‌ಲೈನ್‌ನಲ್ಲಿ ದಾಖಲಿಸುವುದರಿಂದ ಇಡೀ ಪ್ರಕ್ರಿಯೆ ಸಂಪೂರ್ಣ ಡಿಜಿಟಲೀಕರಣವಾಗುವ ಮೂಲಕ ಪಾರದರ್ಶಕವಾಗಲಿದೆ.

ಈ ಹಿಂದಿನ ಭೂ ಮಂಜೂರಾತಿ ಪ್ರಕ್ರಿಯೆಗಳಲ್ಲಿ ಸಾಕಷ್ಟು ತಾಂತ್ರಿಕ ದೋಷಗಳಿದ್ದ ಕಾರಣ ಮಂಜೂರಾದ ಭೂಮಿಯನ್ನು ದುರಸ್ತಿ ಮಾಡಲೂ ಸಾಧ್ಯವಾಗಿಲ್ಲ. ಇದರಿಂದ ಸುಮಾರು ನಲವತ್ತು ವರ್ಷಗಳ ಹಿಂದಿನ ಮಂಜೂರಿ ಭೂಮಿಗಳು ದುರಸ್ತಿ ಕಾಣದ ಪ್ರಕರಣಗಳಿವೆ. ಈ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಪ್ರಸ್ತುತ ಭೂ ಮಂಜೂರಾತಿ ಸಮಿತಿ ಪ್ರಕ್ರಿಯೆಗಳಿಗೆ ಸಂಪೂರ್ಣ ಡಿಜಿಟಲ್ ವ್ಯವಸ್ಥೆ ಮಾಡಿ ಸಮಸ್ಯೆ ಮುಕ್ತ ಮಾಡಲು ಸರ್ಕಾರ ಪಣತೊಟ್ಟಿರುವುದು ಅರ್ಹ ರೈತರಿಗೆ ವರದಾನವೇ ಸರಿ.

**ದುರಸ್ತಿ ಕಾರ್ಯ ಸರಳೀಕರಣಕ್ಕೆ ಮುನ್ನುಡಿ**

ಭೂ ಮಂಜೂರಾತಿ ಸಮಿತಿಯಿಂದ ಭೂಮಿ ಮಂಜೂರಾಗಿ ಐವತ್ತು ವರ್ಷಗಳಾಗಿದ್ದರೂ ಕೆಲ ಪ್ರಕರಣಗಳಲ್ಲಿ ಮಂಜೂರಿ ಜಮೀನು ದುರಸ್ತಿಯಾಗಿರುವುದಿಲ್ಲ. ಈ ಪ್ರಕ್ರಿಯೆಗೆ ನಮೂನೆ 1 ರಿಂದ 5 ಹಾಗೂ 6 ರಿಂದ 8 ಭರ್ತಿ ಮಾಡಬೇಕಾಗುತ್ತದೆ. ಅಲ್ಲದೆ ಅರ್ಜಿ ಪರಿಶೀಲನೆ ಕಾರ್ಯ ಸುದೀರ್ಘವಾದ ಪ್ರಕ್ರಿಯೆಯಾಗಿದ್ದು, ಸಿದ್ಧಪಡಿಸಿದ ಕಡತಗಳಲ್ಲಿ ಆದೇಶವಾಗುವುದು ಎರಡೋ, ಮೂರೋ ಮಾತ್ರ. ಈ ಸಮಸ್ಯೆಗೆ ಮುಕ್ತಿ ಹಾಡಲು ಮಂಜೂರಿ ಸಮಯದಲ್ಲಿಯೇ ದುರಸ್ತಿ ಕಾರ್ಯವನ್ನೂ ಮುಗಿಸಿ ಅದೇ ಸಮಯದಲ್ಲಿ ಪೋಡಿ ಮಾಡುವ ಉದ್ದೇಶವನ್ನು ಹೊಂದಿರುವ ಸರ್ಕಾರದ ನಿಲುವು ಮೆಚ್ಚುವಂತದ್ದು.

ನಮೂನೆ 50, 53 ಮತ್ತು 57 ರ ಅಡಿಯಲ್ಲಿ ಜಮೀನು ಮಂಜೂರಾತಿ ಕೋರಿ ಲಕ್ಷಾಂತರ ಅರ್ಜಿಗಳು ಸಲ್ಲಿಕೆಯಾಗಿರುವುದರಿಂದ ಸರ್ಕಾರಿ ಜಮೀನುಗಳಲ್ಲಿರುವ ಅನಧಿಕೃತ ಸಾಗುವಳಿಯನ್ನು ಸಕ್ರಮಗೊಳಿಸಲು (ಬಗರ್ ಹುಕುಂ) ಖಚಿತ ಮಾಹಿತಿಯನ್ನು ಸಂಗ್ರಹಿಸುವುದಕ್ಕಾಗಿ ರೂಪಿಸಿರುವ ಬಗರ್ ಹುಕುಂ ಆ್ಯಪ್‌ಗೆ ಕಂದಾಯ ಸಚಿವರಾದ ಕೃಷ್ಣ ಬೈರೇಗೌಡ ಅವರು ಡಿಸೆಂಬರ್ 18 ರಂದು ಚಾಲನೆ ನೀಡಿದ್ದಾರೆ. ಈ ಆ್ಯಪ್‌ನಿಂದಾಗಿ ಜಮೀನು ಮಂಜೂರಾತಿ ಕೋರಿ ಅರ್ಜಿ ಸಲ್ಲಿಸಿರುವ ಫಲಾನುಭವಿಗಳಿಗೆ ಶೀಘ್ರದಲ್ಲಿ ಉಪಗ್ರಹ ಚಿತ್ರ ಆಧಾರಿತ ಸ್ಥಳ ಪರಿಶೀಲನೆ ನಡೆಸಿ ಸರ್ವೆ ನಂಬರ್ ಹಾಗೂ ಡಿಜಿಟಲ್ ಸಾಗುವಳಿ ಚೀಟಿ ನೀಡಲು ಹೆಚ್ಚಿನ ಅನುಕೂಲವಾಗಲಿದೆ. ■



Downloaded From:www.kpscvaani.com




# ಫ್ರೂಟ್ಸ್ ನೋಂದಣಿಯಲ್ಲಿ ಗದಗ ಜಿಲ್ಲೆ ರಾಜ್ಯಕ್ಕೆ ಪ್ರಥಮ

ವಸಂತ ಬಿ ಮಡ್ಲೂರ

ರಾಜ್ಯ ಸರ್ಕಾರದ ಮಹಾತ್ವಾಕಾಂಕ್ಷಿ ಯೋಜನೆ, ರೈತರಿಗೆ ಹೆಚ್ಚಿನ ಅನುಕೂಲಕಾರಿ ಎಂದು ಹೇಳಲಾಗುತ್ತಿರುವ ಫ್ರೂಟ್ಸ್ ತಂತ್ರಾಂಶದಲ್ಲಿ ರೈತರ ಜಮೀನುಗಳ ನೋಂದಣಿ ಮಾಡುವ ಕಾರ್ಯ ಎಲ್ಲಾ ಜಿಲ್ಲೆಗಳಲ್ಲಿಯೂ ಭರದಿಂದ ಸಾಗುತ್ತಿದೆ. ಅಗತ್ಯ ದಾಖಲೆ ತಂತ್ರಾಂಶದಲ್ಲಿ ದಾಖಲೀಕರಣ ಮಾಡುವಲ್ಲಿ ಗದಗ ಜಿಲ್ಲೆ ಶೇ.80.47 ರಷ್ಟು ನೋಂದಣಿ ಕಾರ್ಯ ಪೂರ್ಣಗೊಳಿಸುವ ಮೂಲಕ ರಾಜ್ಯದಲ್ಲೇ ಪ್ರಥಮ ಸ್ಥಾನದಲ್ಲಿ ಮುಂದುವರೆದಿದೆ.

ಎಫ್.ಐ.ಡಿ. (ಫಾರ್ಮರ್ ಐಡೆಂಟಿಫಿಕೇಶನ್ ಡಾಕ್ಯುಮೆಂಟ್) ಅದನ್ನು ಪ್ರತಿಯೊಬ್ಬ ರೈತರು ಮಾಡಿಸುವಂತೆ ಸರ್ಕಾರ ಸೂಚನೆ ನೀಡಿತ್ತು. ರೈತರ ಎಲ್ಲಾ ಸರ್ವೆ ನಂಬರ್‌ಗಳು ಇದರಲ್ಲಿ ಕಡ್ಡಾಯವಾಗಿ ಜೋಡಣೆಯಾಗಬೇಕು. ಇದರಿಂದ ರೈತರಿಗೆ ಹೆಚ್ಚಿನ ಅನುಕೂಲವಾಗಲಿದೆ. ಸರ್ಕಾರದ ಸೌಲಭ್ಯ ರಿಯಾಯಿತಿ ದರದ ಬಿತ್ತನೆ ಬೀಜ, ಗೊಬ್ಬರ ಸೇರಿದಂತೆ ಸಹಾಯಧನ, ಬೆಳೆ ವಿಮೆ ಸೇರಿದಂತೆ ಎಲ್ಲದಕ್ಕೂ ಈ ಎಫ್.ಐ.ಡಿ. ಫ್ರೂಟ್ಸ್ ತಂತ್ರಾಂಶ ಅಗತ್ಯ. ಇನ್ನು ಜಂಟಿ ಖಾತೆಗಳಿದ್ದಲ್ಲಿ ಪ್ರತಿಯೊಬ್ಬರೂ ಪ್ರತ್ಯೇಕ ಎಫ್.ಐ.ಡಿ. ಪಡೆದುಕೊಂಡಲ್ಲಿ ಅವರಿಗೆ ಸರ್ಕಾರದಿಂದ ಸಿಗುವ ಸೌಲಭ್ಯಗಳು ನೇರವಾಗಿ ಅವರ ಖಾತೆಗೆ ತಲುಪುತ್ತದೆ.

ಗದಗ ಜಿಲ್ಲೆ ಈಗಾಗಲೇ ಹಲವಾರು ಹೊಸ ಮೈಲುಗಳನ್ನು ಸ್ಥಾಪಿಸಿ ರಾಷ್ಟ್ರವೇ ಗದಗಿನತ್ತ ತಿರುಗಿ ನೋಡುವಂತಹ ಹಲವಾರು ಕೆಲಸಗಳ ಮೂಲಕ ಗಮನ ಸೆಳೆದಿದೆ. ಅದರ ಸಾಲಿಗೆ ಮತ್ತೊಂದು ಹೊಸ ಸೇರ್ಪಡೆ ಫ್ರೂಟ್ಸ್ ನೋಂದಣಿಯಲ್ಲಿ ರಾಜ್ಯಕ್ಕೆ ಪ್ರಥಮ ಸ್ಥಾನದಲ್ಲಿರುವುದು. ಗದಗ ಜಿಲ್ಲಾಡಳಿತದಿಂದ ಒಟ್ಟು 3,35,533 ಹೊಲಗಳು ಇದಕ್ಕೆ ಅರ್ಹತೆಯನ್ನು ಹೊಂದಿವೆ ಎಂದು ಗುರುತಿಸಲಾಗಿದೆ. ಅವುಗಳಲ್ಲಿ 2,70,013 ಈಗಾಗಲೇ ನೋಂದಾವಣಿಯಾಗಿದ್ದು ಡಿಸೆಂಬರ್ 12 ರವರೆಗೆ ಶೇ 80.47 ರಷ್ಟು ಪ್ರಗತಿ ಸಾಧಿಸಿ ರಾಜ್ಯಕ್ಕೆ ಮೊದಲ ಸ್ಥಾನದಲ್ಲಿದೆ. ರಾಜ್ಯದಲ್ಲಿ ಫ್ರೂಟ್ಸ್ ತಂತ್ರಾಂಶದಲ್ಲಿ ಅಳವಡಿಕೆ ಮಾಡಲು ಎಲ್ಲ ಜಿಲ್ಲೆಗಳು ಸೇರಿದಂತೆ ಒಟ್ಟು 2,24,82,712 ಹೊಲಗಳು (ತಾಕುಗಳು) ಅರ್ಹತೆ ಹೊಂದಿದ್ದು, ಅವುಗಳಲ್ಲಿ ಈವರೆಗೆ 1,46,52,689 ಅಳವಡಿಕೆ ಮಾಡಲಾಗಿದೆ. ಇನ್ನೂ 78,30,023 ಫ್ರೂಟ್ಸ್ ತಂತ್ರಾಂಶದಲ್ಲಿ ನೋಂದಾವಣೆ ಮಾಡಬೇಕಿದೆ. ಒಟ್ಟಾರೆ ರಾಜ್ಯದಲ್ಲಿ ಶೇ 65.17 ರಷ್ಟು ಗುರಿ ಸಾಧನೆಯಾಗಿದೆ.

ರಾಜ್ಯದ ಜಿಲ್ಲಾವಾರು ನೋಂದಣಿ ವಿವರ ( ಡಿಸೆಂಬರ್ 12ರ ವರೆಗೆ ) ಹೀಗಿದ್ದು, ಗದಗ–ಶೇ.80.47,



Downloaded From:www.kpscvaani.com





ಗದಗ ಜಿಲ್ಲೆ ಕೃಷಿ ಪ್ರಧಾನ ಜಿಲ್ಲೆಯಾಗಿದೆ. ಫ್ರೂಟ್ಸ್ ತಂತ್ರಾಂಶದಲ್ಲಿ ನೋಂದಣಿ ಮಾಡುವ ಕಾರ್ಯವನ್ನು ಜಿಲ್ಲಾಡಳಿತ ಅತ್ಯಂತ ಕ್ರಿಯಾಶೀಲವಾಗಿ ಮಾಡಿ ಅತಿ ಹೆಚ್ಚು ನೋಂದಣಿ ಮಾಡಿದೆ. ರಾಜ್ಯದಲ್ಲಿಯೇ ಫ್ರೂಟ್ಸ್ ತಂತ್ರಾಂಶದಲ್ಲಿ ರೈತರಿಗೆ ಎಫ್.ಐ.ಡಿ ಮಾಡುವ ಕಾರ್ಯದಲ್ಲಿ ಗದಗ ಜಿಲ್ಲೆ ಪ್ರಥಮ ಸ್ಥಾನವನ್ನು ಕಾಯ್ದುಕೊಂಡು ಬಂದಿರುವುದು ಹೆಮ್ಮೆ ತಂದಿದೆ. ಈ ಕಾರ್ಯದಲ್ಲಿ ಶ್ರಮಿಸಿದ ಜಿಲ್ಲಾಡಳಿತ ಹಾಗೂ ಕೃಷಿ, ತೋಟಗಾರಿಕೆ ಇಲಾಖೆ ಅಧಿಕಾರಿಗಳ ಕಾರ್ಯ ಪ್ರಶಂಸಿಸುವಂತಹದ್ದಾಗಿದೆ. ಸರ್ಕಾರದ ಹಲವಾರು ಸೌಲಭ್ಯ ಹಾಗೂ ಸಹಾಯಧನ ಅಲ್ಲದೇ ಪರಿಹಾರ ಮೊತ್ತಗಳನ್ನು ಪಡೆಯಲು ಫ್ರೂಟ್ಸ್ ನೋಂದಣಿ ಕಾರ್ಯ ಅತ್ಯಂತ ಸಹಕಾರಿಯಾಗಿದೆ. ರಾಜ್ಯದ ಎಲ್ಲ ರೈತ ಬಾಂಧವರು ತಮ್ಮ ಜಮೀನುಗಳ ವಿವರಗಳನ್ನು ಫ್ರೂಟ್ಸ್ ತಂತ್ರಾಂಶದಲ್ಲಿ ನೋಂದಾಯಿಸಬೇಕು.

**–ಡಾ.ಎಚ್.ಕೆ.ಪಾಟೀಲ**
ಗದಗ ಜಿಲ್ಲಾ ಉಸ್ತುವಾರಿ ಸಚಿವರು

ಬಾಗಲಕೋಟೆ–79.89, ದಾವಣಗೆರೆ–75.85, ಗುಲ್ಬರ್ಗ–75.21, ಚಿತ್ರದುರ್ಗ–74.50, ಕೊಪ್ಪಳ–73.86, ಬಳ್ಳಾರಿ–72.86, ಬೀದರ–71.66, ಹಾಸನ–71.26, ಹಾವೇರಿ–71.10, ಚಿಕ್ಕಬಳ್ಳಾಪುರ–70.26, ವಿಜಯನಗರ–69.59, ಚಿಕ್ಕಮಂಗಳೂರು–69.06, ಬಿಜಾಪುರ–68.54, ಮಂಡ್ಯ–67.96, ಬೆಳಗಾವಿ–67.93, ಧಾರವಾಡ–66.80, ರಾಯಚೂರು–66.38, ಉತ್ತರಕನ್ನಡ–65.32, ಯಾದಗಿರಿ–65.07, ಶಿವಮೊಗ್ಗ–64.88, ಮೈಸೂರು–62.28, ಚಾಮರಾಜನಗರ–61.37, ಕೋಲಾರ–61.35, ತುಮಕೂರು–59.63, ರಾಮನಗರ– 59.07, ಬೆಂಗಳೂರು–ಗ್ರಾಮಾಂತರ–58.68, ಕೊಡಗು– 57.60, ಉಡುಪಿ–48.45, ದಕ್ಷಿಣ ಕನ್ನಡ–44.36, ಬೆಂಗಳೂರು ನಗರ–32.24.

ಫ್ರೂಟ್ಸ್ : ರೈತರಿಗೆ ಕೃಷಿ ಸಾಲ ವಿತರಣೆ ಹಾಗೂ ಇನ್ನಿತರ ಸರ್ಕಾರಿ ಸೌಲಭ್ಯಗಳನ್ನು ಪಡೆಯಲು ರೂಪಿಸಲಾದ ಏಕೀಕೃತ ತಂತ್ರಾಂಶ ವ್ಯವಸ್ಥೆಯೇ ಫ್ರೂಟ್ಸ್ (ರೈತ ನೋಂದಣಿ ಮತ್ತು ಏಕೀಕೃತ ಫಲಾನುಭವಿ ಮಾಹಿತಿ ವ್ಯವಸ್ಥೆ) ಇದರಿಂದಾಗಿ ಒಂದೇ ಪೋರ್ಟಲ್ ವೇದಿಕೆಯಲ್ಲಿ ರೈತರ ಭೂಮಿಗೆ ಸಂಬಂಧಿಸಿದ ಸಂಪೂರ್ಣ ಮಾಹಿತಿಗಳು ಹಣಕಾಸು ಸಂಸ್ಥೆಗಳು, ಸಂಬಂಧಿಸಿದ ಇಲಾಖೆಗಳಿಗೆ ಕ್ಷಣಾರ್ಧದಲ್ಲಿ ಮಾಹಿತಿಯು ದೊರೆಯಲಿದೆ. ಇದರಿಂದಾಗಿ ರೈತರಿಗೆ ಸಾಲ, ಕೃಷಿ ಸಬ್ಸಿಡಿ ಹಾಗೂ ಸರ್ಕಾರದ ಇನ್ನಿತರ ಸೌಲಭ್ಯ ಒದಗಿಸಲು ಅನುಕೂಲವಾಗಲಿದೆ.

ಫ್ರೂಟ್ಸ್ ತಂತ್ರಾಂಶದ ಬಗ್ಗೆ ಹಲವಾರು ಬಾರಿ ತೋಟಗಾರಿಕೆ, ಕೃಷಿ ಹಾಗೂ ಕಂದಾಯ ಇಲಾಖೆ ಅಧಿಕಾರಿಗಳೊಂದಿಗೆ ಸಭೆ ಏರ್ಪಡಿಸಿ ಅಧಿಕಾರಿ ವರ್ಗಕ್ಕೆ ಫ್ರೂಟ್ಸ್ ನೋಂದಣಿ ಕಾರ್ಯವನ್ನು ಆದ್ಯತೆ ಮೇರೆಗೆ ನಿರ್ವಹಿಸುವಂತೆ ಸೂಚಿಸಲಾಗಿತ್ತು. ಅಲ್ಲದೇ ರೈತರಿಗೆ ಹಾಗೂ ರೈತ ಸಂಘಟನೆಗಳ ಪದಾಧಿಕಾರಿಗಳಿಗೆ ಫ್ರೂಟ್ಸ್ ನೋಂದಣಿ ಕಾರ್ಯದಿಂದಾಗುವ ಪ್ರಯೋಜನಗಳ ಕುರಿತು ಅರಿವು ಮೂಡಿಸಲಾಗಿ ಈ ಸಾಧನೆಯನ್ನು ಸಾಧಿಸಲು ಸಾಧ್ಯವಾಗಿದೆ.

**–ವೈಶಾಲಿ ಎಂ.ಎಲ್**
ಜಿಲ್ಲಾಧಿಕಾರಿಗಳು, ಗದಗ ಜಿಲ್ಲೆ.

ಫ್ರೂಟ್ಸ್ ತಂತ್ರಾಂಶದಲ್ಲಿ ಇದುವರೆವಿಗೆ ನೋಂದಾಯಿಸಿಕೊಳ್ಳದ ರೈತರು ಹತ್ತಿರದ ರೈತ ಸಂಪರ್ಕ ಕೇಂದ್ರಕ್ಕೆ ಅಥವಾ ತಾಲೂಕು ತೋಟಗಾರಿಕೆ ಇಲಾಖೆ ಕಚೇರಿಗೆ ಭೇಟಿ ನೀಡಿ ಅವಶ್ಯಕ ದಾಖಲೆಗಳನ್ನು ಒದಗಿಸಿ ನೋಂದಣಿ ಮಾಡಿಕೊಳ್ಳಬಹುದು. ಅಥವಾ ಫ್ರೂಟ್ಸ್ ವೆಬ್‌ಸೈಟ್‌ನಲ್ಲಿ "ನಾಗರಿಕ ಪ್ರವೇಶ" (ಸಿಟಿಜನ್ ಲಾಗಿನ್) ಭೇಟಿ ನೀಡುವ ಮೂಲಕ ನಾಗರಿಕರು ತಾವಾಗಿಯೇ ಸ್ವಯಂ ನೋಂದಾಯಿಸಿ ಕೊಳ್ಳಬಹುದು.

ಫ್ರೂಟ್ಸ್ ತಂತ್ರಾಂಶದಲ್ಲಿ ನೋಂದಾಯಿಸಿಕೊಳ್ಳಲು ಆಧಾರ್ ಕಾರ್ಡ್, ಭೂ ಒಡೆತನದ ರೈತನಾಗಿ ನೋಂದಾಯಿಸಲು ಭೂ ವಿವರಗಳು (ಆರ್‌ಟಿಸಿ) ಅಗತ್ಯವಿದೆ. ಒಂದು ವೇಳೆ ಯಾರಾದರೂ ಯಾವುದೇ ನಿರ್ದಿಷ್ಟ ಅಡಿಯಲ್ಲಿ ನೋಂದಾಯಿಸಲು ಬಯಸಿದರೆ (ಎಸ್.ಸಿ /ಎಸ್.ಟಿ ಇತ್ಯಾದಿ) ಸಂಬಂಧಿತ ಪ್ರಮಾಣ ಪತ್ರಗಳು ಅಗತ್ಯವಾಗಿರುತ್ತವೆ.





Downloaded From:www.kpscvaani.com



# ಮತ್ತೆ ತಲೆ ಎತ್ತಿದ ಕೋವಿಡ್ ಉಪತಳಿ

# ನಿರ್ಲಕ್ಷ್ಯ ಬೇಡ: ಎಚ್ಚರಿಕೆ ಇರಲಿ

ಮಯೂರ್ ಮಂಜುನಾಥ್

**ಕೋ**ವಿಡ್ ಅಂದ ಕೂಡಲೇ ಯಾರಿಗೇ ಆಗಲಿ ಹಳೆಯ ಕಹಿ ನೆನಪುಗಳು ಮರುಕಳಿಸುವುದು ನಿಶ್ಚಿತ. ಸುಮಾರು ಎರಡು ವರ್ಷಗಳ ಕಾಲ ಜಗತ್ತನ್ನೇ ತಲ್ಲಣಗೊಳಿಸಿದ ಕೋವಿಡ್ ಮತ್ತೆ ತಲೆ ಎತ್ತಿದೆಯೇ? ಈಗ ಅಂತಹುದೊಂದು ಆತಂಕ ಮತ್ತೆ ಶುರುವಾಗಿದೆ. ಈ ಬಾರಿ ಅದು ಮೊದಲು ಕಾಣಿಸಿಕೊಂಡಿದ್ದು ಲುಕ್ಸಂಬರ್ಗ್‌ನಲ್ಲಿ. ವುಹಾನ್ ಕೋವಿಡ್‌ನ ಉಪತಳಿ ಎಂದು ಭಾವಿಸಲಾಗಿರುವ ಜೆಎನ್.1 ಕ್ರಮೇಣ ಇತರ ರಾಷ್ಟ್ರಗಳಿಗೂ ಹಬ್ಬಿದೆ. ಆದರೆ ಸಿಂಗಾಪುರ, ಇಂಗ್ಲೆಂಡ್ ಮತ್ತು ಜರ್ಮನಿಯಲ್ಲಿ ಮಾತ್ರ ವ್ಯಾಪಕ ಪ್ರಮಾಣದಲ್ಲಿ ಕಾಣಿಸಿಕೊಂಡಿದೆ. ಒಂದು ಅಂದಾಜಿನ ಪ್ರಕಾರ ಸಿಂಗಾಪುರದಲ್ಲಿ ಸುಮಾರು 56 ಸಾವಿರ ಪ್ರಕರಣಗಳು ಡಿಸೆಂಬರ್ ಎರಡನೇ ವಾರದ ಕೊನೆಯ ಹೊತ್ತಿಗೆ ವರದಿಯಾಗಿವೆ. ಕೊರೊನಾ ಹುಟ್ಟಿಕೊಂಡ ಮೂಲ ನೆಲೆಯಾದ ಚೀನಾ ಕೂಡ ಈ ಪ್ರಕರಣಗಳಿಂದ ಹೊರತಾಗಿಲ್ಲ. ಆದರೆ ಸೋಂಕು ಹರಡುವಿಕೆಯ ಪ್ರಮಾಣ ಕಡಿಮೆ.

ಕೋವಿಡ್ ವೈರಸ್ ಕಾಲದಿಂದ ಕಾಲಕ್ಕೆ ರೂಪಾಂತರಗೊಳ್ಳುತ್ತಿದೆ. ಅದರ ಪ್ರಭಾವ ಕೂಡ ರಾಷ್ಟ್ರದಿಂದ ರಾಷ್ಟ್ರಕ್ಕೆ ಭಿನ್ನವಾಗಿದೆ. ಹಾಗಾಗಿ ಸೀಕ್ವೆನ್ಸಿಂಗ್ ಮತ್ತು ಸರ್ವೇಕ್ಷಣೆ ಹೆಚ್ಚು ಮಾಡಿ ಅದರ ಮಾಹಿತಿಗಳನ್ನು ಹಂಚಿಕೊಳ್ಳುವಂತೆ ವಿಶ್ವ ಆರೋಗ್ಯ ಸಂಸ್ಥೆ ತನ್ನ ಎಲ್ಲ ಸದಸ್ಯ ರಾಷ್ಟ್ರಗಳಿಗೆ ಸೂಚನೆಯನ್ನು ನೀಡಿದೆ. ಭಾರತವೂ ಸೇರಿದಂತೆ ಜಗತ್ತಿನ ಅನೇಕ ಕಡೆ ಚಳಿಯಿಂದ ಕೂಡಿದ ವಾತಾವರಣವಿದೆ. ಈ ಹವಾಮಾನ ವೈರಸ್ ಹರಡಲು ಅನುಕೂಲವಾಗಿದೆ. ಹಾಗಾಗಿ ಪ್ರಕರಣಗಳ ಸಂಖ್ಯೆ ಹೆಚ್ಚಲು ಕಾರಣವಾಗಿದೆ.

ಜೊತೆಗೆ ಹಬ್ಬದ ದಿನಗಳು ಹಾಗೂ ರಜಾ ದಿನಗಳು ಸಮೀಪಿಸುತ್ತಿರುವ ಕಾರಣ ಜನ ಸಾರ್ವಜನಿಕವಾಗಿ ಹೆಚ್ಚು ಹೆಚ್ಚು ಬೆರೆಯುತ್ತಿದ್ದಾರೆ. ಗುಂಪು ಸೇರುವ ಸಾಧ್ಯತೆಗಳು ಅಧಿಕವಾಗಿವೆ. ಇದರಿಂದ ಪ್ರಕರಣಗಳು ಅಧಿಕಗೊಳ್ಳಬಹುದು. ವೈರಸ್ ಹರಡುವ ವೇಗ ಕೂಡ ದುಪ್ಪಟ್ಟಾಗಿರುವುದರಿಂದ ಹೆಚ್ಚಿನ ಎಚ್ಚರಿಕೆ ಅತ್ಯಗತ್ಯ. ಈಗ ವರದಿಯಾಗುತ್ತಿರುವ ಉಸಿರಾಟದ ಸಮಸ್ಯೆಗಳಿಗೆ ಕೇವಲ ಕೊರೊನಾ ವೈರಸ್ ಮಾತ್ರ ಕಾರಣವಲ್ಲ ಅದಕ್ಕೆ ಫ್ಲೂ, ರೈನೋ ವೈರಸ್, ಮೈಕೋಪ್ಲಾಸ್ಮಾದಂತಹ ಇತರ ವೈರಸ್ ಮತ್ತು ಬ್ಯಾಕ್ಟೀರಿಯಾಗಳು ಕೂಡ ಕಾರಣ ಎಂದು ವಿಶ್ವ ಆರೋಗ್ಯ ಸಂಸ್ಥೆ ಹೇಳಿದೆ.

ಈ ಎಲ್ಲ ಹಿನ್ನೆಲೆಯಲ್ಲಿ ಭಾರತ ಕೂಡ ಖಡಕ್ ಎಚ್ಚರಿಕೆಯ ಸಂದೇಶವನ್ನು ರವಾನೆ ಮಾಡಿದೆ. ದೇಶದ ಕೆಲವು ಕಡೆ ಜೆಎನ್.1 ಪ್ರಕರಣಗಳು ಗಣನೀಯ ಪ್ರಮಾಣದಲ್ಲಿ ಏರಿಕೆಯಾಗುತ್ತಿವೆ. ಅದರಲ್ಲೂ ನಮ್ಮ ಪಕ್ಕದ ರಾಜ್ಯ ಕೇರಳದಲ್ಲಿ ಹೆಚ್ಚಿನ ಪ್ರಕರಣಗಳು ಕಾಣಿಸಿಕೊಂಡಿದ್ದು ಮಾತ್ರವಲ್ಲದೆ ಮೊದಲ ಸಾವಿನ ವರದಿ ಅಲ್ಲಿಂದಲೇ ಬಂದಿರುವುದು ನೆರೆಯ ರಾಜ್ಯವಾದ ಕರ್ನಾಟಕಕ್ಕೆ ತಲೆನೋವಾಗಿ ಪರಿಣಮಿಸಿದೆ. ಕೇರಳಕ್ಕೆ ತಾಕಿಕೊಂಡಿರುವ ಜಿಲ್ಲೆಗಳಾದ ಮಂಗಳೂರು, ಉಡುಪಿ, ಮಡಿಕೇರಿಯಲ್ಲಿ ಕಟ್ಟೆಚ್ಚರ ವಹಿಸಲಾಗಿದೆ.



Downloaded From:www.kpscvaani.com

**ಜೆಎನ್.1 ಲಕ್ಷಣಗಳು**

**ತಲೆನೋವು, ಕೀಲುನೋವು, ಕುತ್ತಿಗೆ ನೋವು, ಬೆನ್ನಿನ ಹಿಂಭಾಗದಲ್ಲಿ ನೋವು, ನ್ಯೂಮೊನಿಯಾ, ಹಸಿವು ಇಲ್ಲದೇ ಇರುವುದು ಜೆಎನ್.1 ನ ರೋಗ ಲಕ್ಷಣಗಳು.**

ಸರ್ಕಾರಿ, ಖಾಸಗಿ ಮತ್ತು ವೈದ್ಯಕೀಯ ಕಾಲೇಜು ಆಸ್ಪತ್ರೆಗಳಲ್ಲಿ ಎಲ್ಲಾ ಸಾರಿ (SARI) ಪ್ರಕರಣಗಳು ಹಾಗೂ 20 ಐಎಲ್ಐ (20-ILI) ಪ್ರಕರಣಗಳ ಪೈಕಿ 1 ಐಎಲ್ಐ (1 ILI) ಪ್ರಕರಣಗಳನ್ನು ಕೋವಿಡ್–19 ಪರೀಕ್ಷೆಗೆ ಒಳಪಡಿಸಲು ಸೂಚಿಸಲಾಗಿದೆ.

ಮುಂದಿನ ದಿನಗಳಲ್ಲಿ ಕೋವಿಡ್–19 ಪ್ರಕರಣಗಳು ಹೆಚ್ಚಾದರೆ ಪ್ರತಿದಿನ ನಡೆಸುವ ರ್‍ಯಾಪಿಡ್ ಆ್ಯಂಟಿಂಜೆನ್ ಪರೀಕ್ಷೆಗಳ ಸಂಖ್ಯೆಯನ್ನು ಹೆಚ್ಚಿಸುವುದು ಹಾಗೂ ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳನ್ನು ಸಂಪೂರ್ಣ ಸಿದ್ಧ ಸ್ಥಿತಿಯಲ್ಲಿ ಇರಿಸಲಾಗುತ್ತದೆ ಎಂದು ಆರೋಗ್ಯ ಸಚಿವರಾದ ದಿನೇಶ್ ಗುಂಡುರಾವ್ ತಿಳಿಸಿದ್ದಾರೆ. ಆದರೆ ಕೇರಳಕ್ಕೆ ಹೊಂದಿಕೊಂಡಿರುವ ಜಿಲ್ಲೆಗಳಲ್ಲಿ ಸಾರ್ವಜನಿಕ ಸ್ಥಳಗಳಲ್ಲಿ 60 ವರ್ಷ ಮೇಲ್ಪಟ್ಟವರು, ಕಿಡ್ನಿ, ಹೃದಯ, ಲಿವರ್ ಸಮಸ್ಯೆಗಳಿಂದ ಬಳಲುತ್ತಿರುವವರು, ಗರ್ಭಿಣಿಯರು ಮತ್ತು ಬಾಣಂತಿಯರಿಗೆ ಮಾಸ್ಕ್ ಧರಿಸುವುದು ಹಾಗೂ ಮುಚ್ಚಿದ, ಹೆಚ್ಚು ಗಾಳಿಯಾಡದ ಜನಸಂದಣಿ ಇರುವ ಸ್ಥಳಗಳಿಗೆ ಭೇಟಿ ನೀಡದಂತೆ ತಾಂತ್ರಿಕ ಸಲಹಾ ಸಮಿತಿಯು ಶಿಫಾರಸ್ಸು ಮಾಡಿದೆ.



**ಜೆಎನ್.1 ಎಂಬ ಕೋವಿಡ್‌ನ ಹೊಸ ತಳಿ ವೇಗವಾಗಿ ಹರಡುತ್ತಿರುವುದು ನಿಜವಾದರೂ ಅದು ಅಪಾಯಕಾರಿಯಲ್ಲ. ಹಾಗಾಗಿ ಜನರು ಗಾಬರಿಯಾಗಬೇಕಾದ ಅಗತ್ಯವಿಲ್ಲ. ಮುಂದಿನ ದಿನಗಳಲ್ಲಿ ಆರ್‌ಟಿಪಿಸಿಆರ್ ಪರೀಕ್ಷೆಗಳನ್ನು ಹೆಚ್ಚಿಸುತ್ತ ಹೋಗಲಾಗುವುದು ಮತ್ತು ಸರ್ಕಾರಿ ಹಾಗೂ ಖಾಸಗಿ ಆಸ್ಪತ್ರೆಗಳನ್ನು ಸನ್ನದ್ಧ ಸ್ಥಿತಿಯಲ್ಲಿ ಇರಿಸಲಾಗುವುದು.**

**–ದಿನೇಶ್ ಗುಂಡುರಾವ್, ಆರೋಗ್ಯ ಸಚಿವರು**




ಇಷ್ಟೆಲ್ಲದರ ನಡುವೆ ಗಮನಿಸಲೇಬೇಕಾದ ಅಂಶಗಳೆಂದರೆ 2022ರ ಕೊನೆಯ ಭಾಗದಲ್ಲಿ ಕಾಣಿಸಿಕೊಂಡ ಒಮಿಕ್ರಾನ್ ವೈರಸ್‌ನ ಉಪತಳಿಯಾಗಿರುವ ಜೆಎನ್.1 ವೈರಸ್ ಬಗ್ಗೆ ಕಳವಳಗೊಳ್ಳಬೇಕಾದ ಅಗತ್ಯವೇನೂ ಇಲ್ಲ. ಭಾರತವನ್ನು ಹೊರತುಪಡಿಸಿದ ರಾಷ್ಟ್ರಗಳಲ್ಲಿ ಜೆಎನ್.1 ತೀರಾ ಅಪಾಯಕಾರಿಯಾಗೇನೂ ಕಂಡು ಬಂದಿಲ್ಲ. ಸಾವಿನ ಸಂಖ್ಯೆಯಂತೂ ತೀರಾ ಕಡಿಮೆ. ಕೋವಿಡ್ ವೈರಸ್‌ನಷ್ಟು ಪ್ರಭಾವವಂತೂ ಇದಕ್ಕೆ ಇಲ್ಲ. ವಿಶ್ವ ಆರೋಗ್ಯ ಸಂಸ್ಥೆಯೇ 2023ರ ಮೇ ತಿಂಗಳಿನಲ್ಲಿಯೇ ಕೋವಿಡ್ ಪ್ಯಾಂಡಮಿಕ್ ಅಂತ್ಯಗೊಂಡಿದೆ ಎಂದು ಘೋಷಿಸಿದ್ದು ನಿಮಗೆಲ್ಲ ನೆನಪಿರಬಹುದು. ಹಾಗಾಗಿ ಗಾಬರಿಗೊಳ್ಳಬೇಕಾದ ಅಗತ್ಯವಂತೂ ಇಲ್ಲವೇ ಇಲ್ಲ.

ವಿಶ್ವ ಆರೋಗ್ಯ ಸಂಸ್ಥೆ ಹೊರಡಿಸಿದ ಪ್ರಕಟಣೆಯ ಪ್ರಕಾರ ಈ ವೈರಸ್‌ನ್ನು Variant of Interest ಎಂದು ಘೋಷಿಸಿದೆಯೇ ಹೊರತು Variant of concern ಎಂದು ಘೋಷಣೆ ಮಾಡಿಲ್ಲ. ಇದರ ಅರ್ಥ ಕೂಡ ಸ್ಪಷ್ಟ–ವೈರಸ್ ಬಗ್ಗೆ ಆಸಕ್ತಿಯಿಂದ ಪರಿಶೀಲನೆ ನಡೆಸಬೇಕಾಗಿದೆಯೇ ವಿನಃ ಕಳವಳಗೊಳ್ಳಬೇಕಾಗಿಲ್ಲ. ಆದ್ದರಿಂದ ಡಬ್ಲ್ಯುಎಚ್‌ಓ ಇದರ ಪರಿಣಾಮಗಳು, ಹರಡುವ ವ್ಯಾಪಕತೆ, ಸಾವಿನ ಪ್ರಮಾಣದ ಬಗೆಗೆ ಎಚ್ಚರಿಕೆಯಿಂದ ಗಮನ ಹರಿಸುತ್ತಿದೆ.

ಈ ಹಿನ್ನೆಲೆಯಲ್ಲಿ ಭಾರತದಲ್ಲಿ, ಅದರಲ್ಲಿಯೂ ಮುಖ್ಯವಾಗಿ ಕೇರಳದಲ್ಲಿ ಕಂಡುಬಂದಿರುವ ವೈರಸ್ ಜೆಎನ್.1 ಎಂಬುದು ದೃಢವಾಗಿಲ್ಲ ಎಂದುತಜ್ಞರು ತಿಳಿಸುತ್ತಾರೆ. ಕರಾರುವಕ್ಕಾಗಿ ಜೆಎನ್.1 ಎಂದು ಸಾಬೀತಾಗಿರುವ ಪ್ರಕರಣಗಳು ಬೆರಳೆಣಿಕೆಯಷ್ಟು ಮಾತ್ರ. ಇದು ಎಲ್ಲ ಕಾಲದಲ್ಲಿಯೂ ಕಾಣಿಸಿಕೊಳ್ಳುವ ಒಂದು ಸೋಂಕು. ಇನ್ನಿತರೇ ರೋಗಗಳ ಲಕ್ಷಣಗಳನ್ನು ಹೊಂದಿರುವವರಲ್ಲಿ ಹಾಗೂ





Downloaded From:www.kpscvaani.com






## ಹಿಂದಿನ ಸರ್ಕಾರದಲ್ಲಾದ ತಪ್ಪುಗಳು ಮರುಕಳಿಸಬಾರದು

ರಾಜ್ಯದಲ್ಲಿ ಕೋವಿಡ್-19 ಪ್ರಕರಣಗಳ ಸಂಖ್ಯೆ ಮತ್ತೆ ಏರಿಕೆಯಾಗುತ್ತಿದ್ದು, ಅದರಲ್ಲೂ ಜೆಎನ್.1 ಎಂಬ ಹೊಸ ತಳಿಯ ವೈರಸ್ ಪತ್ತೆಯಾಗಿರುವ ಹಿನ್ನೆಲೆಯಲ್ಲಿ ರಾಜ್ಯದ ಸ್ಥಿತಿಗತಿಯ ಕುರಿತು ಚರ್ಚಿಸಲು ಹಾಗೂ ಕೈಗೊಳ್ಳಬೇಕಾದ ಮುಂಜಾಗ್ರತಾ ಕ್ರಮಗಳ ಕುರಿತು ಅವರು ಡಿಸೆಂಬರ್ 21 ರಂದು ಉನ್ನತ ಮಟ್ಟದ ಸಭೆಯನ್ನು ನಡೆಸಿದರು.

ಸಭೆಯಲ್ಲಿ ಹಿಂದಿನ ಸರ್ಕಾರದಲ್ಲಾದ ಕೋವಿಡ್ ತಪ್ಪು ಮತ್ತೆ ಮರುಕಳಿಸಬಾರದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸ್ಪಷ್ಟ ಸೂಚನೆ ನೀಡಿದ್ದಾರೆ. ಅಗತ್ಯ ಪ್ರಮಾಣದ ಆಕ್ಸಿಜನ್, ವೆಂಟಿಲೇಟರ್, ಬೆಡ್ ಹಾಗೂ ಔಷಧ ಯಾವುದಕಕ್ಕೂ ತೊಂದರೆ ಆಗಬಾರದು. ಕಳೆದ ಬಾರಿ ತೊಂದರೆ ಆಗಿ ಹಲವಾರು ಜನ ಮೃತಪಟ್ಟರು. ಆಕ್ಸಿಜನ್ ಲಭ್ಯತೆಯನ್ನು ಖಾತರಿ ಪಡಿಸುವಂತೆ ಅವರು ಆರೋಗ್ಯ ಇಲಾಖೆ ಹಾಗೂ ವೈದ್ಯಕೀಯ ಶಿಕ್ಷಣ ಇಲಾಖೆಯ ಅಧಿಕಾರಿಗಳಿಗೆ ಅವರು ಸೂಚಿಸಿದ್ದಾರೆ.

ಕೊರೊನಾ ಸೋಂಕು ಪ್ರಕರಣಗಳ ನಿಯಂತ್ರಣ ಹಾಗೂ ಸೋಂಕಿತರಿಗೆ ಸಮರ್ಪಕ ಚಿಕಿತ್ಸೆ ಒದಗಿಸುವ ನಿಟ್ಟಿನಲ್ಲಿ ಅಗತ್ಯ ಕ್ರಮಕೈಗೊಳ್ಳಲು ಸಲಹಾ ಸಮಿತಿ ಜತೆ ಸಂಪರ್ಕದಲ್ಲಿದ್ದು, ನಿರಂತರವಾಗಿ ನಿಗಾ ವಹಿಸಲು ಸಚಿವ ಸಂಪುಟ ಉಪ ಸಮಿತಿ ರಚನೆ ಮಾಡಲು ಸಭೆಯಲ್ಲಿ ತೀರ್ಮಾನಿಸಲಾಯಿತು.

ಸರ್ಕಾರವು ಎಲ್ಲ ಅಗತ್ಯ ಮುನ್ನೆಚ್ಚರಿಕೆಯ ಕ್ರಮಗಳನ್ನು ಕೈಗೊಂಡಿದ್ದು, ರಾಜ್ಯದಾದ್ಯಂತ ದಿನಕ್ಕೆ 5000 ಟೆಸ್ಟ್‌ಗಳು ನಡೆಯುತ್ತಿದ್ದು, ಬೆಂಗಳೂರಿನಲ್ಲಿ ಸಾವಿರ ಪರೀಕ್ಷೆ ನಡೆಸಲಾಗುತ್ತಿದೆ. ಹಾಗಾಗಿ ಜನರು ಆತಂಕ ಪಡುವ ಅಗತ್ಯವಿಲ್ಲ. ಆದರೆ ಮುನ್ನೆಚ್ಚರಿಕೆ ಕ್ರಮಗಳನ್ನು ಅಗತ್ಯವಾಗಿ ಕೈಗೊಳ್ಳಬೇಕಾಗಿದೆ. ಕೋವಿಡ್-19 ಈಗ Pandemic ಆಗಿ ಉಳಿದಿಲ್ಲ. Endemic ಆಗಿದೆ ಎಂದು ಅವರು ಸಭೆಯ ನಂತರ ನಾಡಿನ ಜನತೆಗೆ ತಿಳಿಸಿದ್ದಾರೆ.

ಎಪ್ಪತ್ತು-ಎಂಭತ್ತು ವರ್ಷ ವಯಸ್ಸನ್ನು ಮೀರಿದವರಲ್ಲಿ ಇದರ ಪರಿಣಾಮಗಳು ಗಂಭೀರವಾಗಿರುವ ಸಾಧ್ಯತೆಗಳಿರುತ್ತವೆ. ಈ ಎಲ್ಲ ಕಾರಣಗಳಿಂದ ಸಾರ್ವಜನಿಕರು ಭಯಗೊಳ್ಳುವ ಅಗತ್ಯವಿಲ್ಲ ಮತ್ತು ಇದು ಕೋವಿಡ್ ಅಲೆಯ ರೂಪದಲ್ಲಿ ಹರಡುವ ಸಾಧ್ಯತೆಯೂ ಇಲ್ಲ ಎಂದು ರಾಜ್ಯದಲ್ಲಿ ಹೊಸದಾಗಿ ರಚಿಸಲಾಗಿರುವ ತಾಂತ್ರಿಕ ಸಲಹಾ ಸಮಿತಿ (ಟಿಎಸಿ)ಯ ಮುಖ್ಯಸ್ಥರು ಹಾಗೂ ಬೆಂಗಳೂರು ಮೆಡಿಕಲ್ ಕಾಲೇಜಿನ ಡಾ.ಕೆ.ರವಿ ಅವರು ಸ್ಪಷ್ಟ ಮಾತುಗಳಲ್ಲಿ ತಿಳಿಸಿದ್ದಾರೆ.

ಕೋವಿಡ್ ಒಮಿಕ್ರಾನ್ ಎಕ್ಸ್‌ಬಿಬಿ (Covid Omicron XBB) ಉಪತಳಿಯನ್ನು ಪತ್ತೆ ಹಚ್ಚುವುದು ಸುಲಭವಲ್ಲ. ಕೋವಿಡ್ ಮೊದಲ ಅಲೆಯಲ್ಲಿನ ಗುಣಲಕ್ಷಣಗಳ ರೀತಿಯಲ್ಲಿ ಕೆಮ್ಮು, ಕಫ ಮತ್ತು ಜ್ವರದ ಭಾದೆ ಇರುವುದಿಲ್ಲ. ಬದಲಾಗಿ, ತಲೆನೋವು, ಕೀಲುನೋವು, ಕುತ್ತಿಗೆ ನೋವು, ಬೆನ್ನಿನ ಹಿಂಭಾಗದಲ್ಲಿ ನೋವು, ನ್ಯೂಮೊನಿಯಾ, ಹಸಿವು ಇಲ್ಲದೇ ಇರುವುದು ಮುಂತಾದ ಲಕ್ಷಣಗಳನ್ನು ತಜ್ಞರು ಗುರುತಿಸಿದ್ದಾರೆ. ಜ್ವರ, ಮೈಕೈನೋವಿನಂತಹ ಯಾವ ಲಕ್ಷಣವೂ ಇಲ್ಲದೆ ಶ್ವಾಸಕೋಶದಲ್ಲಿ ಲಘು ನ್ಯೂಮೊನಿಯಾ ರೂಪದಲ್ಲಿ ತನ್ನ ಅವತಾರವನ್ನು ತೋರಿಸಿರುವ ಉದಾಹರಣೆಗಳು ಇವೆ.

ಜೆಎನ್.1 ನಲ್ಲಿ ಇರುವ ಒಂದು ಅತ್ಯಂತ ಅಪಾಯಕಾರಿ ಅಂಶವೆಂದರೆ ಅದು ನಿಮ್ಮ ದೇಹದಲ್ಲಿರುವ ರೋಗ ನಿರೋಧಕ ಶಕ್ತಿಯನ್ನು ಬಹುಬೇಗ ಪುಡಿಗಟ್ಟುವ ಸಾಮರ್ಥ್ಯವನ್ನು ಹೊಂದಿದೆ. ಮಧುಮೇಹ, ಕ್ಯಾನ್ಸರ್ ಮತ್ತಿತರ ರೋಗಗಳಿಂದ ಬಳಲುತ್ತಿರುವವರು, ಗರ್ಭಿಣಿಯರು, ಬಾಣಂತಿಯರು ಹಾಗೂ ವೃದ್ಧರಲ್ಲಿ ರೋಗನಿರೋಧಕ ಶಕ್ತಿ ಕಡಿಮೆ ಇರುತ್ತದೆ. ಅಂಥವರು ಹೆಚ್ಚಿನ ಎಚ್ಚರಿಕೆಯನ್ನು ವಹಿಸುವುದು ಅಗತ್ಯ. ಸಾರ್ವಜನಿಕ ಸ್ಥಳಗಳಲ್ಲಿ ಮಾಸ್ಕ್ ಧರಿಸಿ ಓಡಾಡುವುದು ಸೂಕ್ತ. ಹಾಗಾದರೆ ಈ ಹಿಂದೆ ಕೋವಿಡ್‌ಗಾಗಿ ಪಡೆದ ಲಸಿಕೆಗಳು ಈಗಲೂ ದೇಹದಲ್ಲಿ ಪ್ರತಿರೋಧಕ ಶಕ್ತಿ ನೀಡುತ್ತಿವೆಯೇ? ಖಂಡಿತ ಇಲ್ಲ. ಅದರ ಸಾಮರ್ಥ್ಯ ಈಗಾಗಲೇ ಕುಂದಿ ತಿಂಗಳುಗಳೇ ಕಳೆದಿವೆ. ಆದರೂ ರೋಗದ ಲಕ್ಷಣ ಕಂಡು ಬಂದವರಲ್ಲಿ ಬಹುತೇಕರು ಆಸ್ಪತ್ರೆಗೆ ದಾಖಲಾಗದೇ ಚಿಕಿತ್ಸೆ ಪಡೆದು ಗುಣಮುಖರಾಗಿದ್ದಾರೆ ಎನ್ನುವುದು ನೆಮ್ಮದಿಯ ಸಂಗತಿ.

ಮುಂದಿನ ದಿನಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಪ್ರಕರಣಗಳು ವರದಿಯಾಗಬಹುದು. ಅದು ಯಾವುದೇ ವೈರಸ್‌ನ ಗುಣ ಕೂಡ. ಹಾಗಂತ ಗಾಬರಿಯಾಗಬೇಕಾದ ಅಗತ್ಯವಿಲ್ಲ. ಭಯ ಬೇಕಾಗಿಲ್ಲ ಎಂದ ಮಾತ್ರಕ್ಕೆ ಮೈಮರೆವೂ ಅಗತ್ಯವಿಲ್ಲ ಎಂಬುದನ್ನು ನೆನಪಿಟ್ಟುಕೊಳ್ಳಿ. ಹಾಗಾಗಿ ಆರೋಗ್ಯ ಇಲಾಖೆಯು ಮುನ್ನೆಚ್ಚರಿಕೆ ಕ್ರಮವಾಗಿ ಹೊರಡಿಸುವ ಮಾರ್ಗಸೂಚಿಯನ್ನು ಎಲ್ಲರೂ ಪಾಲಿಸಬೇಕು. ಅದರಲ್ಲೂ ಅನಾರೋಗ್ಯ ಪೀಡಿತರಾದವರು ಇತರರೊಂದಿಗೆ ಸಂಪರ್ಕ ಹೊಂದದೇ ಮನೆಯಲ್ಲೇ ಇರುವುದು ಸೂಕ್ತ.


Downloaded From:www.kpscvaani.com



# ಅಭಿನಯದ ಮೋಡಿಯಿಂದ ಮನಸೂರೆಗೊಳಿಸಿದ ಅದ್ಭುತ ನಟಿ

ಅ.ನಾ.ಪ್ರಹ್ಲಾದರಾವ್

ಲೀಲಾವತಿ ತಮಿಳು, ತೆಲುಗು ಮತ್ತು ಮಲಯಾಳಂ ಭಾಷೆಗಳ ಸುಮಾರು 600 ಚಿತ್ರಗಳಲ್ಲಿ ನಟಿಸಿದ್ದಾರೆ. ಡಿ.ಶಂಕರ್‌ಸಿಂಗ್ ಅವರ ಯಶಸ್ವಿ ಚಿತ್ರಗಳಲ್ಲಿ ಒಂದಾದ 'ನಾಗಕನ್ನಿಕಾ' (1949) ಚಿತ್ರದಲ್ಲಿ ನಾಯಕಿ ನಾಗಕನ್ನಿಕೆಗೆ ಗಾಳಿ ಬೀಸುವ ಸಖಿ ಪಾತ್ರಕ್ಕೆ ಬಣ್ಣ ಹಚ್ಚುವ ಮೂಲಕ ಚಿತ್ರರಂಗ ಪ್ರವೇಶಿಸಿದರು.

ಲೀಲಾಕಿರಣ್, ಲೀಲಾವತಿ ಅವರ ಹುಟ್ಟು ಹೆಸರು. ದಕ್ಷಿಣಕನ್ನಡ ಜಿಲ್ಲೆಯ ಬೆಳ್ತಂಗಡಿಯಲ್ಲಿ 1937ರಲ್ಲಿ ಜನಿಸಿದರು. ತಮ್ಮ ಆರನೇ ವಯಸ್ಸಿನಲ್ಲಿಯೇ ತಂದೆ ತಾಯಿಗಳನ್ನು ಕಳೆದುಕೊಂಡರು. ಲೀಲಾಕಿರಣ್ ಅವರಿಗೆ ರಂಗಭೂಮಿ ಹಾಗೂ ಚಲನಚಿತ್ರರಂಗದಲ್ಲಿ ಅಭಿನಯಿಸಬೇಕೆಂಬ ಬಯಕೆ. ರಂಗಭೂಮಿ ನಟ ಮಹಾಲಿಂಗ ಭಾಗವತರ್ ಅವರ ನೆರವಿನಿಂದ ಸುಬ್ಬಯ್ಯನಾಯ್ಡು ಅವರ ಸಾಹಿತ್ಯ



ಸಾಮ್ರಾಜ್ಯ ನಾಟಕ ಮಂಡಲಿಗೆ ಸೇರಿಕೊಂಡರು.

ವೃತ್ತಿರಂಗಭೂಮಿಯಲ್ಲಿ ಸಂಪೂರ್ಣ ತೊಡಗಿಸಿಕೊಳ್ಳುವ ಮುನ್ನ ಕೆಲವೆಡೆ ಮನೆ ಕೆಲಸವನ್ನೂ ಅವರು ನಿರ್ವಹಿಸಿದ್ದರು. ರಂಗಭೂಮಿ ಸೇರಿಕೊಂಡ ಲೀಲಾಕಿರಣ್ ಸಣ್ಣಪುಟ್ಟ ಪಾತ್ರಗಳಲ್ಲಿಯೇ ತೃಪ್ತರಾಗಬೇಕಾಯಿತು. ಮುಂದೆ 1958ರಲ್ಲಿ ಸುಬ್ಬಯ್ಯನಾಯ್ಡು ಅವರೇ ನಿರ್ಮಿಸಿ, ನಿರ್ದೇಶಿಸಿದ 'ಭಕ್ತಪ್ರಹ್ಲಾದ' ಚಿತ್ರದಲ್ಲಿ ದೊರೆತ ಸಣ್ಣ ಪಾತ್ರವನ್ನು ನಿರ್ವಹಿಸಲು ಮದರಾಸಿಗೆ ತೆರಳಿದರು. ಅವಕಾಶಗಳನ್ನು ನಿರೀಕ್ಷಿಸಿ ಮದರಾಸಿನಲ್ಲಿಯೇ ಉಳಿದರು.

ಲೀಲಾಕಿರಣ್ ಮದರಾಸಿನಲ್ಲಿ ನೆಲೆಸಿದ ನಂತರ ಅವಕಾಶಗಳು ಬರಲಾರಂಭಿಸಿದವು. ಪಿ.ಕೆ.ಲಾಲ್ ನಿರ್ದೇಶನದ 'ಮಾಂಗಲ್ಯ ಯೋಗ' (1958) ಅವರು ಅಭಿನಯಿಸಿದ ಮೊದಲ ಚಿತ್ರ. ಓ.ಎನ್. ಬಾಲಕೃಷ್ಣ ಈ ಚಿತ್ರದ ಪ್ರಮುಖ ಪಾತ್ರಧಾರಿ. ಮದರಾಸಿನ ಗೋಲ್ಡನ್ ಸ್ಟುಡಿಯೋದಲ್ಲಿ ಈ ಚಿತ್ರದ ಚಿತ್ರೀಕರಣ ನಡೆಯುತ್ತಿದ್ದ ಸಂದರ್ಭದಲ್ಲಿ ಕನ್ನಡದ ನಾಯಕ ನಟ ರಾಜಕುಮಾರ್ ಚಿತ್ರೀಕರಣ ವೀಕ್ಷಿಸಲು ಬಂದಿದ್ದರು. ಲೀಲಾಕಿರಣ್ ಅವರಲ್ಲಿದ್ದ ಪ್ರತಿಭೆಯನ್ನು ಕಂಡ ರಾಜಕುಮಾರ್ ತಾವು ಇತರ ಕಲಾವಿದರ ಜೊತೆ ನಿರ್ಮಿಸಲು ಉದ್ದೇಶಿಸಿದ್ದ 'ರಣಧೀರ ಕಂಠೀರವ' (1960) ಚಿತ್ರದಲ್ಲಿ ಅಭಿನಯಿಸಲು ಅವಕಾಶ ನೀಡಿದರು. ಇದಕ್ಕೂ ಮುನ್ನ 'ಧರ್ಮವಿಜಯ' (1959) ಚಿತ್ರದಲ್ಲಿ ಅಭಿನಯಿಸುವ ಅವಕಾಶವೂ ದೊರಕಿತ್ತು.

'ದಶಾವತಾರ' (1960) ಚಿತ್ರದಲ್ಲಿ ಮೂರು ಪಾತ್ರಗಳು ದೊರೆತವು. ಕಯಾದು, ಮಂಡೋದರಿ ಹಾಗೂ ಸೀತೆ



Downloaded From:www.kpscvaani.com

ಪಾತ್ರಗಳಲ್ಲಿ ಇವರು ನಟಿಸಿದರು. ಕಯಾದು ಹಾಗೂ ಮಂಡೋದರಿ ಪಾತ್ರಗಳನ್ನು ರಾಜಕುಮಾರ್ ಅವರೊಂದಿಗೂ, ಸೀತೆ ಪಾತ್ರವನ್ನು ರಾಜಾಶಂಕರ್ ಅವರೊಂದಿಗೆ ಅಭಿನಯಿಸಿದರು. 1960ರಲ್ಲಿ ಬಿಡುಗಡೆಯಾದ 'ರಾಣಿ ಹೊನ್ನಮ್ಮ' ರಾಜಕುಮಾರ್ ಅವರೊಂದಿಗೆ ಪೂರ್ಣ ಪ್ರಮಾಣದಲ್ಲಿ ನಾಯಕಿಯಾಗಿ ಅಭಿನಯಿಸಿದ ಚಿತ್ರ.

ಅನಂತರ ಹತ್ತಾರು ಚಿತ್ರಗಳಲ್ಲಿ ರಾಜಕುಮಾರ್ ಅವರೊಂದಿಗೆ ಜನಪ್ರಿಯ ಜೋಡಿಯಾಗಿ ಕನ್ನಡ ಪ್ರೇಕ್ಷಕರನ್ನು ರಂಜಿಸಿದರು. ಕಿತ್ತೂರು ಚೆನ್ನಮ್ಮ (1960), ಕಣ್ತೆರೆದು ನೋಡು (1961), ಕೈವಾರ ಮಹಾತ್ಮೆ (1961), ಗಾಳಿಗೋಪುರ (1963), ರತ್ನಮಂಜರಿ (1962) ಚಿತ್ರಗಳಲ್ಲಿ ನಾಯಕಿಯಾಗಿ ನಟಿಸಿದರು. ವಿಧಿ ವಿಲಾಸ, ನಂದಾದೀಪ, ಕನ್ಯಾರತ್ನ, ಜೀವನತರಂಗ, ಮಲ್ಲಿ ಮದುವೆ, ಕುಲವಧು, ಕಲಿತರೂ ಹೆಣ್ಣೆ, ಬೇವು ಬೆಲ್ಲ, ವೀರಕೇಸರಿ, ವಾಲ್ಮೀಕಿ, ಮನಮೆಚ್ಚಿದ ಮಡದಿ ಮುಂತಾದ ಚಿತ್ರಗಳಲ್ಲಿ ರಾಜಕುಮಾರ್ ಅವರೊಂದಿಗೆ ಅಭಿನಯಿಸಿದರು. ಭಕ್ತಿಪ್ರಧಾನ ಚಿತ್ರ ಭಕ್ತಕುಂಬಾರದಲ್ಲಿ ಲೀಲಾವತಿ ಅವರು ನೀಡಿದ ಅಭಿನಯ ನೋಡುಗರ ನೆನಪಿನಾಳದಲ್ಲಿ ನೆಲೆಯೂರಿತು.

ತಮ್ಮ ಮನೋಜ್ಞ ಹಾಗೂ ಸರಿಸಾಟಿಯಿಲ್ಲದ ಅಭಿನಯದಿಂದ ಕನ್ನಡಿಗರ ಮನಸೂರೆಗೊಂಡಿದ್ದರು. ಅರವತ್ತರ ದಶಕದಲ್ಲಿ ತೆರೆ ಕಾಣುತ್ತಿದ್ದ ಕಪ್ಪು-ಬಿಳುಪು ಚಿತ್ರಗಳಲ್ಲಿ ರಾಜಕುಮಾರ್ ಜೋಡಿಯಾಗಿ ಅಭಿನಯಿಸಿದ ಚಿತ್ರಗಳು ಅಂದಿನ ಚಿತ್ರ ರಸಿಕರನ್ನು ಆಕರ್ಷಿಸಿದ್ದವು. ಉದಯಕುಮಾರ್, ಕಲ್ಯಾಣ್‌ಕುಮಾರ್, ರಾಜೇಶ್, ರಾಜಾಶಂಕರ್ ಮೊದಲಾದ ನಾಯಕ ನಟರೊಂದಿಗೂ ಲೀಲಾವತಿ ಅಭಿನಯಿಸಿದ್ದರು. ಪೋಷಕ ಪಾತ್ರಗಳಲ್ಲಿ ವಿಷ್ಣುವರ್ಧನ್, ರವಿಚಂದ್ರನ್, ಶ್ರೀನಾಥ್, ಉಪೇಂದ್ರ, ರಮೇಶ್, ಶಿವರಾಜ್‌ಕುಮಾರ್ ಮುಂತಾದ ನಾಯಕರ ಚಲನಚಿತ್ರಗಳಲ್ಲಿ ಅಭಿನಯಿಸಿದರು.

ಆ ದಿನಗಳಲ್ಲಿ ಕೆಲ ಚಿತ್ರಗಳಿಗೆ ನಾಯಕನಟರಿಗಿಂತ ಹೆಚ್ಚಿನ ಸಂಭಾವನೆ ಪಡೆಯುವ ನಾಯಕಿಯಾಗಿ ಗುರುತಿಸಿಕೊಂಡಿದ್ದರು. ರಾಜಕುಮಾರ್ ಅವರೊಂದಿಗೆ ಜನಪ್ರಿಯ ಜೋಡಿಯಾಗಿ ಪ್ರಖ್ಯಾತರಾಗಿದ್ದ ಇವರು 'ಭೂದಾನ' ಚಿತ್ರದಲ್ಲಿ ರಾಜಕುಮಾರ್ ಮಗಳಾಗಿ, 'ವಾತ್ಸಲ್ಯ' ಚಿತ್ರದಲ್ಲಿ ಸಹೋದರಿಯಾಗಿ, 'ಪ್ರೇಮಮಯಿ' ಸಿನಿಮಾದಲ್ಲಿ ಅತ್ತಿಗೆಯಾಗಿ, ನಾ ನಿನ್ನ ಮರೆಯಲಾರೆ ಚಿತ್ರದಲ್ಲಿ ಅತ್ತೆಯಾಗಿ ಅಭಿನಯಿಸಿದರು. ಸಿಪಾಯಿರಾಮು ಚಿತ್ರದಲ್ಲಿ ರಾಜಕುಮಾರ್ ಹಾಗೂ ಲೀಲಾವತಿ ಅವರುಗಳ ಅಭಿನಯ ಮನೋಜ್ಞವಾಗಿತ್ತು. ಇವರು ಜೋಡಿಯಾಗಿ ಅಭಿನಯಿಸಿದ 'ಭಕ್ತಕುಂಬಾರ' ಎಪ್ಪತ್ತರ ದಶಕದ ಜನಪ್ರಿಯ ಚಿತ್ರ. 2003ರಲ್ಲಿ ಬಿಡುಗಡೆಯಾದ 'ಸ್ವಾತಿಮುತ್ತು' ಸೇರಿದಂತೆ ಸುಮಾರು 300 ಚಲನಚಿತ್ರಗಳಲ್ಲಿ ಪೋಷಕ ಪಾತ್ರಗಳಲ್ಲಿ ಅಭಿನಯಿಸಿದ್ದಾರೆ. ಎಸ್.ಕೆ.ಕರೀಂಖಾನ್ ಸಾಹಿತ್ಯ ನೀಡಿದ್ದ 'ಗಂಗೆ-ಗೌರಿ' ಚಲನಚಿತ್ರದಲ್ಲಿ ಇವರಿಗೆ ಹಾಸ್ಯ ಪಾತ್ರವೊಂದನ್ನು ನೀಡಲಾಗಿತ್ತು. ಆದರೆ ಈ ಚಿತ್ರ ಸಂಪೂರ್ಣವಾಗಿ ಚಿತ್ರೀಕರಣಗೊಳ್ಳಲಿಲ್ಲ. ಮುಂದೆ ಬಿ.ಆರ್.ಪಂತುಲು ಅವರು ನಿರ್ಮಿಸಿ, ನಿರ್ದೇಶಿಸಿದ 'ಗಂಗೆ-ಗೌರಿ' ಚಿತ್ರದಲ್ಲಿ ಲೀಲಾವತಿಯವರೇ ನಾಯಕಿಯಾದರು.

ಪುತ್ರ ವಿನೋದ್‌ರಾಜ್, ದ್ವಾರಕೀಶ್ ನಿರ್ಮಾಣದ 'ಡ್ಯಾನ್ಸ್ ರಾಜಾ ಡ್ಯಾನ್ಸ್' ಚಿತ್ರದ ಮೂಲಕ ನಾಯಕ ನಟರಾದರು. ವಿನೋದ್‌ರಾಜ್ ನಾಯಕರಾಗಿ ಅಭಿನಯಿಸಿದ 'ಕಾಲೇಜ್ ಹೀರೋ' ಚಿತ್ರ ನಿರ್ಮಿಸುವ ಮೂಲಕ ಲೀಲಾವತಿ ನಿರ್ಮಾಪಕಿಯೂ ಆದರು. ಲೀಲಾವತಿ ಕಥೆ ಬರೆದು, ನಿರ್ಮಿಸಿದ, ವಿನೋದ್‌ರಾಜ್ ಅಭಿನಯದ 'ಕನ್ನಡಕಂದ' ಯಶಸ್ವಿ ಚಿತ್ರವಾಯಿತು. ಈ ಚಿತ್ರ ಫಿಲ್ಮ್‌ಫೇರ್ ಪ್ರಶಸ್ತಿಗೆ ಭಾಜನವಾಯಿತು. ನಂತರ 'ಶುಕ್ರ' ಹಾಗೂ 'ಯಾರದು' ಚಿತ್ರಗಳನ್ನು ಲೀಲಾವತಿ ಅವರೇ ನಿರ್ಮಿಸಿದರು. ಪೋಷಕ ಪಾತ್ರಗಳಿಗೆ ಜೀವ ತುಂಬಿದ ಲೀಲಾವತಿಯವರು ಮೂರು ಬಾರಿ ರಾಜ್ಯ ಸರ್ಕಾರದಿಂದ ಅತ್ಯುತ್ತಮ ಪೋಷಕ ನಟಿ



ಪ್ರಶಸ್ತಿ ಗಳಿಸಿದರು. ಗೆಜ್ಜೆಪೂಜೆ (1969-70), ಸಿಪಾಯಿರಾಮು (1971-72), ಡಾಕ್ಟರ್ ಕೃಷ್ಣ (1989-90) ಚಿತ್ರಗಳು ಇವರಿಗೆ ಪ್ರಶಸ್ತಿಯನ್ನು ತಂದುಕೊಟ್ಟವು. ಇವರು ಅಭಿನಯಿಸಿದ 'ಮದುವೆ ಮಾಡಿ ನೋಡು' ಹಾಗೂ 'ಸಂತ ತುಕಾರಾಂ' 'ಗೆಜ್ಜೆಪೂಜೆ' ಚಿತ್ರಗಳಿಗೆ ರಾಷ್ಟ್ರ ಪ್ರಶಸ್ತಿಯ ಗೌರವ ದೊರೆಯಿತು. ಕರ್ನಾಟಕ ಸರ್ಕಾರವು ಚಲನಚಿತ್ರರಂಗದ ಜೀವಮಾನ ಸಾಧನೆಗೆ ನೀಡುವ ಅತ್ಯುನ್ನತ ಡಾ. ರಾಜಕುಮಾರ್ ಜೀವಮಾನ ಸಾಧನೆ ಪ್ರಶಸ್ತಿಯನ್ನು 1999-2000ನೇ ಸಾಲಿನಲ್ಲಿ ನೀಡಿ ಗೌರವಿಸಿದೆ. ತುಮಕೂರು ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್ ಪದವಿಯನ್ನು 2008ರಲ್ಲಿ ಪಡೆದರು.

ಚಿತ್ರರಂಗದಿಂದ ದೂರಾದ ನಂತರ ನೆಲಮಂಗಲದ ಬಳಿ ತೆಗೆದುಕೊಂಡಿದ್ದ ಭೂಮಿಯನ್ನು ನಂಬಿ ಮಗ ವಿನೋದ್ ರಾಜ್ ಅವರೊಂದಿಗೆ ತೋಟದ ಮನೆಯಲ್ಲಿಯೇ ನೆಲೆಸಿದರು. ನೆಲಮಂಗಲದ ಸುತ್ತಮುತ್ತ ವಾಸಿಸುವ ಜನರ ಆರೋಗ್ಯ ಸೇವೆಗಾಗಿ ಸೋಲದೇವನಹಳ್ಳಿಯಲ್ಲಿ ಆಸ್ಪತ್ರೆಯೊಂದನ್ನು ಲೀಲಾವತಿ ಕಟ್ಟಿಸಿದ್ದಾರೆ. ಪರಿಸರ, ಪ್ರಾಣಿ, ಪಕ್ಷಿಗಳನ್ನು ಅತಿಯಾಗಿ ಪ್ರೀತಿಸುತ್ತಿದ್ದ ಲೀಲಾವತಿ ಅವರ ಮುತುವರ್ಜಿಯಿಂದ ನಿರ್ಮಾಣಗೊಂಡಿರುವ ಪಶು ಆಸ್ಪತ್ರೆಯೂ ಉದ್ಘಾಟನೆಗೊಂಡಿತು. ಅನಾರೋಗ್ಯ ಪೀಡಿತರಾಗಿ ಮನೆಯಲ್ಲೇ ಚಿಕಿತ್ಸೆ ಪಡೆಯುತ್ತಿದ್ದ ಲೀಲಾವತಿ ಅವರನ್ನು ಇತ್ತೀಚೆಗಷ್ಟೇ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಪ್ರತ್ಯೇಕವಾಗಿ ಭೇಟಿಯಾಗಿ ಆರೋಗ್ಯ ವಿಚಾರಿಸಿ ಬಂದಿದ್ದರು. ಲೀಲಾವತಿ ತಮ್ಮ 86ನೆಯ ವಯಸ್ಸಿನಲ್ಲಿ 2023ರ ಡಿಸೆಂಬರ್ 8 ರಂದು ನಿಧನರಾದರು. ಡಿಸೆಂಬರ್ 9 ರಂದು ಅಂತ್ಯಕ್ರಿಯೆಯನ್ನು ಸರ್ಕಾರಿ ಗೌರವದೊಂದಿಗೆ ನೆಲಮಂಗಲದ ಅವರ ತೋಟದಲ್ಲಿ ನೆರವೇರಿಸಲಾಯಿತು.





Downloaded From:www.kpscvaani.com

# ಭ್ರೂಣಲಿಂಗ ಪತ್ತೆ ಕಾನೂನು ಬಾಹಿರ ಅಪರಾಧ

ಪ್ರಸಾದ್. ಎನ್



ವಿಶ್ವಸಂಸ್ಥೆಯ 'ಸುಸ್ಥಿರ ಅಭಿವೃದ್ಧಿ ಗುರಿ'ಗಳ ಸಾಧನೆಯಲ್ಲಿ ಭಾರತವು ವಿಶ್ವದ 166 ಸದಸ್ಯ ರಾಷ್ಟ್ರಗಳ ಸಾಲಿನಲ್ಲಿ 112ನೇ ಶ್ರೇಯಾಂಕಕ್ಕೆ ತೃಪ್ತಿ ಪಡಬೇಕಿದೆ. 2015ರಲ್ಲಿ ರೂಪಿಸಿದ್ದ 17 ಸುಸ್ಥಿರ ಅಭಿವೃದ್ಧಿ ಗುರಿಗಳನ್ನು ಸಾಧಿಸುವ ಶ್ರೇಯಾಂಕದಲ್ಲಿ 112ನೇ ಸ್ಥಾನದಲ್ಲಿರಲು ಕಾರಣವಾಗಿರುವ ಎಸ್.ಡಿ.ಜಿಗಳನ್ನು ಪಟ್ಟಿ ಮಾಡಿದರೆ ಅವುಗಳಲ್ಲಿ ಪ್ರಮುಖವಾಗಿ ಹಸಿವು ಕೊನೆಗೊಳಿಸುವುದು ಮತ್ತು ಆಹಾರ ಭದ್ರತೆ ಸಾಧಿಸುವುದು (ಎಸ್.ಡಿ.ಜಿ–2) ಲಿಂಗಸಮಾನತೆ ಸಾಧಿಸುವುದು (ಎಸ್.ಡಿ.ಜಿ–5) ಮೂಲಸೌಕರ್ಯ, ಕೈಗಾರಿಕೆಗಳಿಗೆ ಉತ್ತೇಜನ ನೀಡುವ (ಎಸ್.ಡಿ.ಜಿ–9) ಗುರಿಗಳು ದೇಶಕ್ಕೆ ಸವಾಲಾಗಿ ಪರಿಣಮಿಸಿದೆ.

2023ರ ಆಗಸ್ಟ್‌ನಲ್ಲಿ ವಿಶ್ವಸಂಸ್ಥೆಯು ಬಿಡುಗಡೆ ಮಾಡಿರುವ ವರದಿಯ ಅನುಸಾರ 2030ಕ್ಕೆ ಗುರಿ ನಿಗದಿಪಡಿಸಿಕೊಂಡು ರೂಪಿಸಿರುವ 17 ಸುಸ್ಥಿರ ಅಭಿವೃದ್ಧಿ ಗುರಿಗಳ ಸಾಧನೆಯಲ್ಲಿ ಭಾರತವು 100ಕ್ಕೆ 63.5 ಅಂಕಗಳನ್ನು ಗಳಿಸಿರುವುದು ಭಾರತದ ಪಾಲಿಗೆ ಅಷ್ಟೇನು ತೃಪ್ತಿಕರವಾಗಿಲ್ಲ, ಅದರಲ್ಲೂ ಲಿಂಗ ಸಮಾನತೆ ಸಾಧಿಸುವಲ್ಲಿ ಸುಧಾರಿಸಿಕೊಳ್ಳಬೇಕಾದ ಅಂಶಗಳನ್ನು ಪಟ್ಟಿ ಮಾಡಿದಾಗ ಭಾರತದಲ್ಲಿ ಮಹಿಳೆಯರ ಮೇಲೆ ಎಸಗಲಾಗುತ್ತಿರುವ ಕೃತ್ಯಗಳ ಪ್ರಮಾಣದಲ್ಲಿ ನಿರೀಕ್ಷಿತ ಪ್ರಮಾಣದಲ್ಲಿ ಇಳಿಕೆ ಸಾಧ್ಯವಾಗದಿರುವುದು, ಹೆಣ್ಣು ಮಕ್ಕಳ ಮೇಲೆ

**ಗರ್ಭಧಾರಣಾ ಪೂರ್ವ ಮತ್ತು ಪ್ರಸವ ಪೂರ್ವ ರೋಗಪತ್ತೆ ತಂತ್ರ ವಿಧಾನಗಳ (ಲಿಂಗ ಆಯ್ಕೆ ನಿಷೇಧ) ಕಾಯ್ದೆ-1994ರ ಅನುಸಾರ ಭ್ರೂಣಲಿಂಗ ಪತ್ತೆ ಕಾನೂನು ಬಾಹಿರ ಮತ್ತು ಶಿಕ್ಷಾರ್ಹ ಅಪರಾಧ.**



Downloaded From:www.kpscvaani.com

ಎಸಗಲಾದ ಅಪರಾಧ ಪ್ರಕರಣಗಳ ಪ್ರಮಾಣದಲ್ಲಿ ಏರಿಕೆಯಾಗಿರುವುದು, ಲಿಂಗಾನುಪಾತದಲ್ಲಿ ರಾಜ್ಯವಾರು ಇರುವ ವ್ಯತ್ಯಾಸ, ಮಹಿಳಾ ಮತ್ತು ಮಕ್ಕಳ ಸುರಕ್ಷತೆಗೆ ರೂಪಿಸಿರುವ ಕಾಯ್ದೆ ಕಾನೂನುಗಳ ಸಮರ್ಪಕ ಅನುಷ್ಠಾನಗೊಳಿಸುವಲ್ಲಿ ವಿಫಲವಾಗಿರುವುದು ಕಡಿಮೆ ಶ್ರೇಯಾಂಕ ಗಳಿಸಿರುವುದಕ್ಕೆ ಪ್ರಮುಖ ಕಾರಣವಾಗಿರುವುದು ಕಳವಳಕಾರಿಯಾದ ಅಂಶ.

ಸಾಮಾನ್ಯವಾಗಿ ಲಿಂಗಾನುಪಾತವು ಒಂದು ನಿರ್ಧಿಷ್ಟ ಭೌಗೋಳಿಕ ಪ್ರದೇಶದಲ್ಲಿ ವಾಸವಾಗಿರುವ ಪ್ರತಿ 1000 ಪುರುಷರಿಗೆ ಹೋಲಿಸಿದರೆ ಎಷ್ಟು ಮಹಿಳೆಯರಿದ್ದಾರೆ ಎಂಬುದನ್ನು ತಿಳಿಸುತ್ತದೆ. ಆದರೆ ಇದನ್ನು ಎಲ್ಲಾ ಕಾಲಕ್ಕೂ ಎಲ್ಲಾ ಪ್ರದೇಶಗಳಿಗೂ ಸಾಮಾನ್ಯೀಕರಿಸಲು ಸಾಧ್ಯವಾಗುವುದಿಲ್ಲ. ಇತ್ತೀಚೀನ ಅಂಕಿ-ಅಂಶಗಳ ಪ್ರಕಾರ ಭಾರತದಲ್ಲಿ ಒಟ್ಟು ಜನಸಂಖ್ಯೆಯಲ್ಲಿ ಲಿಂಗಾನುಪಾತವು ಪ್ರತಿ 1000 ಪುರುಷರಿಗೆ 1020 ಮಹಿಳೆಯರಿದ್ದಾರೆ ಎಂದು ತೋರಿಸುತ್ತದೆ. ಇದು ಭಾರತದಲ್ಲಿ ಪುರುಷರಿಗಿಂತ ಮಹಿಳೆಯರೇ ಹೆಚ್ಚಿದ್ದಾರೆ ಎಂಬುದನ್ನು ವಿವರಿಸುತ್ತದೆ.

ಆದರೆ ಕಳೆದ ಐದು ವರ್ಷಗಳಲ್ಲಿ ಜನಿಸಿದವರ ಲಿಂಗಾನುಪಾತವು ಪ್ರತಿ 1000 ಗಂಡು ಮಕ್ಕಳಿಗೆ 943 ಹೆಣ್ಣು ಮಕ್ಕಳಿದ್ದಾರೆ. ಇದು ಲಿಂಗಾನುಪಾತದಲ್ಲಿ ಸಮಾನತೆ ಸಾಧಿಸಿಲ್ಲವೆಂಬುದನ್ನು ಸೂಚಿಸುತ್ತದೆ. ಇನ್ನು ಕರ್ನಾಟಕದ ಅಂಕಿ-ಅಂಶಗಳನ್ನು ಅವಲೋಕಿಸಿದಾಗ ಪ್ರತಿ 1000 ಪುರುಷರಿಗೆ 1034 ಮಹಿಳೆಯರಿದ್ದಾರೆ. ಆದರೆ ಕಳೆದ 2019-2023 ನಡುವಣ ಐದು ವರ್ಷಗಳಲ್ಲಿ ಜನಿಸಿದವರ ಲಿಂಗಾನುಪಾತವು ಪ್ರತಿ 1000 ಗಂಡುಮಕ್ಕಳಿಗೆ 978 ಹೆಣ್ಣು ಮಕ್ಕಳಿದ್ದಾರೆ ಎಂಬುದನ್ನು ವಿವರಿಸುತ್ತದೆ. ಒಟ್ಟಾರೆ ಕಳೆದ ಐದು ವರ್ಷಗಳಲ್ಲಿ ಜನಿಸಿದ ಒಟ್ಟು ಮಕ್ಕಳಲ್ಲಿ ಗಂಡು ಮತ್ತು ಹೆಣ್ಣು ಮಕ್ಕಳ ಲಿಂಗಾನುಪಾತವನ್ನು ಲೆಕ್ಕ ಹಾಕುವುದಾದರೆ ಲಿಂಗ ಅಸಮಾನತೆ ಇರುವುದು ಸ್ಪಷ್ಟವಾಗಿ ಗೋಚರವಾಗುತ್ತದೆ.

ಲಿಂಗ ಸಮಾನತೆಯನ್ನು ಸಾಧಿಸುವ ನಿಟ್ಟಿನಲ್ಲಿ ಸರ್ಕಾರಗಳು ಎಷ್ಟೆಲ್ಲಾ ಕಾಯ್ದೆ-ಕಾನೂನುಗಳನ್ನು ರೂಪಿಸಿದ್ದರೂ, ಲಿಂಗತಾರತಮ್ಯವನ್ನು ನಿವಾರಿಸಲು ಎಷ್ಟೆಲ್ಲ ಜಾಗೃತಿ ಅಭಿಯಾನಗಳನ್ನು ಕೈಗೊಂಡರೂ ಹೆಣ್ಣು ಭ್ರೂಣ ಪತ್ತೆ ಮಾಡುವುದು ಹಾಗೂ ಹೆಣ್ಣು ಭ್ರೂಣವೆಂಬುದು ತಿಳಿಯುತ್ತಿದ್ದಂತೆ ಭ್ರೂಣ ಹತ್ಯೆಯಂತಹ ಕೃತ್ಯಗಳು ನಿರ್ದಯವಾಗಿ ನಡೆಯುತ್ತಿರುವುದು ನಾಗರೀಕ ಸಮಾಜವನ್ನು ನಾಚಿ ತಲೆ ತಗ್ಗಿಸುವಂತೆ ಮಾಡುತ್ತಿದೆ. ಈ ನೀಚ ಕೃತ್ಯಕ್ಕೆ ವೈದ್ಯಕೀಯ ಲೋಕದಲ್ಲಿ ಮಗು ಗರ್ಭದಲ್ಲಿರುವಾಗಲೇ ಅದಕ್ಕೆ ಇರುವ ರೋಗವನ್ನು ಪತ್ತೆ ಹಚ್ಚಲು ಆವಿಷ್ಕಾರಗೊಂಡಿರುವ ಒಂದು ವೈಜ್ಞಾನಿಕ ತಂತ್ರಜ್ಞಾನವನ್ನೇ ಮಗುವಿನ ಲಿಂಗಪತ್ತೆಗೆ ಆಯುಧವನ್ನಾಗಿ ಬಳಸಿಕೊಂಡಿರುವುದು ದುರದೃಷ್ಟಕರ. ಇತ್ತೀಚೆಗೆ ಇದೊಂದು ದೊಡ್ಡ ಜಾಲವಾಗಿ ಸಕ್ರಿಯವಾಗಿರುವುದು ತಮ್ಮೆಲ್ಲರಿಗೂ ತಿಳಿದಿರುವ ಸಂಗತಿ. ಕಳೆದ ನಾಲ್ಕೈದು ದಿನಗಳಿಂದ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ವರದಿಯಾಗಿರುವ ಹೆಣ್ಣು ಭ್ರೂಣ ಪತ್ತೆ ಮಾಡುವ ಜಾಲಗಳು, ನವಜಾತ ಶಿಶುಗಳ ಸಾಗಾಣಿಕೆ ಜಾಲಗಳು ಸರ್ಕಾರ ರೂಪಿಸಿರುವ ಕಾಯ್ದೆ-ಕಾನೂನುಗಳ ಬಗ್ಗೆ ತಿಳಿದಿದ್ದರೂ ಸಹ ಈ ಜಾಲಗಳು ಸಕ್ರಿಯವಾಗಿರುವುದನ್ನು ಸರ್ಕಾರ ಗಂಭೀರವಾಗಿ ಚಿಂತಿಸಬೇಕಾದ ಅವಶ್ಯಕತೆ ಇದೆ.

ಕಾಯ್ದೆಯ ಪರಿಣಾಮಕಾರಿ ಅನುಷ್ಠಾನ ಹಾಗೂ ಜಾಗೃತಿ ಮೂಡಿಸುವುದೊಂದೇ ಲಿಂಗ ಸಮಾನತೆ ಸಾಧಿಸಲು ಇರುವ ಏಕೈಕ ಮಾರ್ಗ. ರಾಜ್ಯದಲ್ಲಿ ಹೆಣ್ಣು ಭ್ರೂಣ ಹತ್ಯೆಯನ್ನು ತಡೆಯಲು ಗರ್ಭಧಾರಣಾ ಪೂರ್ವ ಮತ್ತು ಪ್ರಸವ ಪೂರ್ವ ರೋಗಪತ್ತೆ ತಂತ್ರ ವಿಧಾನಗಳ (ಲಿಂಗ ಆಯ್ಕೆ ನಿಷೇಧ) ಕಾಯ್ದೆ-1994ರ ಜಾರಿಯಲ್ಲಿದ್ದು ಕಾಯ್ದೆಯ ಅನುಸಾರ ಭ್ರೂಣಲಿಂಗ ಪತ್ತೆ ಹಚ್ಚುವುದು ಕಾನೂನು ಬಾಹಿರ ಚಟುವಟಿಕೆ ಮತ್ತು ಕಾನೂನಿನ ರೀತ್ಯಾ ಶಿಕ್ಷಾರ್ಹ ಅಪರಾಧವಾಗಿರುತ್ತದೆ. ಮಗು ಗರ್ಭದಲ್ಲಿರುವಾಗಲೇ ಅದಕ್ಕಿರುವ ರೋಗವನ್ನು ಪತ್ತೆಹಚ್ಚಲು ಅಂದರೆ ಕೆಲವೊಂದು ವರ್ಣತಂತುಗಳ ವ್ಯತ್ಯಾಸದಿಂದ ಉಂಟಾಗುವ ನ್ಯೂನ್ಯತೆಗಳನ್ನು, ಅನುವಂಶೀಯ ಹಾಗೂ ಲೈಂಗಿಕ ಸಂಬಂಧಿ ನ್ಯೂನ್ಯತೆಗಳನ್ನು ಪತ್ತೆಹಚ್ಚಲು ಹಾಗೂ ಮಗುವಿನ ಬೆಳವಣಿಗೆಯಲ್ಲಿರುವ ಅಪಾಯದ ಚಿಹ್ನೆಗಳನ್ನು ಗುರುತಿಸಿ ವೈಜ್ಞಾನಿಕವಾಗಿ ಚಿಕಿತ್ಸೆ ನೀಡಲು, ಅಪಾಯದ ಅಂಚಿನಲ್ಲಿರುವ ತಾಯಿ ಮಗುವಿಗೆ ಉತ್ತಮ ಆರೋಗ್ಯ ಸೇವೆಗಳನ್ನು ಒದಗಿಸಿ ತಾಯಿ ಮರಣ ಹಾಗೂ ನವಜಾತ ಶಿಶುಮರಣವನ್ನು ತಡೆಗಟ್ಟುವ ಉದ್ದೇಶದಿಂದ ವೈದ್ಯಕೀಯ ಕ್ಷೇತ್ರದಲ್ಲಿ ಈ ತಂತ್ರಜ್ಞಾನವನ್ನು ಬಳಸಲು ಕಾನೂನಿನಲ್ಲಿ ಅವಕಾಶ ಮಾಡಿಕೊಟ್ಟಿದೆ.

ಆದರೆ ದೇಶದಲ್ಲಿ ತಾಯಿ-ಮಗುವಿನ ಆರೋಗ್ಯದ ಹಿತದೃಷ್ಟಿಯಿಂದ ಒಬ್ಬ ಗರ್ಭಿಣಿಗೆ 24 ವಾರಗಳು ತುಂಬುವವರೆಗೂ ತಾಯಿ ಹಾಗೂ ಮಗುವಿನ ಆರೋಗ್ಯಕ್ಕೆ ಅಪಾಯವನ್ನುಂಟು ಮಾಡುವಂತಹ ಚಿಹ್ನೆಗಳಿದ್ದರೆ ಸಂಬಂಧಪಟ್ಟ ತಜ್ಞವೈದ್ಯರ ಅಥವಾ ಪ್ರಾಧಿಕಾರದ ಸಲಹೆಯಂತೆ ಗರ್ಭಪಾತ ಮಾಡಿಸಿಕೊಳ್ಳಲು ಕಾನೂನಿನಲ್ಲಿ ಅವಕಾಶವಿದೆ. ಕಾನೂನಿನಲ್ಲಿರುವ ಈ ಅವಕಾಶವೂ ತಾಯಿಯ ಭ್ರೂಣಕ್ಕೆ 10-12 ವಾರಗಳು ತುಂಬಿದ ಕೂಡಲೇ ಮಗುವಿನ ಭ್ರೂಣ ಪತ್ತೆ ಹಚ್ಚಿ ಅದು ಹೆಣ್ಣು ಶಿಶು ಎಂಬುದು ದೃಢಪಟ್ಟರೆ 'ಹೆಣ್ಣು ಮಗುವಾದರೆ ಬೇಡವೇ ಬೇಡವೆಂದು ನಿರ್ಧರಿಸಿ ಬೆಳೆಯುವ ಪೈರನ್ನು ಮೊಳಕೆಯಲ್ಲೇ ಚಿವುಟುವಂತ ಶೋಚನೀಯ ಸ್ಥಿತಿಗೆ ಅವಕಾಶ ಮಾಡಿಕೊಟ್ಟಿರುವುದು ನಮ್ಮ ನಡುವೆ ನಡೆದಿರುವ ಪ್ರಚಲಿತ ವಿದ್ಯಮಾನಗಳೇ ಸಾಕ್ಷಿಯಾಗಿದೆ. ಹಾಗಂತ ಈ ಕಾಯ್ದೆಯನ್ನು ವ್ಯಾಪಕವಾಗಿ ದುರ್ಬಳಕೆ ಮಾಡಿಕೊಳ್ಳುತ್ತಿರುವವರಿಗೆ ಶಿಕ್ಷೆಯನ್ನು ನೀಡಬೇಕು. ಈ ಬಗ್ಗೆ ಜನಸಮುದಾಯದಲ್ಲಿ ಹೆಚ್ಚಿನ ಅರಿವು ಮೂಡಿಸಬೇಕಿದೆ. ಕಾಯ್ದೆಯು ಅನುಷ್ಠಾನಗೊಂಡ ನಂತರ ಹಾಗೂ ಜಾಗೃತಿ ಮೂಡಿದ ನಂತರ ಭ್ರೂಣಹತ್ಯೆ ಹಾಗೂ ಲಿಂಗತಾರತಮ್ಯದಂತಹ ನೀಚಕೃತ್ಯಗಳು ನಿವಾರಣೆಯಾಗಬೇಕಿತ್ತು. ಆದರೆ ಇತ್ತೀಚಿನ ಬೆಳವಣಿಗೆಗಳು ತದ್ವಿರುದ್ಧವಾಗಿದೆ.

ಹೆಣ್ಣು ಕುಟುಂಬಕ್ಕೆ ಹೊರೆ ಎಂದು ಭಾವಿಸುವ ಪೋಷಕರ ಮನಸ್ಥಿತಿಯೇ ಈ ಪ್ರವೃತ್ತಿಗೆ ಎಡೆಮಾಡಿಕೊಟ್ಟಿದೆ ಎಂದರೆ ತಪ್ಪಾಗಲಾರದು. ಹೆಣ್ಣು ಮಗು ಕುಟುಂಬಕ್ಕೆ ಹೊರೆ ಎಂಬುದಕ್ಕೆ ಅನೇಕ ಕಾರಣಗಳಿವೆ. ಹೆಣ್ಣು ಮಗು ಜನನವಾದರೆ ಅವಳ ವಿವಾಹ ಮಾಡಲು ಅತಿ ಹೆಚ್ಚು ವೆಚ್ಚವಾಗುತ್ತದೆ, ಮದುವೆ ಮಾಡಲು ವರದಕ್ಷಿಣೆ ಹೊಂದಿಸಬೇಕಾಗುತ್ತದೆ ಎಂಬ ಸಾಮಾಜಿಕ ಕಾರಣಗಳು ಒಂದು ಕಡೆಯಾದರೆ, ಮತ್ತೊಂದು ಕಡೆ ಗಂಡು ಮಗುವಾದರೆ ವಂಶಾಭಿವೃದ್ಧಿಯಾಗುತ್ತದೆ, ನಮ್ಮ ಪೂರ್ವಜರಿಗೆ ಮೋಕ್ಷ ಸಿಗಲಿದೆ, ಆಸ್ತಿಗೆ ವಾರಸುದಾರನಾಗುತ್ತಾನೆ ಎಂಬ ಪುತ್ರ ವ್ಯಾಮೋಹ. ತಾನು ಅನುಭವಿಸಿದ ಕಷ್ಟ ಕಾರ್ಪಣ್ಯಗಳನ್ನು ನನ್ನ ಮಗಳು ಅನುಭವಿಸುವುದು ಬೇಡ ಎಂಬ ತಾಯಿಯ ಯೋಚನೆಯು ಕೂಡ ಹೆಣ್ಣು ಮಗುವನ್ನು ಭ್ರೂಣದಲ್ಲಿಯೇ ಚಿವುಟಿ ಹಾಕಲು ಕಾರಣವಾಗುತ್ತಿವೆ. ಈ ಪ್ರವೃತ್ತಿಯೇ ಹೆಣ್ಣಿನ


Downloaded From:www.kpscvaani.com

ಮೇಲೆ ನಿರಂತರವಾಗಿ ನಡೆಯುವ ಶೋಷಣೆ, ಗಂಡು–ಹೆಣ್ಣು ಎಂಬ ಅಸಮಾನತೆ, ಸಮಾಜದಲ್ಲಿ ಲಿಂಗ–ತಾರತಮ್ಯ ಉಲ್ಬಣಗೊಂಡು ರಾಷ್ಟ್ರದ ಸುಸ್ಥಿರ ಅಭಿವೃದ್ಧಿಯ ಗುರಿಗಳನ್ನು ಸಾಧಿಸಲು ಅಡ್ಡಿಯುಂಟಾಗಿದೆ. ಆದರೂ ಸಹ ಸಮಾಜದಲ್ಲಿ ಹೆಣ್ಣುಮಕ್ಕಳ ರಕ್ಷಣೆಗಾಗಿ ಗರ್ಭಧಾರಣಾ ಪೂರ್ವ ಮತ್ತು ಪ್ರಸವ ಪೂರ್ವ ರೋಗಪತ್ತೆ ತಂತ್ರ ವಿಧಾನಗಳ (ಲಿಂಗ ಆಯ್ಕೆ ನಿಷೇಧ) ಕಾಯ್ದೆ–1994 ಜಾರಿಯಲ್ಲಿದ್ದು, ಕಾಯ್ದೆಯ ಬಗ್ಗೆ ಸಾರ್ವಜನಿಕರಿಗೆ ವ್ಯಾಪಕವಾಗಿ ಅರಿವು ಮೂಡಿಸಿ ಕಾಯ್ದೆಯನ್ನು ಉಲ್ಲಂಘಿಸುವವರಿಗೆ ಕಾನೂನಿನಡಿ ಶಿಕ್ಷಿಸುವ ಮೂಲಕ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಬೇಕಿದೆ.

ಕಾಯಿದೆಯ ಉಲ್ಲಂಘನೆ ಶಿಕ್ಷಾರ್ಹ ಅಪರಾಧ: ಕಾಯಿದೆಯ ಅನುಸಾರ ಭ್ರೂಣಲಿಂಗ ಪತ್ತೆ, ಭ್ರೂಣಲಿಂಗ ಆಯ್ಕೆಗೆ ಸಂಬಂಧಿಸಿದಂತೆ ಯಾವುದೇ ರೀತಿಯ ಜಾಹಿರಾತುಗಳನ್ನು ನೀಡುವಂತಿಲ್ಲ, ವೈದ್ಯರು ಭ್ರೂಣಲಿಂಗ ಪತ್ತೆ ಮಾಡಿದ್ದಲ್ಲಿ ಮೂರು ವರ್ಷಗಳಿಂದ ಐದು ವರ್ಷಗಳವರೆಗೆ ಜೈಲು ಶಿಕ್ಷೆ ಜೊತೆಗೆ ರೂ 10,000 ಗಳಿಂದ 50,000ವರೆಗೆ ದಂಡ ವಿಧಿಸಲಾಗುವುದು ಹಾಗೂ ಇಲಾಖೆಯಿಂದ ನೀಡಿರುವ ನೋಂದಣಿ ಮಾನ್ಯತೆಯನ್ನು ನ್ಯಾಯಾಲಯದಲ್ಲಿ ಅಪರಾಧ ನಿರ್ಣಯವಾಗುವವರೆಗೂ ತಡೆಹಿಡಿಯಲಾಗುವುದು, ಅಪರಾಧ ದೃಢಪಟ್ಟಲ್ಲಿ ರಾಜ್ಯ ವೈದ್ಯಕೀಯ ಮಂಡಳಿಯಿಂದ ಸಂಬಂಧಪಟ್ಟ ವೈದ್ಯರು ವೃತ್ತಿ ನಡೆಸದಂತೆ ಕಪ್ಪುಪಟ್ಟಿಗೆ ಸೇರಿಸಲಾಗುವುದು. ಗರ್ಭಿಣಿ ಅಥವಾ ಆಕೆಯ ಪತಿ ಅಥವಾ ಕುಟುಂಬಸ್ಥರು ಭ್ರೂಣಲಿಂಗ ಪತ್ತೆಗೆ ಒತ್ತಾಯಿಸಿದ್ದಲ್ಲಿ ಅಂತಹವರೂ ಸಹ ಈ ಕಾಯ್ದೆಯಡಿಯಲ್ಲಿ ಶಿಕ್ಷೆಗೆ ಒಳಗಾಗುತ್ತಾರೆ. ಯಾವುದೇ ಪ್ರಕಾರದ ಅಲ್ಟ್ರಾಸೌಂಡ್ ಸ್ಕ್ಯಾನಿಂಗ್ ಸೆಂಟರ್‌ಗಳು ಆರೋಗ್ಯ ಇಲಾಖೆಯ ಸಂಬಂಧಪಟ್ಟ ಪ್ರಾಧಿಕಾರದಲ್ಲಿ ನೋಂದಾಯಿಸಿಕೊಳ್ಳುವುದು ಕಡ್ಡಾಯವಾಗಿರುತ್ತದೆ. ತಪ್ಪಿದ್ದಲ್ಲಿ ಕಾನೂನಿನಡಿ ಶಿಕ್ಷಾರ್ಹ ಅಪರಾಧಕ್ಕೊಳಗಾಗುವರು.

**ಜಾಗೃತಿ ಮೂಡಿಸುವ ಅಭಿಯಾನ ಹಮ್ಮಿಕೊಳ್ಳುವ ಅವಶ್ಯಕತೆ ಇದೆ:**

ಪ್ರಸವ ಪೂರ್ವ ಲಿಂಗಪತ್ತೆ ಹಾಗೂ ಹೆಣ್ಣು ಭ್ರೂಣ ಹತ್ಯೆ ತಡೆಗಟ್ಟುವ



ಕಾಯ್ದೆಯ ಕುರಿತು ಪೋಷಕರಿಗೆ ಜಾಗೃತಿ ಮೂಡಿಸಬೇಕಿದೆ. ಈಗಾಗಲೇ ಪೋಷಕರಲ್ಲಿ ಹೆಣ್ಣುಮಕ್ಕಳ ಜನನದ ನಿರ್ಲಕ್ಷ್ಯದ ಬಗ್ಗೆ ಇರುವ ಸಾಮಾಜಿಕ ನಡವಳಿಕೆ ಮತ್ತು ಪೂರ್ವಾಗ್ರಹ ಪೀಡಿತ ಮನೋಭಾವನೆಯನ್ನು ಬದಲಾಯಿಸಬೇಕಿದೆ. ಈ ಕುರಿತು ವಿವಿಧ ಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನು ನಿರಂತರವಾಗಿ ಆಕಾಶವಾಣಿ, ದೂರದರ್ಶನ, ಬೀದಿ ನಾಟಕ, ವಿಚಾರ ಸಂಕಿರಣ ಹಾಗೂ ವಿಚಾರಾಂದೋಲನಗಳ ಮೂಲಕ ಹಮ್ಮಿಕೊಳ್ಳಬೇಕಿದೆ. ಪ್ರಸ್ತುತ ಜನರು ಚಲನಚಿತ್ರ ಹಾಗೂ ದೃಶ್ಯಮಾಧ್ಯಮಗಳಿಗೆ ಹೆಚ್ಚು ಆಕರ್ಷಿತರಾಗಿರುವುದರಿಂದ ಹೆಣ್ಣು ಭ್ರೂಣ ಹತ್ಯೆಯಿಂದ ಉಂಟಾಗುವ ಸಾಮಾಜಿಕ ಲಿಂಗ ಅಸಮತೋಲನದ ಕುರಿತು ಕಿರು ಚಿತ್ರಗಳ ಮೂಲಕ ಅರಿವು ಮೂಡಿಸಬೇಕಾದ ಅಗತ್ಯವಿದೆ. ಆ ಮುಖೇನ ಪ್ರಸ್ತುತ ಇರುವ ಸಾಮಾಜಿಕ ವಾತಾವರಣವನ್ನು ಪರಿವರ್ತಿಸಲು ಸಮಾಜದ ಎಲ್ಲಾ ವಿಭಾಗಗಳನ್ನು ಪಾಲ್ಗೊಳ್ಳುವಂತೆ ಮಾಡಿಕೊಂಡು ಸಮತೋಲಿತ ಲಿಂಗ ಅನುಪಾತವನ್ನು ಸಾಧಿಸಲು ಪ್ರಯತ್ನಿಸಬೇಕಿದೆ. ಜನರ ಮನಸ್ಥಿತಿಯನ್ನು ಬದಲಾಯಿಸದ ಹೊರತು ಸಾರ್ವಜನಿಕರಲ್ಲಿರುವ ಲಿಂಗ ಆಧಾರಿತ ಪೂರ್ವಾಗ್ರಹ ಮನೋಭಾವನೆಯನ್ನು ತೊಡೆದುಹಾಕದ ಹೊರತು ಈ ಜ್ವಲಂತ ಸಮಸ್ಯೆಯನ್ನು ಬಗೆಹರಿಸಲು ಸಾಧ್ಯವಿಲ್ಲ.

ಹೆಣ್ಣು ಭ್ರೂಣಹತ್ಯೆ ತಡೆಯಲು ಹಾಗೂ ಮಹಿಳೆಯರ ಬಗೆಗಿನ ಸಾಮಾಜಿಕ ದೃಷ್ಟಿಕೋನವನ್ನು ಬದಲಾಯಿಸಲು ಮತ್ತು ಸುಧಾರಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಹಲವು ಕಲ್ಯಾಣ ಯೋಜನೆಗಳನ್ನು ಪರಿಚಯಿಸಿವೆ. ಬಾಲಿಕ ಸಮೃದ್ಧಿಯಂತಹ ಹೆಣ್ಣು ಮಕ್ಕಳ ಶೈಕ್ಷಣಿಕ ಹಾಗೂ ಸಾಮಾಜಿಕ ಸ್ಥಿತಿಯನ್ನು ಉನ್ನತೀಕರಿಸಲು ರೂಪಿಸಿರುವ ವಿದ್ಯಾರ್ಥಿ ವೇತನ ಯೋಜನೆ, ಹೆಣ್ಣು ಮಕ್ಕಳ ಆರೋಗ್ಯ ಸುಧಾರಣೆಗಾಗಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ರೂಪಿಸಿರುವ ಜನನಿ ಸುರಕ್ಷಾ ಕಾರ್ಯಕ್ರಮ, ರಾಷ್ಟ್ರೀಯ ಬಾಲಸ್ವಾಸ್ಥ್ಯ ಕಾರ್ಯಕ್ರಮ, ರಾಷ್ಟ್ರೀಯ ಕಿಶೋರಿ ಸ್ವಾಸ್ಥ್ಯ ಕಾರ್ಯಕ್ರಮ, ಪ್ರಧಾನಮಂತ್ರಿ ಸುರಕ್ಷಿತ ಮಾತೃತ್ವ ಅಭಿಯಾನ ಹಾಗೂ ಸಂತಾನೋತ್ಪತ್ತಿ ಮತ್ತು ಮಕ್ಕಳ ಆರೋಗ್ಯ ಕಾರ್ಯಕ್ರಮದಡಿಯಲ್ಲಿ ತಾಯಿ ಮತ್ತು ಮಗುವಿನ ಸಮಗ್ರ ಆರೋಗ್ಯ ಸುಧಾರಣೆಗೆ ವಿಶೇಷ ಯೋಜನೆಗಳನ್ನು ರೂಪಿಸಲಾಗಿದೆ. ಅಲ್ಲದೇ ದೇಶಾದ್ಯಂತ ಹೆಣ್ಣು ಮಕ್ಕಳ ಶಿಕ್ಷಣದ ಸುಧಾರಣೆಗಾಗಿ ಮತ್ತು ಹೆಣ್ಣು ಭ್ರೂಣ ಹತ್ಯೆಯನ್ನು ತಡೆಗಟ್ಟಲು ಬೇಟಿ ಬಚಾವೋ ಬೇಟಿ ಪಡಾವೋ ಯೋಜನೆ ಮುಖ್ಯವಾಗಿ ಕಡಿಮೆ ಲಿಂಗ ಅನುಪಾತ ಹೊಂದಿರುವ ರಾಜ್ಯಗಳನ್ನು ಗುರಿಯಾಗಿಸಿಕೊಂಡು ಅನುಷ್ಠಾನಗೊಳಿಸಲಾಗಿದೆ.

ಅದರಲ್ಲೂ ಕರ್ನಾಟಕ ರಾಜ್ಯದಲ್ಲಿ ವಿಶೇಷವಾಗಿ ಪ್ರತ್ಯೇಕ ಲಿಂಗಧಾರಿತ ಆಯವ್ಯಯವನ್ನು ರೂಪಿಸಿ ಮಹಿಳೆಯರ ಸಾಮಾಜಿಕ ಆರ್ಥಿಕ ಅಭಿವೃದ್ಧಿಗೆ ಪೂರಕವಾಗಿ ಸ್ತ್ರೀಶಕ್ತಿ, ಪ್ರಧಾನ ಮಂತ್ರಿ ಮಾತೃತ್ವ ವಂದನಾ ಯೋಜನೆ, ಪೋಷಣ್ ಅಭಿಯಾನ, ಭಾಗ್ಯಲಕ್ಷ್ಮಿ, ಗೃಹಲಕ್ಷ್ಮಿ, ಗೃಹಜ್ಯೋತಿ, ಉದ್ಯೋಗಿನಿ ಮತ್ತು ಶಕ್ತಿಯಂತಹ ಮಹತ್ವಕಾಂಕ್ಷಿ ಯೋಜನೆಗಳನ್ನು ರೂಪಿಸಿ ಪ್ರತಿ ಬಾರಿ ಮಂಡಿಸುವ ಬಜೆಟ್‌ನಲ್ಲಿ ಮಹಿಳಾ ಕೇಂದ್ರಿತ ಯೋಜನೆಗಳಿಗೆ ವಿಶೇಷ ಒತ್ತು ನೀಡಲಾಗುತ್ತಿದೆ. ಇಷ್ಟೆಲ್ಲಾ ಯೋಜನೆಗಳ ಗುರಿ ಮತ್ತು ಉದ್ದೇಶ ಒಂದೇ ಆಗಿದ್ದು ಅದು ಲಿಂಗ ತಾರತಮ್ಯವನ್ನು ಹೋಗಲಾಡಿಸಿ ಪುರುಷರಂತೆ ಮಹಿಳೆಯರು ಸಮಾನ ಅವಕಾಶಗಳನ್ನು ಪಡೆದು ಲಿಂಗಸಮಾನತೆಯನ್ನು ಸಾಧಿಸುವುದೇ ಆಗಿದೆ. ಮಹಿಳೆಯರಿಲ್ಲದೆ ದೇಶ ಅಭಿವೃದ್ಧಿಯಾಗುವುದಿಲ್ಲ. ಆದ್ದರಿಂದ, ನಾವು ನಮ್ಮ ಸಮಾಜದಲ್ಲಿ ಹೆಣ್ಣು ಭ್ರೂಣ ಹತ್ಯೆ ಎಂಬ ಸಾಮಾಜಿಕ ಪಿಡುಗಿನ ವಿರುದ್ಧ ಜಾಗೃತಿ ಮೂಡಿಸುವ ಹೊಣೆ ನಮ್ಮೆಲ್ಲರ ಮೇಲಿದೆ. ■



Downloaded From:www.kpscvaani.com

ಸುಮಾರು 140 ವರ್ಷಗಳ ಹಿಂದಿನ ಘಟನೆ. ಬೆಳಗ್ಗಿನ ಜಾವ. ಸೂರ್ಯರಶ್ಮಿ ಆಗ ತಾನೇ ಭೂಮಿಯನ್ನು ಸ್ಪರ್ಶಿಸಲು ತೊಡಗಿತ್ತು. ಅಕ್ಟೋಬರ್ 16, 1892ರ ಆ ಮುಂಜಾನೆ ಆರು ಗಂಟೆ ಹೊತ್ತಿಗೆ ಬೆಳಗಾವಿ ನಗರದ ಪ್ರಸಿದ್ಧ ವಕೀಲ ಸದಾಶಿವ ಭಾಟೆ ಅವರ ಮನೆ ಬಾಗಿಲನ್ನು ಯಾರೋ ತಟ್ಟುತ್ತಾರೆ.

ಬಾಗಿಲು ತೆರೆದು ನೋಡಿದ ಭಾಟೆಗೆ ಆಶ್ಚರ್ಯ. ಅವರ ಮನೆಯ ಹೊಸ್ತಿಲಲ್ಲಿ ನಿಂತಿರುವುದು ಅಪರಿಚಿತ ನವ ಯುವಕ. ಅದೂ ಕೂಡ ಕಾವಿ ಬಟ್ಟೆಯಲ್ಲಿರುವ ಯುವ ಸನ್ಯಾಸಿ. ಭಾಟೆಯವರನ್ನು ನೋಡಿದ ಕೂಡಲೇ ವಿನಮ್ರತೆಯಿಂದ ಕೈ ಜೋಡಿಸಿ ನಮಿಸಿದ ಆ ನವ ಯುವಕ ತನ್ನ ಪರಿಚಯ ಹೇಳಿ ಭಾಟೆಯವರ ಕೈಗೆ ಪತ್ರವೊಂದನ್ನು ನೀಡುತ್ತಾನೆ. ಭಾಟೆಯವರಿಗೆ ಮತ್ತಷ್ಟು ಆಶ್ಚರ್ಯ. ಏಕೆಂದರೆ, ಆ ಪತ್ರ ನೀಡಿದ್ದು ಅವರ ಮಿತ್ರ ಹಾಗೂ ಕೊಲ್ಲಾಪುರ ಸಂಸ್ಥಾನದ ಮಹಾರಾಜರ ಆಪ್ತ ಕಾರ್ಯದರ್ಶಿ ಲಕ್ಷ್ಮಣರಾವ್ ಗೋಲ್ವಳ್ಕರ್.

ತಮ್ಮ ಮನೆತನದ ಸಂಪ್ರದಾಯದಂತೆ ಭಾಟೆ ಮತ್ತವರ ಪತ್ನಿ ಈ ಆಗಂತುಕನನ್ನು ಆರತಿ ಬೆಳಗಿ ಬರಮಾಡಿಕೊಳ್ಳುತ್ತಾರೆ. ಆ ಯುವ ಸನ್ಯಾಸಿಯೇ ಸ್ವಾಮಿ ವಿವೇಕಾನಂದ.

ಕರ್ನಾಟಕಕ್ಕೂ ಸ್ವಾಮಿ ವಿವೇಕಾನಂದರಿಗೂ ಅವಿನಾಭಾವ ಸಂಬಂಧ. ತಮ್ಮ ಜೀವಿತಾವಧಿಯಲ್ಲಿ ಆಗಮಿಸಿದ್ದ ಸ್ವಾಮೀಜಿ ಇಲ್ಲಿ ತಮ್ಮ ಅಚ್ಚಳಿಯದ ಪ್ರಭಾವ ಬೀರಿದ್ದು ಮಾತ್ರವಲ್ಲದೆ, ಹತ್ತು ಹಲವು ರೀತಿಯಲ್ಲಿ ಸಾಮಾಜಿಕ ಹಾಗೂ ಧಾರ್ಮಿಕ ಸುಧಾರಣೆಗಳಿಗೂ ಕಾರಣರಾಗಿದ್ದರು. 1893ರ ಸೆಪ್ಟೆಂಬರ್ 11 ರಂದು ಚಿಕಾಗೋ ವಿಶ್ವ ಧಾರ್ಮಿಕ ಸಮ್ಮೇಳನದಲ್ಲಿ ತಮ್ಮ ವಿದ್ವತ್ಪೂರ್ಣ ಭಾಷಣದಿಂದ ಜಗತ್ತಿನಾದ್ಯಂತ ಪ್ರಸಿದ್ಧಿ ಹೊಂದುವ ಮೊದಲು ಭಾರತ ಪರಿಕ್ರಮ ಕೈಗೊಂಡಿದ್ದ ಅವರು, ಕರ್ನಾಟಕದ ನೆಲಕ್ಕೂ ಕಾಲಿರಿಸಿದ್ದರು ಮತ್ತು ಇಲ್ಲಿ ಹಲವೆಡೆ ಹಲವು ದಿನಗಳನ್ನು ಕಳೆದಿದ್ದರು. ಆಗ ಅವರೊಬ್ಬ ಅನಾಮಿಕ ಸನ್ಯಾಸಿ ಮಾತ್ರ.

**ಸ್ವಾಮಿ ವಿವೇಕಾನಂದರು ತಮ್ಮ ಜೀವಿತಾವಧಿಯಲ್ಲಿ ಬೆಳಗಾವಿಗೆ ಆಗಮಿಸಿದ್ದ ಹೆಜ್ಜೆ ಗುರುತನ್ನು ಅವರ ಜನ್ಮದಿನಾಚರಣೆಯ ನಿಮಿತ್ತ ಸ್ಮರಿಸಿಕೊಳ್ಳಲಾಗಿದೆ.**

ದಿನೇಶ ನಾಯಕ್

# ಬೆಳಗಾವಿಯಲ್ಲಿ ಸ್ವಾಮಿ ವಿವೇಕಾನಂದರ ಹೆಜ್ಜೆ ಗುರುತುಗಳು





Downloaded From:www.kpscvaani.com





ಹಾಗೆ ನೋಡಿದರೆ, ಅವರ ದಕ್ಷಿಣ ಭಾರತ ಭೇಟಿ ಆರಂಭವಾದದ್ದೇ ಕರ್ನಾಟಕದ ತುತ್ತತುದಿಯ ನಗರ ಬೆಳಗಾವಿಗೆ ಕಾಲಿಡುವ ಮೂಲಕ. ಹನ್ನೆರಡು ದಿನಗಳ ಕಾಲ ಬೆಳಗಾವಿಯಲ್ಲಿ ನೆಲೆಸಿದ್ದ ಅವರು ಆ ಸಂದರ್ಭದಲ್ಲಿ ಸುತ್ತಮುತ್ತಲಿನ ಪ್ರದೇಶಗಳಿಗೆ ಭೇಟಿ ನೀಡಿದ್ದರು ಮತ್ತು ಹಲವಾರು ಜನರನ್ನು ಭೇಟಿಯಾಗಿದ್ದರು. ಅವರ ಅತಿಥೇಯರಾಗಿದ್ದ ನ್ಯಾಯವಾದಿ ಸದಾಶಿವ ಭಾಟೆಯವರ ಮಗ ಗಣೇಶ ಭಾಟೆ ಹಾಗೂ ಹರಿಪಾದ ಮಿತ್ರ ಎಂಬ ಸರಕಾರಿ ಅಧಿಕಾರಿ ದಾಖಲಿಸಿರುವ ಸಂಗತಿಗಳು ಓದುಗರ ಮನಸೆಳೆಯುತ್ತವೆ. ಸ್ವಾಮೀಜಿಯವರ ಬೆಳಗಾವಿ ಭೇಟಿ ಕರ್ನಾಟಕದ ಆಧುನಿಕ ಇತಿಹಾಸದ ಅವಿಸ್ಮರಣೀಯ ಘಟನೆಗಳಲ್ಲೊಂದು.

ಸ್ವಾಮೀಜಿಯವರು ಭಾಟೆಯವರ ಅತಿಥಿಯಾಗಿದ್ದ ಸಂದರ್ಭದಲ್ಲಿ ಹನ್ನೆರಡು ವರ್ಷ ಪ್ರಾಯದ ಹುಡುಗನಾಗಿದ್ದ ಗಣೇಶ ಭಾಟೆ ಮುಂದಿನ ದಿನಗಳಲ್ಲಿ ವಿದ್ವಾಂಸರಾಗಿ ಹೆಸರು ಗಳಿಸಿದ್ದರು. ಅವರು ಸ್ವಾಮೀಜಿಯವರ ಬಗ್ಗೆ ದಾಖಲಿಸಿರುವ ಸಂಗತಿಗಳು ನಿಜಕ್ಕೂ ರೋಚಕ. ಅವರು ಬರೆದಿರುವ ಸ್ವಾಮೀಜಿಯವರ ವೇಷಭೂಷಣ ಮತ್ತು ನಡವಳಿಕೆ ಇತರ ಸನ್ಯಾಸಿಗಳ ಹಾಗೆ ಇರದೇ ಇದ್ದುದು ಅವರ ಮನೆಯವರಲ್ಲಿ ಮೊದಮೊದಲು ಗೊಂದಲ ಮೂಡಿಸಿತ್ತು. ಆದರೆ, ಹತ್ತು ಹಲವು ವಿಷಯಗಳ ಬಗ್ಗೆ ಈ ಯುವ ಸನ್ಯಾಸಿ ಹೊಂದಿದ್ದ ತಿಳುವಳಿಕೆ, ಅವರ ಜ್ಞಾನದ ಮಟ್ಟ, ಇಂಗ್ಲಿಷ್ ಭಾಷೆಯ ಮೇಲಿನ ಹಿಡಿತ ಮತ್ತು ಸಂಸ್ಕೃತದ ಆಳ ಜ್ಞಾನ ಅವರೆಲ್ಲರನ್ನೂ ಚಕಿತಗೊಳಿಸಲು ಹೆಚ್ಚಿನ ಸಮಯ ಹಿಡಿಯಲಿಲ್ಲ.

**ಗಣೇಶ ಭಾಟೆ ದಾಖಲಿಸಿರುವ ಕೆಲವೊಂದು ಘಟನೆಗಳು ಹೀಗಿವೆ:**

ಒಮ್ಮೆ ಬಾಲಕ ಗಣೇಶ ತಾನು ಓದುತ್ತಿದ್ದ ಸಂಸ್ಕೃತ ಪಾಠ ಅರ್ಥ ಮಾಡಿಕೊಳ್ಳಲು ಮತ್ತು ಕೆಲವೊಂದು ಶಬ್ದಗಳನ್ನು ಉಚ್ಚರಿಸಲು ಕಷ್ಟಪಡುತ್ತಿದ್ದ. ಅದನ್ನು ಗಮನಿಸಿದ ಸ್ವಾಮೀಜಿ ಕೂಡಲೇ ಆತನ ಪಾಠ ಪುಸ್ತಕ ತೆಗೆದುಕೊಂಡು, ಪಾಠವನ್ನು ಅತ್ಯಂತ ಸರಳ ರೀತಿಯಲ್ಲಿ ವಿವರಿಸಿದರು. ಜೊತೆಯಲ್ಲಿ, ಬಾಲಕ ಗಣೇಶನ ಸಂಸ್ಕೃತ ಪದಗಳ ಉಚ್ಚಾರಣೆ ಕೂಡ ಸುಧಾರಿಸಲು ಸಹಕರಿಸಿದರು. ಗಣೇಶ ಭಾಟೆ ಪ್ರಕಾರ ಸ್ವಾಮೀಜಿಯವರ ಸಂಸ್ಕೃತ ಜ್ಞಾನ ಅಪರಿಮಿತ. ಅವರು ಪ್ರಾಚೀನ ಪಂಡಿತ ಪರಂಪರೆಯಡಿ ಸಂಸ್ಕೃತಾಭ್ಯಾಸ ಮಾಡಿದ್ದರು. ಪಾಣಿನಿಯ ವ್ಯಾಕರಣ ಉದ್‌ಗ್ರಂಥ ಅಷ್ಟಾಧ್ಯಾಯವಂತೂ ಅವರಿಗೆ ಬಾಯಿಪಾಠವೇ ಆಗಿತ್ತು.

ಸ್ವಾಮೀಜಿಯಿಂದ ಬಹಳ ಪ್ರಭಾವಿತರಾಗಿದ್ದ ಭಾಟೆ, ತಮ್ಮ ಹಲವಾರು ಗೆಳೆಯರು ಮತ್ತು ಪರಿಚಿತರನ್ನು ಸ್ವಾಮೀಜಿಯವರ ಭೇಟಿಗೆ ಆಹ್ವಾನಿಸಿದ್ದರು. ಹೀಗೆ ಬಂದು ಸ್ವಾಮೀಜಿಯವರ ಜೊತೆಯಲ್ಲಿ ಹಲವಾರು ವಿಚಾರಗಳ ಬಗ್ಗೆ ಚರ್ಚಿಸಿದ್ದ ಬೆಳಗಾವಿಯ ಅನೇಕ ಗಣ್ಯ





Downloaded From:www.kpscvaani.com



> **ಬೆಳಗಾವಿಯಲ್ಲಿ ಕೆಲವೇ ದಿನಗಳ ಕಾಲ ತಂಗಿದ್ದ ಸ್ವಾಮಿ ವಿವೇಕಾನಂದರು ಹಿಂದೆ ಯಾರೂ ಮಾಡದ ರೀತಿಯಲ್ಲಿ ಜನರಲ್ಲಿ ರಾಷ್ಟ್ರೀಯತೆಯ ಭಾವನೆ ಜಾಗೃತಗೊಳ್ಳುವಂತೆ ಮಾಡಿದ್ದರು**

ವ್ಯಕ್ತಿಗಳು ಸಾಮಾಜಿಕ ಹಾಗೂ ಧಾರ್ಮಿಕ ವಿಚಾರಗಳ ಬಗ್ಗೆ ಅವರ ಆಳ ಜ್ಞಾನ ನೋಡಿ ಅಚ್ಚರಿಗೊಂಡಿದ್ದರು. ಕೆಲವೊಬ್ಬರು ತೀಕ್ಷ್ಣ ಪ್ರಶ್ನೆ ಕೇಳಿದಾಗಲೂ, ಸ್ವಾಮೀಜಿ ಸಮಾಧಾನದಿಂದಲೇ ಉತ್ತರಿಸಿದ್ದು, ಆಗಾಗ ಹಾಸ್ಯದ ಚಟಾಕಿ ಹಾರಿಸುತ್ತ ಕ್ಲಿಷ್ಟಕರ ಸಮಸ್ಯೆಗಳಿಗೂ ಸರಳ ಪರಿಹಾರ ಹೇಳಿದ್ದು ಮತ್ತು ಎಂತಹ ಸಂದರ್ಭದಲ್ಲೂ ಸಮಚಿತ್ತ ಕಳೆದುಕೊಳ್ಳದೇ ಇದ್ದುದು ಅವರ ಬಗೆಗಿನ ಗೌರವ ಇಮ್ಮಡಿಗೊಳಿಸಿತ್ತು.

ಅದೇ ರೀತಿ, ಬೆಳಗಾವಿ ಇಂಜಿನಿಯರ್ ಒಬ್ಬರ ಜೊತೆಯಲ್ಲಿ ಸ್ವಾಮೀಜಿ ಚರ್ಚೆಯಲ್ಲಿ ತೊಡಗಿದ್ದ ಘಟನೆಯೊಂದನ್ನು ಭಾಟೆ ದಾಖಲಿಸಿದ್ದು, ಅದು ಹೀಗಿದೆ: "ವೃತ್ತಿಯಿಂದ ಕಾರ್ಯಕಾರಿ ಇಂಜಿನಿಯರ್ ಆಗಿದ್ದ ಈತ ಓರ್ವ ಪಂಡಿತನೆಂದೇ ಬೆಳಗಾವಿಯಲ್ಲಿ ಹೆಸರು ಗಳಿಸಿದ್ದ. ಆತ ಒಬ್ಬ ವಿಚಿತ್ರ ರೀತಿಯ ಹಿಂದು ವ್ಯಕ್ತಿ. ಹೊರನೋಟಕ್ಕೆ ತೀರಾ ಸಂಪ್ರದಾಯಸ್ಥನಂತೆ ಕಾಣುತ್ತಿದ್ದ, ಒಳಗೊಳಗೇ ಸಂಶಯ ಹಾಗೂ ಆಧುನಿಕ ವಿಜ್ಞಾನದತ್ತ ಹೆಚ್ಚಿನ ಒಲವು ಹೊಂದಿದ್ದ. ಧರ್ಮ ಅಥವಾ ನಂಬಿಕೆ ಕೇವಲ ಸಂಪ್ರದಾಯವಾಗಿದ್ದು, ಅದೆಷ್ಟೋ ಕಾಲದಿಂದ ಅನೂಚಾನವಾಗಿ ಆಚರಿಸಲಾಗುತ್ತಿದೆ ಎಂದ ಒಂದೇ ಕಾರಣಕ್ಕೆ, ಅದಕ್ಕೆ ಮಾನ್ಯತೆ ದೊರೆತಿದೆ ವಿನಹ ಬೇರೇನೂ ಅಲ್ಲ ಎಂದೇ ಆತ ನಂಬಿದ್ದ. ಈ ಕಾರಣಕ್ಕಾಗಿ ಸ್ವಾಮೀಜಿ ತನ್ನ ವಿಚಾರಗಳ ಪ್ರತಿರೋಧಿ ಎಂದೇ ಆತ ಪರಿಗಣಿಸಿದ್ದ. ಹೀಗಾಗಿ, ಒಮ್ಮೆ ಸ್ವಾಮೀಜಿಯವರ ಜೊತೆಯಲ್ಲಿ ವಾದಿಸುತ್ತಿರುವಾಗ ಆತ ಕೆರಳಿದ ಮತ್ತು ಒರಟಾಗಿ ಅಲ್ಲದಿದ್ದರೂ, ಅಸೌಜನ್ಯತೆಯಿಂದ ವರ್ತಿಸಿದ. ಇದನ್ನು ನನ್ನ ತಂದೆ ವಿರೋಧಿಸಿದರು. ಇಷ್ಟಾದರೂ, ಶಾಂತರಾಗಿಯೇ ಇದ್ದ ಸ್ವಾಮೀಜಿ 'ಪರವಾಗಿಲ್ಲ ಬಿಡಿ' ಎಂದು ನಗುತ್ತಲೇ ಹೇಳಿದರು. ತಮ್ಮ ಉದ್ದೇಶ ಯಾರನ್ನೂ ವಾದದಲ್ಲಿ ಕೆಡವುದಲ್ಲ. ಬದಲಾಗಿ, ಹಿಂದೂ ಧರ್ಮದ ನೈಜ್ಯ ತಿರುಳು ಮತ್ತು ವೇದಾಂತದ ಸಾರವನ್ನು ಜನರಿಗೆ ತಲುಪಿಸುವುದೇ ಆಗಿದೆ ಎಂದವರು ಆ ಬಳಿಕ ಹೇಳಿದರು.

ಮೂರು ದಿನಗಳ ನಂತರ, ಅಂದರೆ, ಅಕ್ಟೋಬರ್ 18ರಂದು ಭಾಟೆ ಸ್ವಾಮೀಜಿಯವರನ್ನು ಅರಣ್ಯ ಇಲಾಖೆ ಅಧಿಕಾರಿಯಾಗಿದ್ದ ತಮ್ಮ ಗೆಳೆಯ ಹಿರಿಪಾದ ಮಿತ್ರ ಅವರ ಮನೆಗೆ ಕರೆದೊಯ್ಯುತ್ತಾರೆ. ಸುಶಿಕ್ಷಿತ ಹಾಗೂ ಹೃದಯವಂತನಾಗಿದ್ದ ಆತ ನಾಸ್ತಿಕ. ಮೇಲಾಗಿ, ಸನ್ಯಾಸಿಗಳೆಂದರೆ ಕಾವಿ ವಸ್ತ್ರ ಧರಿಸುವ ಕಪಟಿಗಳೆಂದೇ ಜರಿಯುತ್ತಿದ್ದ ಮನುಷ್ಯ. ದೇವರು ಹಾಗೂ ಧರ್ಮದ ಕುರಿತು ಕೂಡ ಆತನಿಗೇ ಅಪಾರ ಸಂಶಯ. ಆದರೆ, ಸ್ವಾಮೀಜಿ ಭೇಟಿಯ ಬಳಿಕ ಈ ವಿಷಯದಲ್ಲಿ ತನ್ನ ಭಾವನೆ ಹೇಗೆ ಬದಲಾಯಿತು ಎಂದು ಅವರೇ ಹೇಳಿಕೊಂಡಿದ್ದಾರೆ. ಅವರು ತಮ್ಮ ದಿನಚರಿಯಲ್ಲಿ ಬರೆದಿರುವಂತೆ, "ಕಟ್ಟುಮಸ್ತಾದ ಹಾಗೂ ಪ್ರಸನ್ನವದನ ಯುವ ಸನ್ಯಾಸಿಯೊಬ್ಬ ವಕೀಲರಾಗಿದ್ದ ನನ್ನ ಗೆಳೆಯರೊಬ್ಬರ ಜೊತೆಯಲ್ಲಿ ನನ್ನನ್ನು ಕಾಣಲು ಬಂದಿದ್ದ. ಶಾಂತಚಿತ್ತನಾಗಿದ್ದ ಆತನ ಕಣ್ಣುಗಳಲ್ಲಿ ಕಾಂತಿಯಿತ್ತು. ಆತ ಕಾವಿ ಧರಿಸಿದ್ದರೂ, ಗಡ್ಡ-ಮೀಸೆ ನುಣ್ಣಗೆ ಬೋಳಿಸಿದ್ದ ಮತ್ತು ಕಾಲಿನಲ್ಲಿ ಮರಾಠಾ ಪಾದರಕ್ಷೆ ಧರಿಸಿದ್ದ." ಆದರೂ, ಮಿತ್ರ ಸ್ವಾಮೀಜಿಯವರನ್ನು ಅನುಮಾನದ ದೃಷ್ಟಿಯಿಂದಲೇ ನೋಡಿದ್ದ. ಮೇಲಾಗಿ, ಈ ಸನ್ಯಾಸಿ ಕೂಡ ಬಂಗಾಳಿ ಎಂದು ತಿಳಿದ ಕೂಡಲೇ ಆತ, ಓಹೋ!



Downloaded From:www.kpscvaani.com

ಈತ ಬಂದಿರುವುದು ನನ್ನಲ್ಲಿ ಏನನ್ನಾದರೂ ಬೇಡಲು ಅಥವಾ ಓರ್ವ ಮರಾಠಿ ಗೃಹಸ್ಥರ ಜೊತೆಯಲ್ಲಿ ವಾಸಿಸುವುದು ಕಷ್ಟವಾಗುತ್ತಿದೆ, ತನ್ನನ್ನು ನಿನ್ನ ಮನೆಗೆ ಕರೆದೊಯ್ದು ಊಟ ಹಾಕು ಎಂದು ಅಂಗಲಾಚಲು ಎಂದೇ ಆತ ಮೊದಲಿಗೆ ಭಾವಿಸಿದ್ದ.

ಇಷ್ಟಾದರೂ, ಆತ ವಿವೇಕಾನಂದರನ್ನು ಬರಮಾಡಿಕೊಂಡ. ಆದರೆ, ಸ್ವಾಮೀಜಿಯವರ ಜೊತೆಯಲ್ಲಿ ಚರ್ಚೆಗೆ ತೊಡಗುತ್ತಿದ್ದಂತೆ, ಈ ವ್ಯಕ್ತಿ ಸಾಮಾನ್ಯನಲ್ಲ. ತನಗಿಂತ ಸಾವಿರ ಪಟ್ಟು ಮಿಗಿಲು ಎಂದು ಆತನಿಗೆ ಮನದಟ್ಟಾಯಿತು. ಸ್ವಾಮೀಜಿ ಆತನಿಂದ ಏನನ್ನೂ ಅಪೇಕ್ಷಿಸಲಿಲ್ಲ. ಇಷ್ಟೇ ಅಲ್ಲದೆ, ಆತ ತನ್ನ ಅತಿಥಿಯಾಗಿ ಉಳಿದುಕೊಳ್ಳುವಂತೆ ಕೇಳಿಕೊಂಡಾಗಲೂ, "ಮರಾಠಿ ವ್ಯಕ್ತಿಯ ಮನೆಯಲ್ಲಿ ನಾನು ಸಂತೋಷದಿಂದ ಇದ್ದೇನೆ. ಒಬ್ಬ ಬಂಗಾಳಿ ಸಿಕ್ಕಿದ ಎಂದು ನಾನು ಆತನ ಮನೆಯನ್ನು ಬಿಟ್ಟರೆ, ಆತನಿಗೆ ನೋವಾಗುತ್ತದೆ. ಮೇಲಾಗಿ, ಅವರ ಇಡೀ ಕುಟುಂಬ ನನ್ನನ್ನು ಬಹಳ ಪ್ರೀತಿ ಮತ್ತು ಆದರದಿಂದ ನೋಡಿಕೊಳ್ಳುತ್ತಿದೆ. ಈ ಬಗ್ಗೆ ನಾನು ಅನಂತರ ಯೋಚಿಸಿ ಹೇಳುತ್ತೇನೆ" ಎಂದು ಸ್ವಾಮೀಜಿ ಖಡಾಖಂಡಿತವಾಗಿ ಹೇಳಿದರು. ಆದರೆ. ಮರುದಿನ ಬೆಳಗ್ಗಿನ ಉಪಹಾರಕ್ಕೆ ಬರಲು ಸ್ವಾಮೀಜಿ ಒಪ್ಪಿದರು.

ಮರುದಿನ ಬೆಳಗ್ಗೆ ಆರು ಗಂಟೆಯಿಂದ ಸ್ವಾಮೀಜಿ ಬರುವುದನ್ನೇ ಹರಿಪಾದ ಮಿತ್ರ ಎದುರು ನೋಡುತ್ತಿದ್ದ. ಆದರೆ, ಗಂಟೆ ಎಂಟಾದರೂ, ಸ್ವಾಮೀಜಿ ಬರಲೇ ಇಲ್ಲ. ತೀರಾ ಕಳವಳಗೊಂಡ ಆತ ಏನಾಗಿದೆ ವಿಚಾರಿಸೋಣ ಎಂದು ನೇರವಾಗಿ ಭಾಟೆ ಮನೆಗೆ ಹೋಗುತ್ತಾನೆ. ಅಲ್ಲಿಗೆ ಹೋದ ಆತನಿಗೆ ಆಶ್ಚರ್ಯವೇ ಕಾದಿತ್ತು. ಭಾಟೆ ಮನೆಯಲ್ಲಿ ಸ್ವಾಮೀಜಿ ಸುತ್ತಲೂ ಜನಜಂಗುಳಿಯೇ ನೆರೆದಿದೆ. ಮಿತ್ರ ಕೂಡ ಸ್ವಾಮೀಜಿಗೆ ವಂದಿಸಿ ಅಲ್ಲೊಂದೆಡೆ ಕೂತ. ನೆರೆದಿದ್ದ ಪ್ರತಿಯೊಬ್ಬರಿಂದ ವಿವಿಧ ವಿಚಾರಗಳ ಬಗ್ಗೆ ಪ್ರಶ್ನೆಗಳ ಸುರಿಮಳೆ. ಸ್ವಾಮೀಜಿ ಕೂಡ ಅಷ್ಟೇ ಶಾಂತಚಿತ್ತರಾಗಿ ಎಲ್ಲರ ಪ್ರಶ್ನೆಗಳಿಗೆ ನಿರರ್ಗಳವಾಗಿ ಇಂಗ್ಲೀಷ್, ಹಿಂದಿ, ಬಂಗಾಳಿ ಅಥವಾ ಸಂಸ್ಕೃತದಲ್ಲಿ ಉತ್ತರ ನೀಡುತ್ತಿದ್ದರು. ಅವರ ವಿದ್ವತ್ತು ಎಲ್ಲರನ್ನೂ ದಂಗುಬಡಿಸಿತ್ತು.

ಅಲ್ಲಿ ನೆರೆದಿದ್ದವರೆಲ್ಲರೂ ಚದುರಿದಾಗ ಗಂಟೆ ಹತ್ತಾಗಿತ್ತು. ಹರಿಪಾದ ಮಿತ್ರರತ್ತ ನೋಡಿದ ಸ್ವಾಮೀಜಿ "ನಾನು ಹೇಳಿದ ಪ್ರಕಾರ ಬಾರದೇ ಇದ್ದುದಕ್ಕೆ ನೀವು ನನ್ನನ್ನು ಕ್ಷಮಿಸುತ್ತೀರೆಂದು ಭಾವಿಸುತ್ತೇನೆ. ಇಷ್ಟೊಂದು ಜನರಿಗೆ ಬೇಸರ ಉಂಟುಮಾಡಿ ನಾನು ಇಲ್ಲಿಂದ ಹೊರಟು ಬರಲು ಹೇಗೆ ಸಾಧ್ಯ?" ಎಂದರು. ತನ್ನ ಮನೆಗೆ ಬಂದು ಅತಿಥಿಯಾಗಿ ಉಳಿದುಕೊಳ್ಳುವಂತೆ ಈ ಸಂದರ್ಭದಲ್ಲಿ ಹರಿಪಾದ ಮಿತ್ರ ಇನ್ನೊಮ್ಮೆ ಸ್ವಾಮೀಜಿಯನ್ನು ಒತ್ತಾಯಿಸಿದ. "ನಾನು ಬರಬಹುದು ಆದರೆ, ಭಾಟೆ ಅನುಮತಿಯಿತ್ತರೆ ಮಾತ್ರ" ಎಂದು ಸ್ವಾಮೀಜಿ ಹೇಳಿದರು. ಹರಿಪಾದ ಮಿತ್ರ ಪರಿಪರಿಯಾಗಿ ಕಾಡಿ, ಬೇಡಿದ ಬಳಿಕ ಸ್ವಾಮೀಜಿಯವರನ್ನು ಬೀಳ್ಕೊಡಲು ಭಾಟೆ ಕುಟುಂಬ ಒಪ್ಪಿಕೊಂಡಿತು. ಸ್ವಾಮೀಜಿಯವರ ಸಾಂಗತ್ಯದಲ್ಲಿ ಹರಿಪಾದ ಮಿತ್ರ ಹಲವು ವಿಚಾರಗಳನ್ನು ತಿಳಿದುಕೊಂಡ. ಅದೆಷ್ಟೋ ಕಾಲದಿಂದ ಆತನಲ್ಲಿ ಮನೆಮಾಡಿಕೊಂಡಿದ್ದ ಸಂಶಯಗಳು ದೂರವಾದವು, ತಪ್ಪು ಕಲ್ಪನೆಗಳು ಮಾಯವಾದವು. ಹೀಗೆಯೇ ಒಂದು ದಿನ ಅವರಿಬ್ಬರೂ ಚರ್ಚಿಸುತ್ತಿದ್ದಾಗ, ತಮಗೆ ಮುಂದಿನ ವರ್ಷ (1893) ಅಮೇರಿಕಾದ ಚಿಕಾಗೋದಲ್ಲಿ ನಡೆಯಲಿರುವ ವಿಶ್ವ ಧಾರ್ಮಿಕ ಸಮ್ಮೇಳನದಲ್ಲಿ ಭಾಗವಹಿಸುವ ಇರಾದೆ ಇದೆ ಎಂದು ಸ್ವಾಮೀಜಿ ಹೇಳಿದ್ದಾಗಿ ಹರಿಪಾದ ಮಿತ್ರ ಉಲ್ಲೇಖಿಸಿದ್ದಾರೆ.

ಹೀಗೆ, ಹನ್ನೆರಡು ದಿನಗಳ ಕಾಲ ಬೆಳಗಾವಿಯಲ್ಲಿದ್ದ ಸ್ವಾಮೀಜಿ ಅಕ್ಟೋಬರ್ 27ರಂದು ಇಲ್ಲಿಂದ ಗೋವಾಕ್ಕೆ ಹೊರಡಲು ಸಿದ್ಧರಾದರು. ಬೆಳಗಾವಿಯ ಹೆಸರಾಂತ ವೈದ್ಯ ವಿ. ವಿ. ಶಿರಗಾಂವ್ಕರ್ ಮಡಗಾಂವ್ ನಗರದ ತಮ್ಮ ಮಿತ್ರ ಸುಬ್ರಾಯ ನಾಯಕ್ ಅವರನ್ನು ಸಂಪರ್ಕಿಸಿ ಗೋವಾದಲ್ಲಿ ಸ್ವಾಮೀಜಿಯವರ ವಾಸಕ್ಕೆ ವ್ಯವಸ್ಥೆ ಮಾಡಿದ್ದರು. ಹರಿಪಾದ ಮಿತ್ರ ಅವರು ರೈಲು ಟಿಕೇಟ್ ತೆಗೆಸಿಕೊಟ್ಟಿದ್ದರು ಮತ್ತು ರೈಲ್ವೇ ನಿಲ್ದಾಣದ ತನಕ ಬಂದು ತಮ್ಮ ಗುರುವನ್ನು ಬೀಳ್ಕೊಟ್ಟರು. ಹೀಗೆ, ಕರ್ನಾಟಕ ಗಡಿನಗರ ಬೆಳಗಾವಿಯಲ್ಲಿ ತಮ್ಮ ಅಚ್ಚಳಿಯದ ಹೆಜ್ಜೆಗುರುತುಗಳನ್ನು ಬಿಟ್ಟ ಸ್ವಾಮೀಜಿ ತಮ್ಮ ಗುರಿ ಸಾಧನೆಯ ಪಥದಲ್ಲಿ ಮುನ್ನಡೆದರು. ಅವರ ಬೆಳಗಾವಿ ಭೇಟಿ ಕರ್ನಾಟಕದ ಇತಿಹಾಸಕ್ಕೆ ಹೊಸ ಅಧ್ಯಾಯವೊಂದನ್ನು ಸೇರಿಸಿತು.

ತಾವು ಬೆಳಗಾವಿಯಲ್ಲಿ ಇದ್ದ ಸಮಯದಲ್ಲಿ ಪ್ರಸಿದ್ಧ ಸಂತ ಬಾಳೆಕುಂದ್ರಿಯ ಪಂತ ಮಹಾರಾಜ ಮತ್ತು ದತ್ತವಾಡ ಗ್ರಾಮದಲ್ಲಿ ನೆಲೆಸಿದ್ದ ನಾಥ ಸಂಪ್ರದಾಯದ ಸನ್ಯಾಸಿ ಬಾಬಾ ಮಹಾರಾಜ ಅವರನ್ನು ಕೂಡ ಭೇಟಿಯಾಗಿ ಆಧ್ಯಾತ್ಮಿಕ ವಿಚಾರ ಚರ್ಚೆ ಕೂಡ ನಡೆಸಿದ್ದರು. ಆಗಿನ ಕಾಲದ ಬೆಳಗಾವಿಯ ಪ್ರಸಿದ್ಧ ಛಾಯಾಚಿತ್ರಗ್ರಾಹಕ ಗೋವಿಂದ ಶ್ರೀನಿವಾಸ ವೇಲಿಂಗ್ ಅವರು ಸೆರೆಹಿಡಿದಿದ್ದ ಸ್ವಾಮೀಜಿಯವರ ಛಾಯಾಚಿತ್ರ ಇಂದು ಅವರ ಅಪರೂಪದ ಹಾಗೂ ಅತೀ ಹೆಚ್ಚು ಬೇಡಿಕೆಯಿರುವ ಛಾಯಾಚಿತ್ರ ಎನಿಸಿದೆ.

ಸದಾಶಿವ ಭಾಟೆಯವರ ಮನೆಯು ನಗರದ ರಸಿಲ್ದಾರ್ ಗಲ್ಲಿಯಲ್ಲಿ ಇದ್ದರೆ, ಹರಿಪಾದ ಮಿತ್ರರ ಮನೆ ಕಿಲ್ಲಾ (ಕೋಟೆ) ಪ್ರದೇಶದಲ್ಲಿದೆ. ಇಂದು ಈ ಎರಡೂ ಕಟ್ಟಡಗಳು ನಗರದ ಪ್ರಮುಖ ಐತಿಹಾಸಿಕ ಸ್ಮಾರಕಗಳೆನಿಸಿವೆ. ಸ್ವಾಮಿ ವಿವೇಕಾನಂದರು ತಮ್ಮ ವಿಚಾರಗಳ ಮೂಲಕ ಇಲ್ಲಿನ ಜನರ ಮನಸ್ಸು ಗೆದ್ದಿದ್ದರು ಮತ್ತು ಅನೇಕರು ಸಮಾಜಮುಖಿ ಜೀವನ ನಡೆಸಲು ಅವರಿಂದ ಪ್ರೇರಣೆ ಪಡೆದುಕೊಂಡಿದ್ದರು ಎಂದು ಹೇಳಲಾಗುತ್ತದೆ. 'ಬೆಳಗಾವಿಯಲ್ಲಿ ಕೆಲವೇ ದಿನಗಳ ಕಾಲ ತಂಗಿದ್ದ ಸ್ವಾಮಿ ವಿವೇಕಾನಂದರು ಹಿಂದೆ ಯಾರೂ ಮಾಡದ ರೀತಿಯಲ್ಲಿ ಜನರಲ್ಲಿ ರಾಷ್ಟ್ರೀಯತೆಯ ಭಾವನೆ ಜಾಗೃತಗೊಳ್ಳುವಂತೆ ಮಾಡಿದ್ದರು', ಎಂದು ಇತಿಹಾಸಕಾರ ಕೆ. ಆರ್. ಬಸವರಾಜು ತಮ್ಮ ಲೇಖನವೊಂದರಲ್ಲಿ ಉಲ್ಲೇಖಿಸಿದ್ದಾರೆ.

ಸ್ವಾಮಿ ವಿವೇಕಾನಂದರಂತಹ ವ್ಯಕ್ತಿಗೆ ಆತಿಥ್ಯ ನೀಡಿದ್ದ ಭಾಟೆ ಹಾಗೂ ಹರಿಪಾದ ಮಿತ್ರ ನಿಜಕ್ಕೂ ಧನ್ಯರು. ಸ್ವಾಮಿ ವಿವೇಕಾನಂದರ ಬೆಳಗಾವಿ ಭೇಟಿಯನ್ನು ಜನರು ಇಂದಿಗೂ ಸ್ಮರಿಸುತ್ತಾರೆ ಮತ್ತು ಅಂತಹ ಸಂದರ್ಭದಲ್ಲಿ ಭಾಟೆ ಮತ್ತು ಮಿತ್ರರ ಹೆಸರು ಕೂಡ ಪ್ರಸ್ತಾಪವಾಗದೇ ಇರುವುದಿಲ್ಲ. ಈ ಮೂಲಕ ಅವರಿಬ್ಬರ ಹೆಸರೂ ಇತಿಹಾಸದ ಪುಟಗಳಲ್ಲಿ ಅಜರಾಮರಗೊಂಡಿದೆ.

ರಾಮಕೃಷ್ಣ ಮಿಶನ್ ಸಂಸ್ಥೆ ಕೆಲವು ವರ್ಷಗಳ ಹಿಂದೆ ಈ ಎರಡೂ ಮನೆಗಳನ್ನು ತನ್ನ ಸುಪರ್ದಿಗೆ ತೆಗೆದುಕೊಂಡು ಸ್ಮಾರಕಗಳನ್ನಾಗಿ ಪರಿವರ್ತಿಸಿದ್ದು, ಅವೆರಡೂ ಇಂದು ಜನಾಕರ್ಷಣೆಯ ಕೇಂದ್ರಗಳಾಗಿವೆ.



Downloaded From:www.kpscvaani.com






# ಅಂಚೆ ಚೀಟಿಗಳ ಹಬ್ಬ 'ಕರ್ನಾಫೆಕ್ಸ್'ಗೆ ಸಜ್ಜುಗೊಂಡ ಬೆಂಗಳೂರು

**ಕರ್ನಾಟಕದ ಉದ್ದಗಲಕ್ಕೂ ಹರಡಿರುವ ಅಂಚೆ ಚೀಟಿ ಸಂಗ್ರಹಕಾರರಿಗೆ ಬೆಂಗಳೂರಿನಲ್ಲಿ ಜನವರಿ 5 ರಿಂದ ಮೂರು ದಿನಗಳ ಸಂಭ್ರಮದ ಉತ್ಸವ.**

ಎನ್. ಜಗನ್ನಾಥ ಪ್ರಕಾಶ್

ರಾಜಧಾನಿ ಬೆಂಗಳೂರಿಗೆ ಮತ್ತೆ ಹಬ್ಬ ಬರುತ್ತಿದೆ. ಸರಿಸುಮಾರು ದಶಕದ ಬಳಿಕ ಉದ್ಯಾನ ನಗರಿಗೆ ಬರುತ್ತಿರುವ ರಾಜ್ಯಮಟ್ಟದ 'ಕರ್ನಾಫೆಕ್ಸ್' ಹೊಸ ವರ್ಷದ ಆರಂಭದಲ್ಲೇ ನಡೆಯಲಿದ್ದು, ಅಂಚೆ ಚೀಟಿ ಪ್ರಿಯರಿಗೆ, ವಿಶೇಷವಾಗಿ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಖಂಡಿತವಾಗಿ ಹಿಗ್ಗು ತರಲಿದೆ.

ವಿಶ್ವದ ಅತಿದೊಡ್ಡ ಹವ್ಯಾಸವೆಂದು ಖ್ಯಾತಿ ಹೊಂದಿರುವ ಅಂಚೆ ಚೀಟಿ ಸಂಗ್ರಹಣೆಗೆ ಪೂರಕವಾಗಿ ಅಂಚೆ ಇಲಾಖೆ ವ್ಯವಸ್ಥೆ ಮಾಡುವ ಅಂಚೆ ಚೀಟಿಗಳ ಹಬ್ಬ ಇದೇ ಜನವರಿ 5 ರಿಂದ 8 ರವರೆಗೆ ಕಸ್ತೂರ್ ಬಾ ರಸ್ತೆಯ ಶ್ರೀ ಕಂಠೀರವ ಒಳಾಂಗಣ ಕ್ರೀಡಾಂಗಣದಲ್ಲಿ ಏರ್ಪಾಡಾಗಿದೆ.

ಕರ್ನಾಟಕದ ಉದ್ದಗಲಕ್ಕೂ ಹರಡಿರುವ ಅಂಚೆ ಚೀಟಿ ಸಂಗ್ರಹಕಾರರಿಗೆ 'ಕರ್ನಾಫೆಕ್ಸ್' ಎಂದರೆ ಸಂಭ್ರಮದ ಉತ್ಸವ. ಬೃಹತ್ ಕ್ರೀಡಾಂಗಣದಲ್ಲಿ 600ಕ್ಕೂ ಹೆಚ್ಚು ಪ್ರದರ್ಶಿಕೆಗಳು






Downloaded From:www.kpscvaani.com




**ವೈವಿಧ್ಯಮಯ ಅಂಚೆ ಚೀಟಿಗಳ ಪ್ರದರ್ಶನ**

ಚರಿತ್ರೆ, ಸಂಸ್ಕೃತಿ, ಕಲೆ ಕುರಿತು ಜಗತ್ತಿನಾದ್ಯಂತ ಬಿಡುಗಡೆಗೊಂಡಿರುವ ವೈವಿಧ್ಯಮಯ ಅಂಚೆ ಚೀಟಿಗಳು ವಿಶೇಷ ಲಕೋಟೆಗಳು, ಅಂಚೆ ದಸ್ತಾವೇಜುಗಳು ಕಾಯಂ ಮೊಹರುಗಳ ಪ್ರದರ್ಶನ ಮತ್ತು ಸ್ಪರ್ಧೆಗಳೊಂದಿಗೆ ಅನೇಕ ರಾಷ್ಟ್ರೀಯ ಅಂತರರಾಷ್ಟ್ರೀಯ ಪ್ರದರ್ಶನಗಳಲ್ಲಿ ಪಾಲ್ಗೊಂಡು ಮೆಚ್ಚುಗೆ ಪಡೆದ ಪ್ರದರ್ಶಿಕೆಗಳನ್ನು ಇಲ್ಲಿ ನೋಡುವ ಅವಕಾಶ ಸಿಗಲಿದೆ.

ಅನಾವರಣಗೊಳ್ಳಲಿರುವುದು ವಿಶೇಷ. ಪ್ರದರ್ಶಿಕೆಗಳ ಸಂಖ್ಯೆ ಇನ್ನೂ ಹೆಚ್ಚುವ ಸಾಧ್ಯತೆಗಳೂ ಇವೆ.

ಮೂರು ತಿಂಗಳುಗಳ ತಯಾರಿಕೆ ಬಳಿಕ, ತೆರೆದುಕೊಳ್ಳಲಿರುವ 'ಕರ್ನಾಫೆಕ್ಸ್' ಕೇವಲ ಪ್ರದರ್ಶನವಲ್ಲ. ಅಂಚೆ ಚೀಟಿ ಸಂಗ್ರಾಹಕರಿಗೆ, ಇದೊಂದು ದೊಡ್ಡ ಜ್ಞಾನ ಭಂಡಾರ. ಇಲ್ಲಿ ಅಂಚೆ ಚೀಟಿಗಳ ಸಂಗ್ರಾಹಕರಿಗೆ ವಿವಿಧ ಸ್ಪರ್ಧೆಗಳಿವೆ. ಅಂಚೆ ಚೀಟಿ ಇತಿಹಾಸದ ಬಗ್ಗೆ ಸ್ವಾರಸ್ಯಕರ ರಸಪ್ರಶ್ನೆ ಕಾರ್ಯಕ್ರಮಗಳಿವೆ.

ಹೊಸ ಅಂಚೆ ಲಕೋಟೆಗಳು ಹಾಗೂ ಸಚಿತ್ರ ಅಂಚೆ ಕಾರ್ಡುಗಳ ಬಿಡುಗಡೆ ಕಾರ್ಯಕ್ರಮಗಳ ಜತೆಗೆ ಪ್ರತಿದಿನ ಸಾಂಸ್ಕೃತಿಕ ಕಾರ್ಯಕ್ರಮಗಳ ರಸದೌತಣ ಇರಲಿದೆ. ಅಂಚೆ ಚೀಟಿ ಸಂಗ್ರಹಣೆ, ಈ ಹವ್ಯಾಸದ ಉಪಯೋಗಗಳು, ಸಮಕಾಲೀನ ಅಂಚೆ ಚೀಟಿಗಳ ಸಂಗ್ರಹ ಕುರಿತ ವಿಚಾರ ಸಂಕಿರಣ ಸೇರಿದಂತೆ ಅನೇಕ ಚಟುವಟಿಕೆಗಳು 'ಕರ್ನಾಫೆಕ್ಸ್'ನ ವೈಶಿಷ್ಟ್ಯವಾಗಿರುತ್ತದೆ.

ಕರ್ನಾಟಕ ರಾಜ್ಯದ ಹಲವು ಶಾಲಾ ಕಾಲೇಜುಗಳಲ್ಲಿ ಕರ್ನಾಫೆಕ್ಸ್ ಪೂರಕವಾಗಿ ನಡೆದ ಸ್ಪರ್ಧೆಗಳ ವಿಜೇತರಿಗೆ ಬಹುಮಾನ, ಪಾರಿತೋಷಕಗಳ ವಿತರಣೆಗೆ ಈ ಹಬ್ಬವೇ ವೇದಿಕೆ. ಅಂಚೆ ಚೀಟಿ ಮುದ್ರಣದ ನಾನಾ ಹಂತಗಳು, ಅಂಚೆ ಚೀಟಿ ಸಿದ್ಧತೆಗೆ ಕಲಾವಿದರ ನೆರವು, ಸ್ಥಳದಲ್ಲೇ ಅಂಚೆ ಚಿತ್ರಗಳ ರಚನೆ, ಇವೆಲ್ಲವನ್ನು ಅಂಚೆ ಚೀಟಿ ಉತ್ಸವದಲ್ಲಿ ನೋಡಲು ಲಭ್ಯ.

ಆಧುನಿಕ ಅಂಚೆ ವ್ಯವಸ್ಥೆ ಯುರೋಪ್‌ನಲ್ಲಿ ರೂಪುಗೊಳ್ಳುವುದಕ್ಕೂ ಮೊದಲು ಮೈಸೂರು ಅಂಚೆಯನ್ನು ಚಾಲನೆಗೊಳಿಸಿದ ಹೆಗ್ಗಳಿಕೆ ಹಿಂದಿನ ಮೈಸೂರು ಸಂಸ್ಥಾನಕ್ಕಿದೆ. ಮೈಸೂರು ಒಡೆಯರ್ ವಂಶದ ಚಿಕ್ಕದೇವರಾಜ ಒಡೆಯರ್ ಕಾಗದ ಪತ್ರಗಳ ರವಾನೆಗಾಗಿ 'ಅಂಚೆ ಭಕ್ಷಿ' ನೇತೃತ್ವದಲ್ಲಿ 1672ರ ಸುಮಾರಿಗೆ ವ್ಯವಸ್ಥಿತ ಅಂಚೆ ಇಲಾಖೆಯನ್ನು ಸ್ಥಾಪನೆ ಮಾಡಿದ್ದಕ್ಕೆ ಪುರಾವೆಗಳಿವೆ.

ಆಗ ದೇಶ ಆಳುತ್ತಿದ್ದ ಬ್ರಿಟಿಷ್ ಸರ್ಕಾರ ಕೂಡ ಮೈಸೂರು ಅಂಚೆ ಇಲಾಖೆಯ ಕಾರ್ಯಚಟುವಟಿಕೆಗಳನ್ನು ಮೆಚ್ಚಿಕೊಂಡಿದ್ದು ಅದರ ನೆರವನ್ನು ಕೆಲವು ಸಂದರ್ಭಗಳಲ್ಲಿ ಪಡೆದುಕೊಂಡಿದ್ದು ಕೂಡ ಉಲ್ಲೇಖನೀಯ. ವಿಭಾಗ, ಜಿಲ್ಲೆ, ತಾಲೂಕು, ಹೋಬಳಿ ಹಾಗೂ ಗ್ರಾಮಮಟ್ಟದಲ್ಲೂ ಅಂಚೆ ಬಟವಾಡೆ ಮಾಡುವ ರೂಢಿ ಮೈಸೂರು ಅಂಚೆ ಹೊಂದಿತ್ತು ಎಂಬುದು ಮೈಸೂರು ಸಂಸ್ಥಾನದ ಹೆಗ್ಗಳಿಕೆ.

ಬ್ರಿಟಿಷ್ ಸರ್ಕಾರ ತನ್ನದೇ ಆದ ಇಂಪಿರಿಯಲ್ ಅಂಚೆಯನ್ನು ಜಾರಿಗೊಳಿಸಿದಾಗ ಮೈಸೂರು ಅಂಚೆ ಕೂಡ ಅದರಲ್ಲೇ ಸೇರಿ ಹೋಗಿ ಅದು ನೇಪಥ್ಯಕ್ಕೆ ಸರಿದಿದ್ದು ಈಗ ಇತಿಹಾಸ. ಮಾನವ ನಾಗರಿಕತೆಯ ಉಗಮ ಹಾಗೂ ಬೆಳವಣಿಗೆ ಕುರಿತ ವಿವಿಧ ಹಂತಗಳನ್ನು ಪ್ರತಿಬಿಂಬಿಸುವ ಆಯಾ ರಾಜ್ಯ ದೇಶಗಳ ವಿಶೇಷಗಳನ್ನು ಹೊತ್ತು ತರುವ ಅಂಚೆ ಚೀಟಿಗಳು ಕೇವಲ ಪತ್ರಗಳ ರವಾನೆ ಸಾಧನೆಗಳಲ್ಲ. ಇವು ಮನುಷ್ಯರ ಪ್ರಗತಿಯ ಏಳುಬೀಳುಗಳನ್ನು ಹಿಡಿದಿಡುವ ಕೈಗನ್ನಡಿ.

ಮಾಹಿತಿ ತಂತ್ರಜ್ಞಾನ ಹೆಚ್ಚಿನ ಪ್ರಭಾವ ಹೊಂದಿರುವ ಇಂದಿನ ಕಾಲಘಟ್ಟದಲ್ಲೂ ಅಂಚೆ ಚೀಟಿಗಳ ಸಂಗ್ರಹಣಾ ಹವ್ಯಾಸ ಹೊಳಪು ಕಳೆದುಕೊಂಡಿಲ್ಲ. ಈಗಲೂ ಅಂಚೆ ಚೀಟಿಗಳ ಸಂಗ್ರಹಣಾ ಹವ್ಯಾಸವೇ ವಿಶ್ವದ ಹವ್ಯಾಸಗಳ ರಾಜ. ಪ್ರಪಂಚದಲ್ಲಿ ಅಂಚೆ ಚೀಟಿಗಳು ಜನರ ಬದುಕಿನಲ್ಲಿ ಸೇರಿಹೋಗಿವೆ. ಮೊದಮೊದಲು ರಾಜಮಹಾರಾಜರಿಗೆ ಮಾತ್ರ ಅಂಚೆ ಸೇವೆ ಲಭ್ಯವಿತ್ತು. ಕಾಲಕ್ರಮೇಣ ಅಂಚೆ ಜನ ಸಮುದಾಯದ ಅವಿಭಾಜ್ಯ ಅಂಗವಾಯಿತು.

ಅಂಚೆಗೆ ದೇಶಗಳ ಗಡಿ ಇಲ್ಲ. ಆಯಾ ದೇಶಗಳ ಅಗತ್ಯಗಳಿಗೆ ತಕ್ಕಂತ ವಿಷಯ ವಿಶೇಷಗಳನ್ನು ಮುದ್ರಣ ಹಾಗೂ ಅದಕ್ಕೊಂದು ಬೆಲೆ ಇಟ್ಟ ಸರ್ಕಾರಿ ವ್ಯವಸ್ಥೆ. ಕಾಗದ ಪತ್ರ ಹಾಗೂ ಇನ್ನಿತರ ಸಣ್ಣ ಪುಟ್ಟ ಸರಕುಗಳ ಸಾಗಣೆಗೆ ದರ ವಿಧಿಸಿ ಅಂಚೆ ಸೇವೆಯನ್ನು ಒದಗಿಸುತ್ತಿದ್ದವು. ಅಂದಾಜು 150 ವರ್ಷಗಳಿಂದ ಅಂಟು ಉಳ್ಳ ಪುಟ್ಟ ಪುಟ್ಟ ವರ್ಣರಂಜಿತ ಕಾಗದದ ತುಂಡುಗಳಿಗೆ ದರ ಇಟ್ಟು ಸೇವೆ ನೀಡುವುದು ಅನೂಚಾನವಾಗಿ ನಡೆದಿತ್ತು.

ಕೊರಿಯರ್, ಎಸ್.ಎಂ.ಎಸ್. ಇ–ಮೇಲ್‌ಗಳು ವ್ಯಾಪಕವಾಗಿ ಹಬ್ಬಿರುವುದರ ಪರಿಣಾಮ ಅಂಚೆ ಸೌಲಭ್ಯಗಳ ಉಪಯೋಗ ಕ್ರಮೇಣ ತಗ್ಗಿದ್ದರೂ ಹೊಸ ಅಂಚೆ ಚೀಟಿಗಳ ಮುದ್ರಣ ವಹಿವಾಟು ತಗ್ಗಿಲ್ಲ. ಅದೊಂದು ಬೃಹತ್ ಹವ್ಯಾಸವಾಗಿ ಬೆಳೆದು



Downloaded From:www.kpscvaani.com

ನಿಂತಿದ್ದು ಬಹುತೇಕ ಎಲ್ಲಾ ದೇಶಗಳೂ ತಮ್ಮ ಆರ್ಥಿಕತೆಗೆ ನೆರವಾಗುವ ಅಂಚೆ ಚೀಟಿ ಬಿಡುಗಡೆಯನ್ನು ನಿಲ್ಲಿಸಿಲ್ಲ. ನಿರಂತರವಾಗಿ ಹೆಚ್ಚಾಗುತ್ತಿರುವ ಅಂಚೆ ಚೀಟಿ ಹವ್ಯಾಸದಿಂದಾಗಿ ಅವುಗಳ ವಹಿವಾಟು ಎಲ್ಲಾ ದೇಶಗಳಲ್ಲೂ ಬೆಳೆದು ಭದ್ರವಾಗಿ ನೆಲೆಯೂರಿವೆ. ಕೊಟ್ಯಾಂತರ ರೂಗಳ ವ್ಯವಹಾರ ನಡೆಸುತ್ತಿದ್ದು ಅದನ್ನೆ ನಂಬಿಕೊಂಡವರ ಸಂಖ್ಯೆಯೂ ಹೆಚ್ಚಾಗಿಯೇ ಇದೆ. ಅಂಚೆ ಚೀಟಿಗಳ ಹರಾಜುಕಟ್ಟೆಗಳೇ ತಲೆ ಎತ್ತಿವೆ ಎಂದರೆ ಅವುಗಳ ಜನಪ್ರಿಯತೆ ಗೊತ್ತಾದೀತು.

ಸ್ವಾತಂತ್ರ್ಯ ಪೂರ್ವದಲ್ಲಿ ಬ್ರಿಟಿಷರೇ ತಮ್ಮ ದೇಶದ ಅಂಚೆ ವ್ಯವಸ್ಥೆಯನ್ನು ಇಲ್ಲಿ ಜಾರಿಗೊಳಿಸಿದರು. ಭಾರತ ಸ್ವಾತಂತ್ರ್ಯ ಪಡೆದ ನಂತರ 1947ರ ನವೆಂಬರ್ 1 ರಂದು ಮೂರೂವರೆ ಆಣೆಯ ಮೌಲ್ಯದ ರಾಷ್ಟ್ರಧ್ವಜವಿದ್ದ ಅಂಚೆ ಚೀಟಿ ಪ್ರಕಟಣೆ ಮೂಲಕ ಸ್ವಾತಂತ್ರ ಭಾರತದಲ್ಲಿ ಅಂಚೆ ಸೇವೆಗೆ ನಾಂದಿ ಹಾಡಿತು. ವಿಶ್ವದ ಎಲ್ಲಾ ದೇಶಗಳಲ್ಲೂ ಇರುವಂತೆ ಭಾರತದಲ್ಲೂ ಸ್ಮರಣಾರ್ಥ ಅಂಚೆ ಚೀಟಿಗಳು (ಕಮಾಮರೋಟೀವ್ ಸೀರೀಸ್) ಮತ್ತು ನಿಯತ ಅಂಚೆ ಚೀಟಿಗಳು (ಡೆಫನೇಟೀವ್ ಸೀರೀಸ್) ಪ್ರಕಟಣೆಗೊಂಡು ನಿರಂತರವಾಗಿ ಉಪಯೋಗಿಸಲ್ಪಡುತ್ತಿವೆ.

ನಿಯತ ಅಂಚೆ ಚೀಟಿಗಳು ಆಗಾಗ ಮುದ್ರಣವಾದರೆ ಸ್ಮರಣಾರ್ಥ ಅಂಚೆ ಚೀಟಿಗಳು ಸಾಂದರ್ಭಿಕವಾಗಿ ಬಿಡುಗಡೆಯಾಗುತ್ತವೆ. ಎರಡೂ ಬಗೆಯ ಅಂಚೆ ಚೀಟಿಗಳನ್ನು ಅಂಚೆ ಸೇವೆಗಾಗಿ ಬಳಸಲ್ಪಡುವುದು ರೂಢಿ. ಸ್ಮರಣಾರ್ಥ ಅಂಚೆ ಚೀಟಿಗಳು ಹೆಚ್ಚಾಗಿ ಅಂಚೆ ಚೀಟಿ ಸಂಗ್ರಹಕಾರರ ಕೈಸೇರುತ್ತವೆ.

ನಮ್ಮ ನಾಡಿಗೆ ಕರ್ನಾಟಕವೆಂದು ನಾಮಕರಣವಾಗಿ 5 ದಶಕಗಳು ಸಂದಿರುವ ಈ ಸಂದರ್ಭದಲ್ಲಿ ಕನ್ನಡ ನಾಡಿನ ಇತಿಹಾಸ, ಸಂಸ್ಕೃತಿಯನ್ನು ಪ್ರತಿಬಿಂಬಿಸುವ ವಿಶೇಷ ವಿಭಾಗವೊಂದು 'ಕರ್ನಾಫೆಕ್ಸ್'ನಲ್ಲಿ ಪ್ರದರ್ಶನಗೊಳ್ಳಲಿದೆ.

ಭಾರತ ಸ್ವಾತಂತ್ರ್ಯಾ ನಂತರ ತನ್ನದೇ ಆದ ಅಂಚೆ ಚೀಟಿಗಳನ್ನು ಮುದ್ರಿಸಿ ಆಯಾ ರಾಜ್ಯಗಳ ವೈವಿಧ್ಯಗಳನ್ನು, ವ್ಯಕ್ತಿ ವಿಷಯ ವಿಶೇಷಗಳನ್ನು ಒಳಗೊಂಡ ಅಂಚೆ ಚೀಟಿಗಳನ್ನು ಅಂಚೆ ಇಲಾಖೆ ಕಾಲಕಾಲಕ್ಕೆ ಬಿಡುಗಡೆ ಮಾಡುತ್ತಿದೆ.

ಕಳೆದ ಏಳು ದಶಕಗಳ ಅವಧಿಯಲ್ಲಿ ಕೇಂದ್ರ ಸರ್ಕಾರ ಬಿಡುಗಡೆ ಮಾಡಿರುವ ಅಂಚೆ ಚೀಟಿಗಳ ಸಂಖ್ಯೆ 3000ಕ್ಕೂ ಹೆಚ್ಚು. ಆದರೆ ನೆರೆರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕ ಕೇಂದ್ರಿತ ಅಂಚೆ ಚೀಟಿಗಳು ಬಹಳ ಕಡಿಮೆ. ಕರ್ನಾಟಕ ಕುರಿತ ಅಂಚೆ ಚೀಟಿಗಳ ಸಂಖ್ಯೆ ಶತಕಕ್ಕೂ ಇನ್ನೂ ಬಂದಿಲ್ಲ. ಕನ್ನಡ ನಾಡಿನಲ್ಲಿ ಜನಿಸಿ ದೇಶಕ್ಕೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಕೀರ್ತಿ ತಂದಿರುವ ಅನೇಕ ಸಂಸ್ಥೆ, ವ್ಯಕ್ತಿಗಳು ಇನ್ನೂ ಅಂಚೆ ಚೀಟಿಗಳಲ್ಲಿ ಕಾಣಿಸಿಕೊಂಡಿಲ್ಲ.

ದಾಸ ಶ್ರೇಷ್ಠರೆನ್ನಿಸಿಕೊಂಡ ಕನಕದಾಸರು, ಪುರಂದರದಾಸರು ಅಂಚೆ ಚೀಟಿಗಳಲ್ಲಿ ಕಾಣಿಸಿಕೊಂಡರು. ಸಮಾಜ ಸುಧಾರಕರಾಗಿ ಹೆಸರು ಮಾಡಿರುವ ಶಿಶುನಾಳ ಷರೀಫರು, ಕೈವಾರ ನಾರೇಯಣರು, ನಾಯಕನಟ್ಟಿ ತಿಪ್ಪೇರುದ್ರಸ್ವಾಮಿಗಳು, ಆರೂಢರು, ಅಲ್ಲಮ ಪ್ರಭು, ಅಕ್ಕಮಹಾದೇವಿ, ಅಂಬಿಗರ ಚೌಡಯ್ಯನವರು ಇನ್ನೂ ಅಂಚೆ ಚೀಟಿಗಳಲ್ಲಿ ಕಾಣಿಸಿಕೊಂಡಿಲ್ಲ.

ಬಸವಣ್ಣ, ಕಿತ್ತೂರು ಚೆನ್ನಮ್ಮ, ಮೈಲಾರ ಮಹಾದೇವ, ಟಿಪ್ಪು ಸುಲ್ತಾನ್ ಅವರುಗಳು ಅಂಚೆ ಚೀಟಿಗಳಲ್ಲಿದ್ದು, ಇದೀಗ ರಾಣಿ ಅಬ್ಬಕ್ಕ ದೇವಿ ಈ ಯಾದಿಯಲ್ಲಿ ಸ್ಥಾನ ಪಡೆದುಕೊಂಡಿರುವುದು ಸಮಾಧಾನದ ವಿಚಾರ.

ಮಲ್ಲಿಕಾರ್ಜುನ ಮನ್ಸೂರ್, ಗಂಗೂಬಾಯಿ ಹಾನಗಲ್, ಭೀಮಸೇನ ಜೋಶಿ, ಕುಮಾರ ಗಂಧರ್ವರು, ಅಂಚೆ ಚೀಟಿಗಳಲ್ಲಿ ಬಂದಿದ್ದರು. ಏಳುತಂತಿಗಳ ಪಿಟೀಲಿನಿಂದ ಖ್ಯಾತರಾದ ಟಿ. ಚೌಡಯ್ಯ, ವೀಣೆಯ ಮೋಡಿಕಾರ ದೊರೆಸ್ವಾಮಿ ಅಯ್ಯಂಗಾರ್, ಅಂಧರ ಪಾಲಿಗೆ ಸಂಗೀತ ಗುರುವಾದ ಗದಗದ ಪಂಚಾಕ್ಷರಿ ಗವಾಯಿಗಳು, ಸಂತ ಸಾಹಿತಿಗಳಾದ ಪಂಪ, ಕುಮಾರವ್ಯಾಸ, ಸರ್ವಜ್ಞ, ನಾಟಕ ರಂಗ ಚಿತ್ರರಂಗಗಳಲ್ಲಿ ಛಾಪು ಮೂಡಿಸಿದ ಗುಬ್ಬಿ ವೀರಣ್ಣ, ಹಂದಿಗನೂರು ಸಿದ್ಧರಾಮಪ್ಪ ಕೆ. ಹಿರಣ್ಣಯ್ಯ, ಎಂ.ವಿ.ಸುಬ್ಬಯ್ಯ ನಾಯ್ಡು, ಆರ್. ನಾಗೇಂದ್ರ ರಾವ್, ಪಂಡರಿಬಾಯಿ, ಅಮೀರ್ ಬಾಯಿ, ಬಿ.ವಿ.ಕಾರಂತ, ಬಿ. ಜಯಮ್ಮ, ಅಂತರರಾಷ್ಟ್ರೀಯ ಪ್ರಸಿದ್ಧಿ ಪಡೆದ ಪುಟ್ಟಣ್ಣ ಕಣಗಾಲ್, ಎನ್.ಲಕ್ಷ್ಮೀನಾರಾಯಣ್, ಸಿದ್ಧಲಿಂಗಯ್ಯ, ಫಾಲ್ಕೆ ಪ್ರಶಸ್ತಿ ಪುರಸ್ಕೃತ ವಿ.ಕೆ.ಮೂರ್ತಿ, ವಿಠ್ಠಲಾಚಾರ್ಯ, ಬಿ.ಆರ್.ಪಂತಲು,. ಡಿ. ಶಶಿಧರ್ ಸಿಂಗ್ ಮುಂತಾದವರುಗಳು ಅಂಚೆ ಚೀಟಿಗಳಲ್ಲಿ ಕಾಣಿಸಿಕೊಳ್ಳಬೇಕಿದೆ.


ಅನೇಕ ರಾಜ್ಯಗಳ ಮುಖ್ಯಮಂತ್ರಿಗಳು ಅಂಚೆ ಚೀಟಿಗಳಲ್ಲಿ ಕಾಣಿಸಿಕೊಂಡಿದ್ದರೂ ನಮ್ಮ ರಾಜ್ಯದ ಕೆಂಗಲ್ ಹನುಮಂತಯ್ಯ, ಹಿಂದುಳಿದ ವರ್ಗಗಳ ಹರಿಕಾರ ದೇವರಾಜ ಅರಸು, ರಾಮಕೃಷ್ಣ ಹೆಗಡೆ ಅವರುಗಳಿಗೆ ಹಾಗೆಯೇ ನಮ್ಮ ನಾಡಿನ ವಿಶ್ವವಿಖ್ಯಾತ ಐತಿಹಾಸಿಕ ಸ್ಥಳಗಳು, ಸಾಹಿತಿಗಳು, ಜಾನಪದ ಕಲೆಗಳಿಗೆ ಅಂಚೆ ಚೀಟಿಗಳಲ್ಲಿ ಸ್ಥಾನ ಸಿಗಬೇಕಿದೆ.

ಕರ್ನಾಟಕ ಅಂಚೆ ಚೀಟಿ ಸಂಗ್ರಹಕಾರರ ಕೂಟ ಕರ್ನಾಟಕ ಫಿಲಾಟಲಿ ಸಂಸ್ಥೆಗೆ ಈಗ 50 ವರ್ಷ. ದೇಶದ ಫಿಲಾಟಲಿ ಜಗತ್ತಿಗೆ ಕರ್ನಲ್ ಎಲ್.ಜಿ.ಶೆಣೈ, ಅನೇಕ ಅಂತಾರಾಷ್ಟ್ರೀಯ ಪ್ರಶಸ್ತಿ ಪುರಸ್ಕೃತೆ  ಡಾ. ಸೀತಾ ಬಲೇಜಾ, ಗ್ರಾಮಾಂತರ ಪ್ರದೇಶಗಳಲ್ಲಿ 2000ಕ್ಕೂ ಹೆಚ್ಚು ಅಂಚೆ ಚೀಟಿ ಪ್ರದರ್ಶನಗಳನ್ನು ಏರ್ಪಡಿಸಿರುವ ಮಾಲೂರು ಎಂ.ಆರ್.ಪ್ರಭಾಕರ್, ವಿಶ್ವ ಗಾಂಧಿ ಅಂಚೆ ಚೀಟಿ ಹಾಗೂ ಪರಿಕರ ಸಂಗ್ರಾಹಕ ಜಯಪ್ರಕಾಶ್ ಸರ್ದಾ, ಇಂಗ್ಲೆಡ್‌ನ ರಾಯಲ್ ಫಿಲಾಟಲಿ ಸೊಸೈಟಿಯ ಫೆಲೋ ಎಂ.ಎಸ್.ರಾಮು, ಪಿ.ಸಿ.ಸಿ. ರಾಷ್ಟ್ರೀಯ ಕಾರ್ಯಕಾರಿ ಸಮಿತಿ ಸದಸ್ಯರಾದ ಜಗನ್ನಾಥ ಮಣಿ, ಜಮೀರ್, ಚೈತನ್ಯದೇವ್, ಅಂತರರಾಷ್ಟ್ರೀಯ ಪ್ರಶಸ್ತಿ ಪುರಸ್ಕೃತರಾದ ಡೇನಿಯಲ್ ಮೊಂತಾರೋ, ಅಖಿಲ್ ರೆಡ್ಡಿ, ಸಾಕೇತ್, ಫಿಲಾಟಲಿ ಕುರಿತು ಅನೇಕ ಕೃತಿ ರಚಿಸಿರುವ ಸುಶೀಲ್ ಮೆಹ್ರಾ, ಬುದ್ಧ ಅಂಚೆ ಚೀಟಿ ಸಂಗ್ರಾಹಕ ಲೋಕೇಶ್ವರ ರಾವ್, ಶ್ರೀರಾಮ ಅಂಚೆ ಚೀಟಿ ಸಂಗ್ರಾಹಕಿ ಶ್ರೀದೇವಿ ಮುಂತಾದ ಪ್ರತಿಭಾವಂತ ಅಂಚೆ ಚೀಟಿ ಸಂಗ್ರಾಹಕರನ್ನು ನೀಡಿರುವ ದೇಶದ ಅಗ್ರಮಾನ್ಯ ಅಂಚೆ ಸಂಗ್ರಾಹಕರ ಸಂಸ್ಥೆ.

ವಿದ್ಯಾರ್ಥಿಗಳ ಯುವ ಸಮೂಹಕ್ಕೆ ಹಾಗೂ ಸಾರ್ವಜನಿಕರಿಗೆ ನಾಡಿನ ಸಾಂಸ್ಕೃತಿಕ ಹಾಗೂ ಸಾಮಾಜಿಕ ವೈವಿಧ್ಯಗಳನ್ನು, ಜ್ಞಾನವನ್ನು ಪರಿಚಯಿಸುವ 'ಕರ್ನಾಫೆಕ್ಸ್' ಕರ್ನಾಟಕದ ಅನೇಕ ಗಣ್ಯರು ಹಾಗೂ ವಿಷಯ ವಿಶೇಷಗಳನ್ನು ಅಂಚೆ ದಸ್ತಾವೇಜುಗಳಲ್ಲಿ ಒಳಗೊಳ್ಳುವಂತೆ ಮಾಡಲು ಒತ್ತಾಸೆ ನೀಡಲಿ ಎಂಬುದು ನನ್ನ ಆಶಯ. ■


Downloaded From:www.kpscvaani.com

# ಪದಬಂಧ-50



ವಿದ್ಯಾ ಎ. ಹಾಲಭಾವಿ

## ಎಡದಿಂದ ಬಲಕ್ಕೆ

1. ನಮ್ಮ ಭಾಷೆ ಕನ್ನಡದ ಕಂಪು ಈ ಸುಗಂಧ ದ್ರವ್ಯದಂತೆ! (3)
3. ಬೆದರಿದಾಗ ಹೊರ ಬಂದಿರುವ ಸ್ವೇದ! (3)
4. ನುಡಿಸುವ ಸಂಗೀತ ಸಾಧನ (2)
5. ಗೊಮ್ಮಟೇಶ್ವರನ ಮೂರ್ತಿ ಇರುವ ಊರು (3)
6. ಹಿಮ ಇಲ್ಲಿದೆ (2)
9. ಸುಗಮವಾಗಿ ಕಿತ್ತಿರುವ ಹೂವು (2)
10. ಗೋಳಗುಮ್ಮಟವಿರುವ ಊರು (5)
12. ಬಿಸಿಲಲ್ಲಿರುವ ಡೊಗರು ಕಾಣುತ್ತಿದೆಯೇ? (2)
13. ಪಗಡೆಯಾಟದಲ್ಲಿ ದಾಳಗಳಿಂದಸೂಚಿತವಾಗುವ ಸಂಖ್ಯೆ (2)
14. ದಾರದೊಳಗಿರುವ ಉದಾರಿ! (3)
15. ಪ್ರತ್ಯಯ ಸಹಿತವಾದ ಶಬ್ದ (2)
16. ಈತ ತಿರುಗಾಡುವವನು (3)
17. ಗಣಿಯ ಹತ್ತಿರ ಕಲಿತಿರುವ ಲೆಕ್ಕ ಶಾಸ್ತ್ರ (3)

## ಮೇಲಿಂದ ಕೆಳಕ್ಕೆ

1. ಹಸುವಿನ ಮರಿ (2)
2. ರೀತಿಯೊಡಗೂಡುವ ಜೋಡು ನುಡಿ (3)
3. ಚಳಿಗಾಲದ ಅಧಿವೇಶನ ನಡೆಯುವ ಜಿಲ್ಲೆ (4)
5. ಮಳೆಬಿಲ್ಲನ್ನು ಹೀಗೂ ಕರೆಯುತ್ತಾರೆ (5)
7. ರೇಷ್ಮೆ ನಗರ ಎಂದು ಪ್ರಸಿದ್ಧಿ ಪಡೆದ ಊರು (5)
8. ಹಾಡುಗಾರ ಇಲ್ಲಿದ್ದಾನೆ (3)
11. ದಾರಿಯ ಕೊನೆಯಲ್ಲಿ ಪಡೆದುಕೊಂಡಿರುವ ಅಪ್ಪಣೆಚೀಟಿ (4)
13. ಕುಮಾರವ್ಯಾಸ ಹುಟ್ಟಿದ ಜಿಲ್ಲೆಯಿದು (3)
16. ಸಂತತಿಯಲ್ಲಿರುವ ಋಷಿ ಕಾಣುತ್ತಿದ್ದಾನೆಯೇ? (2)

### ಉತ್ತರ

**ಎಡದಿಂದ ಬಲಕ್ಕೆ**

1. ಕಸ್ತೂರಿ 3. ಬೆವರು 4. ವಾದ್ಯ 5. ಕಾರ್ಕಳ 6. ಮಂಜು 9. ಸುಮ 10. ವಿಜಯಪುರ 12. ಬಿಲ 13. ಗರ 14. ದಾತಾರ 15. ಪದ 16. ಸಂಚಾರಿ 17. ಗಣಿತ

**ಮೇಲಿಂದ ಕೆಳಕ್ಕೆ**

1. ಕರು 2. ರಿವಾಜು 3. ಬೆಳಗಾವಿ 5. ಕಾಮನಬಿಲ್ಲು 7. ರಾಮನಗರ 8. ಗಾಯಕ 11. ರಹದಾರಿ 13. ಗದಗ 16. ಸಂತ

**–: ಸೂಚನೆ :–**

ಲೇಖನಗಳನ್ನು ಬರೆಯುವ ಆಸಕ್ತರು ವಾರ್ತಾ ಜನಪದಕ್ಕೆ ಲೇಖನಗಳನ್ನು ಕಳುಹಿಸಬಹುದು. ಸರ್ಕಾರದ ಯೋಜನೆಗಳು, ಅಭಿವೃದ್ಧಿಗಳು, ಪ್ರಗತಿಪರ ರೈತರ ಯಶೋಗಾಥೆ, ಜನಜಾಗೃತಿ ಮೂಡಿಸುವ ವಿಚಾರಗಳು, ಕರ್ನಾಟಕದ ಪ್ರೇಕ್ಷಣೀಯ ಸ್ಥಳಗಳು, ಕರ್ನಾಟಕದ ಇತಿಹಾಸ ಸಾರುವ ಗತ ವೈಭವಗಳು, ವಿವಿಧ ವಲಯದಲ್ಲಿ ಸಾಧನೆ ಮಾಡಿರುವ ರಾಜ್ಯದ ಸಾಧಕರ ಪರಿಚಯ ಇಂತಹ ವಿಷಯಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು.

ನುಡಿ ತಂತ್ರಾಂಶದಲ್ಲಿ ಟೈಪ್ ಮಾಡಿದ ಕನಿಷ್ಠ 500 ಪದಗಳಿಂದ 750 ಪದಗಳಿಗೆ ಮೀರದಂತೆ ಲೇಖನವನ್ನು ಪೂರಕವಾದ ಛಾಯಾಚಿತ್ರದೊಂದಿಗೆ ನಮ್ಮ ಇ–ಮೇಲ್ ವಿಳಾಸ janapada2008@gmail.comಗೆ ಕಳುಹಿಸಬಹುದು. ಲೇಖನಗಳ ಆಯ್ಕೆ ತೀರ್ಮಾನ ಅಂತಿಮವಾಗಿ ಸಂಪಾದಕ ಮಂಡಳಿಯದಾಗಿರುತ್ತದೆ. ಲೇಖನದ ಜೊತೆಗೆ ತಮ್ಮ ಹೆಸರು ವಿಳಾಸ ಮತ್ತು ದೂರವಾಣಿಯನ್ನು ನಮೂದಿಸತಕ್ಕದ್ದು.

Published by : Hemanth M Nimbalkar, IPS, Commissioner, Department of Information & Public Relation, 17, Varthasoudha, Bhagwan Mahaveer Road, Bangalore - 560 001
Printed at :M/s Lavanya Mudrana, #19, Vidyapeeta Circle, Banashankari 1st Stage, Bangalore-560050

Downloaded From:www.kpscvaani.com



ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಡಿಸೆಂಬರ್ 16 ರಂದು
ವಿಜಯ ದಿವಸದ ಅಂಗವಾಗಿ ಬೆಂಗಳೂರಿನಲ್ಲಿ ರಾಷ್ಟ್ರೀಯ ಮಿಲಿಟರಿ ಸ್ಮಾರಕಕ್ಕೆ ಭೇಟಿ ನೀಡಿ ನಮನ ಸಲ್ಲಿಸಿದ ಸಂದರ್ಭ.

Downloaded From:www.kpscvaani.com

RNI No. KAR/KAN/2017/75029

Regd No.KA/BGGPO/2583/2021-23 Licensed to post without prepayment Licence No. PMG/BG/ WPP-365/2021-23
Published on 27th, Dt. 29th & 30th Posted at (Every month), Bangalore PSO, Mysore Road, Bangalore - 26




## 2024ನೇ ಇಸವಿಯ ಸಂಕ್ಷಿಪ್ತ ಕ್ಯಾಲೆಂಡರ್

| ತಿಂಗಳುಗಳು | | | | | | | | | | | |
|---|---|---|---|---|---|---|---|---|---|---|---|
| ಸೆಪ್ಟೆಂಬರ್ ಡಿಸೆಂಬರ್ | ಜನವರಿ ಏಪ್ರಿಲ್ ಜುಲೈ | ಅಕ್ಟೋಬರ್ | ಮೇ | ಫೆಬ್ರವರಿ ಆಗಸ್ಟ್ | ಮಾರ್ಚ್ ನವೆಂಬರ್ | ಜೂನ್ | | | | | |
| ವಾರಗಳು | | | | | | | ತಾರೀಖು | | | | |
| ಭಾನು | ಸೋಮ | ಮಂಗಳ | ಬುಧ | ಗುರು | ಶುಕ್ರ | ಶನಿ | ೧ | ೮ | ೧೫ | ೨೨ | ೨೯ |
| ಸೋಮ | ಮಂಗಳ | ಬುಧ | ಗುರು | ಶುಕ್ರ | ಶನಿ | ಭಾನು | ೨ | ೯ | ೧೬ | ೨೩ | ೩೦ |
| ಮಂಗಳ | ಬುಧ | ಗುರು | ಶುಕ್ರ | ಶನಿ | ಭಾನು | ಸೋಮ | ೩ | ೧೦ | ೧೭ | ೨೪ | ೩೧ |
| ಬುಧ | ಗುರು | ಶುಕ್ರ | ಶನಿ | ಭಾನು | ಸೋಮ | ಮಂಗಳ | ೪ | ೧೧ | ೧೮ | ೨೫ | * |
| ಗುರು | ಶುಕ್ರ | ಶನಿ | ಭಾನು | ಸೋಮ | ಮಂಗಳ | ಬುಧ | ೫ | ೧೨ | ೧೯ | ೨೬ | * |
| ಶುಕ್ರ | ಶನಿ | ಭಾನು | ಸೋಮ | ಮಂಗಳ | ಬುಧ | ಗುರು | ೬ | ೧೩ | ೨೦ | ೨೭ | * |
| ಶನಿ | ಭಾನು | ಮಂಗಳ | ಬುಧ | ಗುರು | ಶುಕ್ರ | ಶನಿ | ೭ | ೧೪ | ೨೧ | ೨೮ | * |

* ಫೆಬ್ರವರಿ – 29 ದಿನಗಳು

ರಚನೆ : ಜಿ.ಡಿ. ಲಕ್ಷ್ಮೀ ನಾರಾಯಣ್, ಗಡ್ಡಂ ಬಚ್ಚಹಳ್ಳಿ

Downloaded From:www.kpscvaani.com